
ಗುರುವಾರ, ಆಗಸ್ಟ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 229 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವವರು ಹೆಚ್ಚು ಹೆಚ್ಚು ಅಣಕು ಪರೀಕ್ಷೆ ಬರೆಯುವುದರಿಂದ ಮುಖ್ಯ ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಬಹುದು.



ಆಳ-ಅಗಲ
ಲಂಕಾ ತಟದಲ್ಲಿ ಚೀನಾ ಸೇನಾ ಹಡಗು

ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ: ಬಿಎಸ್‌ವೈ 6

ಮತ್ತೆ 60 ಸಾವಿರ ಗಡಿ ದಾಟಿದ ಸೆನ್ಸೆಕ್ಸ್ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,260 ▲	17,944 ▲	₹ 53,700 (ಬೆಂಗಳೂರು) ▼	₹ 59,300 (ಬೆಂಗಳೂರು) ▼	79.45 ▲

1945ರಲ್ಲಿ ಶುರುವಾದ ಚಿಕ್ಕಪೇಟೆ ಶಾಲೆ: ಶಿಕ್ಷಣ ಇಲಾಖೆ ಆಕ್ಷೇಪದ ಮಧ್ಯೆಯೂ ಡಿ.ಸಿ ಪ್ರಸ್ತಾವನೆ

ಸರ್ಕಾರಿ ಶಾಲೆ ಮಾರಾಟಕ್ಕಿದೆ!

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವಾತಂತ್ರ್ಯಪೂರ್ವದಲ್ಲಿ ಆರಂಭವಾಗಿದ್ದ ಚಿಕ್ಕಪೇಟೆಯ ಸರ್ಕಾರಿ ಪ್ರೌಢಶಾಲೆಯ ಕಟ್ಟಡವನ್ನು ಜಾಗದ ಸಮೇತ ಮಾರಾಟ ಮಾಡಲು ಕಂದಾಯ ಇಲಾಖೆ ಮುಂದಾಗಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ಶಿಕ್ಷಣ ಇಲಾಖೆಯ ತಕರಾರನ್ನೂ ಲೆಕ್ಕಿಸದೇ ಬಹುಕೋಟಿ ಮೌಲ್ಯದ ಆಸ್ತಿಯನ್ನು ಮಾರಾಟ ಅಥವಾ ಹರಾಜು ಹಾಕಲು ನಿರ್ದೇಶನ ನೀಡುವಂತೆ ಕೋರಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಕಂದಾಯ ಇಲಾಖೆಗೆ ಪತ್ರ ಬರೆದಿದ್ದಾರೆ. ನಗರದ ಬಹುಕೋಟಿ ಬೆಲೆ ಬಾಳುವ ಪ್ರದೇಶದಲ್ಲಿರುವ ಈ ಆಸ್ತಿಯು, ಶಾಲೆಗಾಗಿಯೇ ದಾನಿಗಳು ನೀಡಿದ ಜಾಗವಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್, ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗಳು ಪ್ರತ್ಯೇಕವಾಗಿ ಶಾಲೆ ಇರುವ ಜಾಗ ಮತ್ತು ಕಟ್ಟಡದ ಮಾರುಕಟ್ಟೆ ಮೌಲ್ಯವನ್ನು ನಿಗದಿ ಮಾಡಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದಾರೆ. ಕಂದಾಯ ಇಲಾಖೆ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಸರ್ಕಾರಿ ಶಾಲೆಯ ಭವಿಷ್ಯವೂ ನಿಂತಿದೆ.

ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಪೇಟೆ ಒಟಿಸಿ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆ 77 ವರ್ಷಗಳಷ್ಟು ಹಳೆಯದು. 13,735 ಚದರಡಿ ವಿಸ್ತೀರ್ಣದ ಮೈದಾನದಲ್ಲಿ 1945ರಲ್ಲೇ ಪ್ರಾಥಮಿಕ, ಮಾಧ್ಯಮಿಕ ಶಾಲೆ ಆರಂಭವಾಗಿದ್ದವು. ಸ್ವಾತಂತ್ರ್ಯಾ ನಂತರ ಅದೇ ಜಾಗದಲ್ಲಿ ಪ್ರೌಢಶಾಲೆಯನ್ನೂ ತೆರೆಯಲಾಗಿತ್ತು. ಸದ್ಯ ಇಲ್ಲಿನ ಪ್ರತಿ ಚದರಡಿಗೆ ₹40 ಸಾವಿರದಷ್ಟು ಮಾರುಕಟ್ಟೆ ಮೌಲ್ಯ ಇದೆ.

ಸೇವೆಯ ನೆಪದಲ್ಲಿ ಆಸ್ತಿ ವಶಕ್ಕೆ: ಶಿಥಿಲಾವಸ್ಥೆಯಲ್ಲಿದ್ದ ಶಾಲಾ ಕೊಠಡಿಗಳನ್ನು ಕೆಡವಿ, ಹೊಸ ಕೊಠಡಿ ನಿರ್ಮಿಸಿಕೊಡಲು ಅವಕಾಶ ಕೋರಿ 1979ರಲ್ಲಿ ರಜತಾ ಎಂಟರ್ ಪ್ರೈಸಸ್ ಎಂಬ ಖಾಸಗಿ ಸಂಸ್ಥೆಯೊಂದು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಸಂಸ್ಥೆಯ ಮನವಿ ಪುರಸ್ಕರಿಸಿದ ಸರ್ಕಾರ ನೆಲ ಹಾಗೂ ಮೊದಲ ಮಹಡಿಯಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಲು, ಎರಡನೇ ಮಹಡಿಯಲ್ಲಿ ಶಾಲೆಗಳಿಗೆ ಕೊಠಡಿ ನಿರ್ಮಿಸಿಕೊಡಲು ಒಪ್ಪಂದ ಮಾಡಿಕೊಂಡು ತಿಂಗಳಿಗೆ ₹ 16,350ರಂತೆ 26 ವರ್ಷಗಳಿಗೆ ಶಾಲಾ ಜಾಗವನ್ನು ಗುತ್ತಿಗೆ ನೀಡಿತ್ತು.

ಗುತ್ತಿಗೆ ಅವಧಿ 2005ಕ್ಕೆ ಮುಕ್ತಾಯವಾದ ನಂತರ ಕೋರ್ಟ್ ಪ್ರಕರಣಗಳನ್ನು ಇತ್ಯರ್ಥ ಮಾಡಿಕೊಂಡು, ನಂತರ ರಜತಾ ಕಾಂಪ್ಲೆಕ್ಸ್ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಸಂಘಕ್ಕೆ 2011ರಲ್ಲಿ ತಿಂಗಳು ₹ 6.41 ಲಕ್ಷಕ್ಕೆ 10 ವರ್ಷಗಳಿಗೆ ಗುತ್ತಿಗೆ ನೀಡಿತ್ತು. ಈ ಅವಧಿಯೂ 2021 ಜೂನ್‌ಗೆ ಮುಕ್ತಾಯವಾಗಿದೆ. ಶಾಲೆಯ ಜಾಗದಲ್ಲಿ ಪ್ರಸ್ತುತ ನಾಲ್ಕು ಮಹಡಿಗಳ ಕಟ್ಟಡವಿದೆ. ನೆಲ ಮಹಡಿಯಲ್ಲಿ 141 ಮಳಿಗೆಗಳಿವೆ. ಎರಡನೇ ಮಹಡಿಯಲ್ಲಿ ಶಾಲೆ ಇದ್ದರೆ, ಉಳಿದೆಡೆ ಬ್ಯಾಂಕ್, ವಸತಿ ಗೃಹಗಳಿವೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಸಕ್ತ ವರ್ಷದಲ್ಲಿ ಸರ್ಕಾರಿ ಶಾಲೆ ಮತ್ತು ಕಾಲೇಜು ಆಸ್ತಿ ಸಂರಕ್ಷಣಾ ಅಭಿಯಾನಕ್ಕೆ ಚಾಲನೆ ನೀಡಿದ್ದು, ಕಟ್ಟಡವನ್ನು ಶಾಲೆಯ ಹೆಸರಿಗೆ ಖಾತೆ ಮಾಡಿಕೊಡುವಂತೆ ಶಾಲೆಯ ಮುಖ್ಯ ಶಿಕ್ಷಕರು ಸಲ್ಲಿಸಿದ ಮನವಿಯನ್ನೂ ಕಂದಾಯ ಇಲಾಖೆ ಪುರಸ್ಕರಿಸಿಲ್ಲ.



ಬೆಂಗಳೂರಿನ ಚಿಕ್ಕಪೇಟೆ ಸರ್ಕಾರಿ ಶಾಲೆಯ ಕಟ್ಟಡ.

ದಾನಿಗಳು ನೀಡಿದ ಜಾಗ. ಆಗ ದಾಖಲೆಗಳನ್ನು ನಿರ್ವಹಣೆ ಮಾಡಿಲ್ಲ. 1979ರಲ್ಲಿ ಸರ್ಕಾರ ಖಾಸಗಿಗೆ ನೀಡಿತ್ತು. ಈಗ ಸರ್ಕಾರದ ವಶದಲ್ಲಿದೆ. ತಕ್ಷಣ ಶಾಲೆಯ ಹೆಸರಿಗೆ ಖಾತೆ ಮಾಡಿಕೊಡಲು ಸೂಚಿಸಲಾಗಿದೆ

ಬಿ.ಸಿ.ನಾಗೇಶ್,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಶಾಲೆಗೆ ಸೇರಿದ ಜಾಗ ಎಂದು ದೃಢೀಕರಿಸುವ ದಾಖಲೆಗಳ ಕೊರತೆ ಇದೆ. ಗುತ್ತಿಗೆ ಪಡೆದವರು ಕ್ರಯಕ್ಕೆ ನೀಡುವಂತೆ ಮನವಿ ಮಾಡಿದ್ದಾರೆ. ಡಿ.ಸಿ ಪತ್ರ ತಲುಪಿದೆ. ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಎಸ್.ಆರ್.ಉಮಾಶಂಕರ್,
ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ

ಮೌಲ್ಯ ನಿಗದಿಯಲ್ಲೂ ಭಾರಿ ವ್ಯತ್ಯಾಸ

ಸ್ವತ್ತಿನ ಮಾರುಕಟ್ಟೆ ಮೌಲ್ಯ ಕುರಿತು ತಹಶೀಲ್ದಾರ್ ಹಾಗೂ ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗಳು ನೀಡಿದ ವರದಿಯಲ್ಲಿ ಭಾರಿ ವ್ಯತ್ಯಾಸ ಇದೆ. ತಹಶೀಲ್ದಾರ್ ₹ 27 ಕೋಟಿ ನಮೂದಿಸಿದರೆ, ಲೋಕೋಪಯೋಗಿ ಇಲಾಖೆ ₹ 50.45 ಕೋಟಿ ನಿಗದಿ ಮಾಡಿದೆ.

₹ 13.49 ಕೋಟಿ ತೆರಿಗೆ ಬಾಕಿ!

ಸರ್ಕಾರ ಚಿಕ್ಕಪೇಟೆ ಸರ್ಕಾರಿ ಶಾಲೆ ಜಾಗವನ್ನು ತಿಂಗಳಿಗೆ ₹ 16,350ರಂತೆ 26 ವರ್ಷಗಳು, ತಿಂಗಳಿಗೆ ₹ 6.41 ಲಕ್ಷದಂತೆ 10 ವರ್ಷಗಳಿಗೆ ಗುತ್ತಿಗೆ ನೀಡಿದೆ. ಆದರೆ, ಈ ಗುತ್ತಿಗೆದಾರರು ಬಿಬಿಎಂಪಿಗೆ 2008-09ನೇ ಸಾಲಿನಿಂದ ಬಾಕಿ ಉಳಿಸಿಕೊಂಡಿರುವ ವಾರ್ಷಿಕ ತೆರಿಗೆ ಮೊತ್ತವೇ ₹ 13.49 ಕೋಟಿ ಇದೆ.

ಭರವಸೆ ನೀಡದಂತೆ ಪಕ್ಷಗಳನ್ನು ತಡೆಯಲಾಗದು: ‘ಸುಪ್ರೀಂ’

ಉಚಿತ ಕೊಡುಗೆ ಘೋಷಿಸುವ ಪಕ್ಷದ ಮಾನ್ಯತೆ ರದ್ದತಿ ಕೋರಿ ಪಿಐಎಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮತದಾರರಿಗೆ ಭರವಸೆಗಳನ್ನು ನೀಡದಂತೆ ರಾಜಕೀಯ ಪಕ್ಷಗಳನ್ನು ತಡೆಯಲು ಸಾಧ್ಯವಿಲ್ಲ. ಆದರೆ, ಯಾವುದು ಸೂಕ್ತ ಭರವಸೆಯಾಗುತ್ತದೆ ಹಾಗೂ ಯಾವುದು ಉಚಿತ ಕೊಡುಗೆ ಎನಿಸುತ್ತದೆ ಎಂಬ ಬಗ್ಗೆ ಚರ್ಚೆ ಅಗತ್ಯ’ ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಹಾಗೂ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ, ‘ಈ ವಿಷಯ ಮತ್ತಷ್ಟು ಸಂಕೀರ್ಣವಾಗುತ್ತಿದೆ. ಸಮರ್ಪಕವಾದ ಭರವಸೆಗಳು ಏನನ್ನು ಒಳಗೊಂಡಿರುತ್ತವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ’ ಎಂದು ಹೇಳಿತು.

ಉಚಿತ ಕೊಡುಗೆ ನೀಡುವುದಾಗಿ ಘೋಷಣೆ ಮಾಡಿದ ಪಕ್ಷಗಳ ಮಾನ್ಯತೆ ರದ್ದು ಮಾಡಬೇಕು ಎಂದು ಕೋರಿ ಬಿಜೆಪಿ ಮುಖಂಡ, ವಕೀಲ ಅಶ್ವಿನಿಕುಮಾರ್ ಉಪಾಧ್ಯಾಯ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸಲ್ಲಿಸಿದ್ದಾರೆ.

‘ಸಾರ್ವತ್ರಿಕ ಆರೋಗ್ಯ ಸೇವೆ, ಕುಡಿಯುವ ನೀರು ಹಾಗೂ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ಕೊಡುವುದಾಗಿ ರಾಜಕೀಯ ಪಕ್ಷಗಳು ನೀಡುವ ಭರವಸೆಗಳನ್ನು ಉಚಿತ ಕೊಡುಗೆಗಳೆಂದು ಭಾವಿಸಬಹುದೇ ಎಂಬ ಬಗ್ಗೆ ಪರಾಮರ್ಶೆ ಅಗತ್ಯ’ ಎಂದೂ ನ್ಯಾಯಪೀಠ ಹೇಳಿತು.

‘ಕೆಲವು ಯೋಜನೆಗಳಿಂದ ಜನರು ಗೌರವಯುತ ಜೀವನ ನಡೆಸಬಹುದಾಗಿದೆ. ಅಂಥ ಯೋಜನೆಗಳ ಲಾಭ ಪಡೆಯುವುದು ಸಹ ಜನರ ಹಕ್ಕುಗಳಾಗುತ್ತವೆ’ ಎಂದು ಪೀಠ ಪ್ರತಿಪಾದಿಸಿತು.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



75 ವರ್ಷ ದಾಟಿದವರಿಗೆ ಮತ್ತೆ ಮಣೆ • ಪಕ್ಷದಲ್ಲಿ ಚರ್ಚೆಗೆ ಗ್ರಾಸ

ಬಿಜೆಪಿ ಸಂಸದೀಯ ಮಂಡಳಿಗೆ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಲಿಂಗಾಯತ ಮತ ಬ್ಯಾಂಕ್ ಮೇಲೆ ಕಣ್ಣು
- ರಾಜ್ಯಕ್ಕೆ ಅಮಿತ್ ಶಾ ಭೇಟಿ ನೀಡಿದ ಬೆನ್ನಲ್ಲೇ ನಡೆದ ಬೆಳವಣಿಗೆ
- ಶಿವರಾಜ ಸಿಂಗ್ ಚೌಹಾಣ್, ಯೋಗಿ ಆದಿತ್ಯನಾಥ, ನಿತಿನ್ ಗಡ್ಕರಿಗೆ ಸಿಗದ ಸ್ಥಾನ

ನವದೆಹಲಿ: 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಕೇಂದ್ರ ನಾಯಕತ್ವವು, ನಿರ್ಣಾಯಕ ತೀರ್ಮಾನ ಕೈಗೊಳ್ಳುವ ಅಧಿಕಾರ ಹೊಂದಿರುವ ಕೇಂದ್ರ ಸಂಸದೀಯ ಮಂಡಳಿ ಹಾಗೂ ಕೇಂದ್ರ ಚುನಾವಣಾ ಸಮಿತಿಗೆ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಸೇರ್ಪಡೆ ಮಾಡಿದೆ.

ಬಿ.ಎಸ್. ಯಡಿಯೂರಪ್ಪ ಅವರು 2021ರ ಜುಲೈ 26ರಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಅವರಿಗೆ ಪಕ್ಷದಲ್ಲಿ ಯಾವುದೇ ಸ್ಥಾನಮಾನ ನೀಡಿರಲಿಲ್ಲ. ಪಕ್ಷ ಸಂಘಟನೆಗಾಗಿ ರಾಜ್ಯ ಪ್ರವಾಸ ನಡೆಸಲು ಸಿದ್ಧತೆ ನಡೆಸಿದ್ದರು. ಇದಕ್ಕೂ ವರಿಷ್ಠರು ಒಪ್ಪಿಗೆ ನೀಡಿರಲಿಲ್ಲ. ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬ ಅಪೇಕ್ಷೆ ಅವರದ್ದು ಆಗಿತ್ತು. ಅದಕ್ಕೂ ವರಿಷ್ಠರು ಮಣೆ ಹಾಕಿರಲಿಲ್ಲ. ಈ ಎಲ್ಲ ಬೆಳವಣಿಗೆಗಳಿಂದ ಯಡಿಯೂರಪ್ಪ ಅಸಮಾಧಾನಗೊಂಡಿದ್ದರು.

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಜನ್ಮದಿನದ ಅಂಗವಾಗಿ ದಾವಣಗೆರೆಯಲ್ಲಿ ನಡೆದಿದ್ದ ಕಾರ್ಯಕ್ರಮದ ಯಶಸ್ಸು ಬಿಜೆಪಿಯಲ್ಲಿ ಚರ್ಚೆ ಹುಟ್ಟು ಹಾಕಿತ್ತು. ಆ ವೇಳೆಯಲ್ಲಿಯೇ ಬೆಂಗಳೂರಿಗೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಪಕ್ಷದಲ್ಲಿನ ಬೆಳವಣಿಗೆಗಳ ಕುರಿತು ಸಮಾಲೋಚನೆ ನಡೆಸಿದ್ದರು. ಪಕ್ಷ ಹಾಗೂ ಸರ್ಕಾರದ ವೈಫಲ್ಯದ ಬಗ್ಗೆ ಯಡಿಯೂರಪ್ಪ ಅವರು ಶಾ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಮರಳಿ ಅಧಿಕಾರ ಹಿಡಿಯುವುದು ಕಷ್ಟ ಎಂದೂ ಪ್ರತಿಪಾದಿಸಿದ್ದರು.

ಈ ಬೆಳವಣಿಗೆಗಳ ಬೆನ್ನಲ್ಲೇ, ಯಡಿಯೂರಪ್ಪ ಅವರಿಗೆ ಪಕ್ಷದಲ್ಲಿ ಮಹತ್ವದ ಸ್ಥಾನವನ್ನು ನೀಡಲಾಗಿದೆ.



ಯಡಿಯೂರಪ್ಪ

ಯಡಿಯೂರಪ್ಪ ಮುನಿಸಿನಿಂದ ವಿಧಾನಸಭಾ ಚುನಾವಣೆಯಲ್ಲಿ ಲಿಂಗಾಯತ ಮತ ಬ್ಯಾಂಕ್ ಮೇಲೆ ಪರಿಣಾಮ ಬೀರಬಹುದು ಎಂಬ ಭೀತಿಯೂ ಈಗಿನ ನೇಮಕದ ಹಿಂದಿದೆ ಎಂದೂ ವಿಶ್ಲೇಷಿಸಲಾಗಿದೆ.

ಕೇಂದ್ರ ಸಚಿವರಾಗಿದ್ದ ಅನಂತ ಕುಮಾರ್ ಅವರು ಈ ಹಿಂದೆ ಸಂಸದೀಯ ಮಂಡಳಿಯ ಸದಸ್ಯರಾಗಿದ್ದರು. ಬಿ.ಎಲ್.ಸಂತೋಷ್ ಅವರು ನಾಲ್ಕು ವರ್ಷಗಳಿಂದ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿಯ ಸದಸ್ಯರಾಗಿದ್ದಾರೆ.

ಜೆ.ಪಿ.ನಡ್ಡಾ ಅಧ್ಯಕ್ಷರಾದ ಬಳಿಕ ಸಂಸದೀಯ ಸಮಿತಿಯನ್ನು ಮೊದಲ ಬಾರಿಗೆ ಪುನರ್ ರಚಿಸಲಾಗಿದೆ. ಸಂಸದೀಯ ಮಂಡಳಿಯಿಂದ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಹಾಗೂ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ಅವರನ್ನು ಕೈಬಿಡಲಾಗಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೂ ಸಂಸದೀಯ ಮಂಡಳಿಯಲ್ಲಿ ಸ್ಥಾನ ಸಿಕ್ಕಿಲ್ಲ. ಯಡಿಯೂರಪ್ಪ ಅವರ ಜತೆಗೆ ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್, ಮುಖಂಡ ಕೆ. ಲಕ್ಷ್ಮಣ, ಇಕ್ಬಾಲ್ ಸಿಂಗ್ ಲಾಲ್‌ಪುರ, ಸುಧಾ ಯಾದವ್, ಸತ್ಯನಾರಾಯಣ ಜಟಿಯಾ ಮಂಡಳಿಗೆ ಸೇರ್ಪಡೆಯಾಗಿದ್ದಾರೆ. ಚುನಾವಣಾ ಸಮಿತಿಗೆ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹಾಗೂ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರನ್ನು ಸೇರ್ಪಡೆ ಮಾಡಲಾಗಿದೆ.

75 ವರ್ಷ ದಾಟಿರುವ ಯಡಿಯೂರಪ್ಪ,ಸತ್ಯನಾರಾಯಣ ಜಟಿಯಾ ಅವರಿಗೆ ಸಂಸದೀಯ ಮಂಡಳಿಯಲ್ಲಿ ಸ್ಥಾನ ನೀಡಿರುವುದು ಪಕ್ಷದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು, 75 ವರ್ಷ ದಾಟಿದವರಿಗೆ ಪಕ್ಷದಲ್ಲಿ ಪ್ರಮುಖ ಹುದ್ದೆಗಳನ್ನು ನೀಡಬಾರದು ಎಂಬ ತೀರ್ಮಾನಕ್ಕೆ ಬಂದಿದ್ದರು. ಅದೇ ಕಾರಣಕ್ಕೆ ಹಿರಿಯ ನಾಯಕರಾದ ಲಾಲ್‌ಕೃಷ್ಣ ಅಡ್ವಾಣಿ ಹಾಗೂ ಮುರಳಿ ಮನೋಹರ ಜೋಷಿ ಅವರನ್ನು ಸಂಸದೀಯ ಮಂಡಳಿಯಿಂದ ಕೈ ಬಿಡಲಾಗಿತ್ತು. ಅವರಿಗೆ ‘ಮಾರ್ಗದರ್ಶಕ’ರ ಹೊಣೆ ವಹಿಸಲಾಗಿತ್ತು.



ತಂಬ್ರಹಳ್ಳಿಯಲ್ಲಿ ಪದವಿ ಕಾಲೇಜು ಸ್ಥಾಪಿಸುವಂತೆ ಆಗ್ರಹಿಸಿ ಗ್ರಾಮದ ವಿದ್ಯಾರ್ಥಿಗಳು, ಗ್ರಾಮಸ್ಥರು ಹೊಸಪೇಟೆಯವರೆಗೆ ಬುಧವಾರ ಪಾದಯಾತ್ರೆ ನಡೆಸಿದರು – ಪ್ರಜಾವಾಣಿ ಚಿತ್ರ

ಪದವಿ ಕಾಲೇಜಿಗಾಗಿ 35 ಕಿ.ಮೀ ಪಾದಯಾತ್ರೆ!

ಹೊಸಪೇಟೆ (ವಿಜಯನಗರ): ಪದವಿ ಕಾಲೇಜು ಸ್ಥಾಪಿಸಬೇಕು ಹಾಗೂ 2ನೇ ಹಂತದ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯ ಗ್ರಾಮಸ್ಥರು, ನೂರಾರು ವಿದ್ಯಾರ್ಥಿಗಳು ಬುಧವಾರ ಮರಿಯಮ್ಮನಹಳ್ಳಿಯವರೆಗೆ 35 ಕಿ.ಮೀ. ಪಾದಯಾತ್ರೆ ನಡೆಸಿದರು.

ಬೆಳಿಗ್ಗೆ 6.30ಕ್ಕೆ ತಂಬ್ರಹಳ್ಳಿಯಿಂದ ಹೊರಟು ಮಧ್ಯಾಹ್ನ ಮರಿಯಮ್ಮನಹಳ್ಳಿ ತಲುಪಿದರು. ಸುರಕ್ಷತೆಯ ದೃಷ್ಟಿಯಿಂದ, ಹೊಸಪೇಟೆಯವರೆಗೆ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಪಾದಯಾತ್ರೆಗೆ ಪೊಲೀಸರು ಅವಕಾಶ ನೀಡಲಿಲ್ಲ. ನಗರದ ಹೊರವಲಯದವರೆಗೆ 15 ಕಿ.ಮೀ ವಾಹನಗಳಲ್ಲಿ ಬಂದಿಳಿದರು.

ಬಳಿಕ ಅಲ್ಲಿಂದ ಪಾದಯಾತ್ರೆ ಮೂಲಕ ಡಿ.ಸಿ ಕಚೇರಿವರೆಗೆ ತೆರಳಿ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ಅವರಿಗೆ ಮನವಿ ಸಲ್ಲಿಸಿದರು.

‘ತಂಬ್ರಹಳ್ಳಿಗೆ ಪದವಿ ಕಾಲೇಜು ಬೇಕು ಎಂಬುದು ಆರು ವರ್ಷಗಳ ಬೇಡಿಕೆಯಾಗಿದೆ. ಇದಕ್ಕೆ ಸ್ಪಂದಿಸದೇ ಇದ್ದುದರಿಂದ ಅನಿವಾರ್ಯವಾಗಿ ಪಾದಯಾತ್ರೆ ಕೈಗೊಳ್ಳಬೇಕಾಯಿತು. ಕಾಲೇಜು ಸ್ಥಾಪನೆಗೆ ಕೂಡಲೇ ಕ್ರಮ ಕೈಗೊಳ್ಳದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು’ ಎಂದು ಪಾದಯಾತ್ರೆಯ ಸಂಚಾಲಕ ಅಕ್ಕಿ ತೋಟೇಶ್ ಎಚ್ಚರಿಸಿದರು.

‘ಪದವಿ ಕಾಲೇಜು ಸ್ಥಾಪಿಸಿದರೆ ತಂಬ್ರಹಳ್ಳಿ ಹಾಗೂ ಸುತ್ತಲಿನ ಗ್ರಾಮದ ಮಕ್ಕಳಿಗೆ ಅನುಕೂಲವಾಗುತ್ತದೆ. ಪದವಿಗಾಗಿ ದೂರದ ಊರುಗಳಿಗೆ ಹೋಗಲಾಗದೆ ಅನೇಕರು ಶಿಕ್ಷಣವನ್ನೇ ಮೊಟಕುಗೊಳಿಸುತ್ತಿದ್ದಾರೆ’ ಎಂದರು.

ಗ್ರಾಮದಲ್ಲಿ ಎರಡನೇ ಹಂತದ ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಗ್ರಾಮ ಪಂಚಾಯ್ತಿ ಸದಸ್ಯರು ಕೂಡ ಸಾಥ್ ನೀಡಿದರು.

ಶ್ರೀಕೃಷ್ಣ ಜನ್ಮಾಷ್ಟಮಿ: ನಾಳೆ ಪ್ರಾಣಿವಧೆ, ಮಾಂಸ ಮಾರಾಟ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಕೃಷ್ಣ ಜನ್ಮಾಷ್ಟಮಿ ದಿನದ ಪ್ರಯುಕ್ತ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಆಗಸ್ಟ್19ರ ಶುಕ್ರವಾರದಂದು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಂಟಿ ನಿರ್ದೇಶಕರು ಬುಧವಾರ ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ 01.08.2022ರಂದು **ಪ್ರಕಟಗೊಂಡಿದ್ದ ಇ–ಹರಾಜು ಪ್ರಕಟಣೆ ಸಂಖ್ಯೆ : ಬೆಂಅಪ್ರಾ/ಅಸ/ಇ–ಹರಾಜು/ಟಿ–03/2022–23, ದಿನಾಂಕ 14.07.2022**ಕ್ಕೆ ಸಂಬಂಧಿಸಿದಂತೆ ಕೆಳಕಂಡ ತಿದ್ದುಪಡಿ ಮಾಡಲಾಗಿದೆ. ತಾಂತ್ರಿಕ ತೊಂದರೆಯ ಕಾರಣದಿಂದಾಗಿ 1) 16.08.2022ರಂದು ಆಸಕ್ತಿ ವ್ಯಕ್ತಪಡಿಸಲು ಮುಕ್ತಾಯಗೊಳಿಸುವ ಇ–ಹರಾಜುಗಳನ್ನು **05.09.2022, ಸಂಜೆ 6.00 ಗಂಟೆಗೆ ಮುಂದೂಡಲಾಗಿದೆ.** 2) 17.08.2022ರಂದು ಆಸಕ್ತಿ ವ್ಯಕ್ತಪಡಿಸಲು ಮುಕ್ತಾಯಗೊಳಿಸುವ ಇ–ಹರಾಜುಗಳಿಗೆ ಸಂಬಂಧಿಸಿದಂತೆ **ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು 05.09.2022, ಸಂಜೆ 6.00 ಗಂಟೆ** ಮತ್ತು **ಇ–ಹರಾಜು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯವನ್ನು 06.09.2022, ಸಂಜೆ 6.00 ಗಂಟೆಗೆ ಮುಂದೂಡಲಾಗಿದೆ.** 3) 18.08.2022ರಂದು ಆಸಕ್ತಿ ವ್ಯಕ್ತಪಡಿಸಲು ಮುಕ್ತಾಯಗೊಳಿಸುವ ಇ–ಹರಾಜುಗಳಿಗೆ ಸಂಬಂಧಿಸಿದಂತೆ **ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು 06.09.2022, ಸಂಜೆ 6.00 ಗಂಟೆ** ಮತ್ತು **ಇ–ಹರಾಜು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯವನ್ನು 07.09.2022, ಸಂಜೆ 6.00 ಗಂಟೆಗೆ ಮುಂದೂಡಲಾಗಿದೆ.** 4) ಕ್ರಮ ಸಂಖ್ಯೆ 1160 ರಿಂದ 1222ರ ನಿವೇಶನಗಳ ಹರಾಜಿಗೆ ಅಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು 02.08.2022, ಸಂಜೆ 6.00 ಗಂಟೆ ಬದಲಾಗಿ **29.08.2022, ಸಂಜೆ 6.00 ಗಂಟೆ ಎಂದು ಓದಿಕೊಳ್ಳುವುದು** ಮತ್ತು ಕ್ರ.ಸಂ.1160 ಹಾಗೂ 1161ರ ಸ್ಥಳದ ಹೆಸರು (3ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–1 ಅನ್ನು **(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–3 ಎಂದು ಓದಿಕೊಳ್ಳುವುದು.** ಇತರೆ ನಿಯಮ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಅನಾನುಕೂಲಕ್ಕಾಗಿ ಬಿಡಿಎ ವಿಷಾದಿಸುತ್ತದೆ.

ಸಹಿ/- ಅಭಿಯಂತರ ಸದಸ್ಯರು

ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರವರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ : STRRPA/TP/CLU/43/2022-23 ದಿನಾಂಕ: 17.08.2022

"ಪ್ರಕಟಣೆ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿಎಂಆರ್ 2016, ದಿನಾಂಕ: 24.06.2016 ರನ್ವಯ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಅಗಸತಿಮ್ಮನಹಳ್ಳಿ ಗ್ರಾಮವು "ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ" ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/194/ಬಿಎಂಆರ್/2016ರ ದಿನಾಂಕ: 20.05.2017ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಎ) (4)ರನ್ವಯ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಹಿಂದಿನ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸರ್ಕಾರದಿಂದ ಅನುಮೋದನೆಯಾಗಿ ಜಾರಿಯಲ್ಲಿರುವ ಮಹಾಯೋಜನೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಆನೇಕಲ್ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013 ದಿ:03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (2) ರನ್ವಯ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4)ರ ಅಡಿಯಲ್ಲಿ ಈ ಕೆಳಕಂಡಂತೆ ಹೊಸದಾಗಿ ಭೂಉಪಯೋಗ ನಿಗಧಿಪಡಿಸುವ ಸಂಬಂಧ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು, ಹೋಬಳಿ, ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಹೊಸದಾಗಿ ನಿಗಧಿಪಡಿಸಲು ಕೋರಿರುವ ಭೂಉಪಯೋಗ
1	2	3	4	5	6	7
1	ಶ್ರೀಮತಿ ಅಮ್ಮಯ್ಯಮ್ಮ ಬಿನ್ ಲೇಟ್ ಮುನಿದಾಸಪ್ಪ, ನಂ. 1ಎ, ಇಂಡ್ಲವಾಡಿಪುರ, ಕಸಬಾ ಹೋಬಳಿ, ತಮ್ಮನಾಯಕನಹಳ್ಳಿ, ಆನೇಕಲ್ ತಾಲ್ಲೂಕು.	ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಅಗಸತಿಮ್ಮನಹಳ್ಳಿ ಗ್ರಾಮ	4	0–27½	ಸಾರ್ವಜನಿಕ/ ಅರೆ ಸಾರ್ವಜನಿಕ	ವಸತಿ
2	ಶ್ರೀಮತಿ ಮಮತ ಕೋಂ. ಲೇಟ್ ತಿಮ್ಮಯ್ಯ, ನಂ. 1ಎ, ಇಂಡ್ಲವಾಡಿಪುರ, ಕಸಬಾ ಹೋಬಳಿ, ತಮ್ಮನಾಯಕನಹಳ್ಳಿ, ಆನೇಕಲ್ ತಾಲ್ಲೂಕು.	ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಅಗಸತಿಮ್ಮನಹಳ್ಳಿ ಗ್ರಾಮ	4	0–27½	ಸಾರ್ವಜನಿಕ/ ಅರೆ ಸಾರ್ವಜನಿಕ	ವಸತಿ

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/1823/Zenkar/2022-23

ಸೆಲ್ಫಿ ಗೀಳು ಯುವಕ ಸಾವು

ಕನಕಪುರ: ತಾಲ್ಲೂಕಿನ ಚುಂಚಿ ಫಾಲ್ಸ್‌ನಲ್ಲಿ ನದಿಯ ಬಂಡೆಯ ಮೇಲೆ ಸೆಲ್ಫಿ ತೆಗೆದುಕೊಳ್ಳಲು ಹೋದ ಬೆಂಗಳೂರಿನ ಯುವಕನೊಬ್ಬ ಕಾಲು ಜಾರಿ ನೀರಿಗೆ ಬಿದ್ದು ಕೊಚ್ಚಿ ಹೋಗಿದ್ದಾನೆ.

ಬೆಂಗಳೂರಿನ ಶಂಕರ ಮಠದ ನಿವಾಸಿ ತಿಮ್ಮೇಗೌಡರ ಪುತ್ರ ಪ್ರವೀಣ್ ಚಂದ್ರ (26) ಮೃತಪಟ್ಟ ಯುವಕ.

Form No.22
General Notice in respect of Interlocutary Application
IN THE HIGH COURT OF KARNATAKAAT BENGALURU
WRIT APPEAL NO. 934/2018 (BDA)

(SUBSTITUTED SERVICE OF NOTICE TO THE RESPONDENT NO.2 BY WAY OF PAPER PUBLICATION VIDE COURT ORDER DATED: 27.07.2022)

Appellant
THE COMMISSIONER
BENGALURU DEVELOPMENT AUTHORITY
CHOWDAIAH ROAD
KUMARA PARK WEST
BENGALURU-560003.
REPRESENTED BY M.S.N.BABU
(LAND ACQUISITION OFFICER)

By Sri. M.V. Charati & others,
Advocates for Appellant

Vs

Respondents
1. STATE OF KARNATAKA REPRESENTED BY ITS PRINCIPAL SECRETARY DEPARTMENT OF HOUSING & URBAN DEVELOPMENT VIKAS SOUDHA, BENGALURU-560001. AND OTHERS.
(R1 & R3 are served)

To:
RESPONDENT No.2
2. SRI. K.M. NARAYANA S/O LATE K.MUNINANJAPPA R/AT NO.115/28, 5TH CROSS 5TH MAIN, KATRIGUPPE BANASHANKARI, 3RD STAGE BENGALURU-560085.

Whereas the above named Appellants has filed writ Appeal under Section 4 of Karnataka High Court Act, 1961, praying to set aside the order dated: 07.10.2017 passed in WP No.42174-175/2017 (BDA).

Notice is hereby given to you to appear in this Court in person or through an advocate or through someone duly authorised to act for you in thsi matter on **22.09.2022 at 10.30 A.M.** to show cause why the application should not be allowed. If you fail to appear, the appliction will be dealt with, heard and decided in your absence.

Issued under my hand and the seal of this court on WEDNESDAY THE 27th DAY OF JULY 2022.

By order of the Court
Assistant Registrar

ಗ್ರಾಮ ವಿದ್ಯುತ್ ಪ್ರತಿನಿಧಿಗಳ ಪ್ರೋತ್ಸಾಹ ಧನ ಏರಿಕೆ

ಬೆಂಗಳೂರು: ವಿವಿಧ ಎಸ್ಕಾಂಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳ (ಮೈಕ್ರೋಫೀಡರ್ ಫ್ರಾಂಚೈಸಿ) ಕನಿಷ್ಠ ಖಚಿತ ಪ್ರೋತ್ಸಾಹ ಧನವನ್ನು ₹12,000 ದಿಂದ ₹16,320 ಕ್ಕೆ ಏರಿಕೆ ಮಾಡಲು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ರಾಜ್ಯದಲ್ಲಿ ಬಿಲ್ ವಿತರಣೆ ಮತ್ತು ವಸೂಲಾತಿ ಹೆಚ್ಚಿಸಲು ಹಾಗೂ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕಾರ್ಯಕ್ಷಮತೆ ಹೆಚ್ಚಿಸುವ ಕುರಿತು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಆ ಸಮಿತಿಯ ಶಿಫಾರಸು ಚರ್ಚಿಸಿ ತೀರ್ಮಾನಿಸಲಾಗಿದೆ.

ಇತರ ತೀರ್ಮಾನಗಳು: ಎಲ್‌ಟಿ–1(40 ಯುನಿಟ್‌ಗಳಿಗೆ/75 ಯುನಿಟ್‌ಗಳಿಗೆ(ಎಸ್‌ಸಿ-ಎಸ್ಟಿ) ಮೇಲ್ಪಟ್ಟ ಸ್ಥಾವರಗಳು), ಎಲ್‌ಟಿ–2, ಎಲ್‌ಟಿ–3, ಎಲ್‌ಟಿ–4 (10 ಎಚ್‌ಪಿಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ–5 (40 ಎಚ್‌ಪಿ ಸಾಮರ್ಥ್ಯಗಳವರೆಗೆ) ಸ್ಥಾವರಗಳ ಪ್ರಸಕ್ತ ತಿಂಗಳ ಬೇಡಿಕೆಯ ಶೇ 100 ರಷ್ಟು ವಸೂಲಿ ಮಾಡಿದಲ್ಲಿ ಕನಿಷ್ಠ ಖಚಿತ ಪ್ರೋತ್ಸಾಹ ಧನದ ಜತೆಗೆ ಈಗ ನೀಡುತ್ತಿರುವ ಹೆಚ್ಚುವರಿ ₹2,000 ಗಳನ್ನು ₹4,000ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ವರ್ಷಕ್ಕೆ 2 ಜೊತೆ ಸಮವಸ್ತ್ರ ಖರೀದಿ ವೆಚ್ಚ, ₹2,400 ಮರುಪಾವತಿಸಲಾಗುವುದು. ಆದರೆ, ಗುಂಪು ವಿಮಾ ಯೋಜನೆ ಕುರಿತ ಅವಕಾಶಗಳ ಬಗ್ಗೆ ಪರಿಶೀಲಿಸುವಂತೆ ಎಸ್ಕಾಂಗಳಿಗೆ ಸೂಚಿಸಲಾಯಿತು ಎಂದು ಮೂಲಗಳು ಹೇಳಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬಿಡಿಎ/ಇಎಂ/ಇಓ1/ಇಇ(ಐಡಿ)/ಟೆಂಡರ್/ಟಿ–210/2022–23
ದಿನಾಂಕ: 12.08.2022

ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://www.eproc.karnataka.gov.in ಮೂಲಕ)

ಆಯುಕ್ತರು, ಬಿಡಿಎ, ಬೆಂಗಳೂರು (ಗ್ರಾಹಕರು) ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಮೂಲಸೌಕರ್ಯ ವಿಭಾಗ, ಬಿಡಿಎ, ಟಿ.ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–20 ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಎರಡು ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುವರು.

ಕಾಮಗಾರಿ ಹೆಸರು: ರಾಷ್ಟ್ರೀಯ ಹೆದ್ದಾರಿಯೊಂದಿಗೆ (ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ) ಹೊರ ವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್‌ನಲ್ಲಿ ಮೇಲ್ಸೇತುವೆಯ ಬಾಕಿ ಉಳಿದ ಕಾಮಗಾರಿ, ಪೂರ್ವ ಭಾಗದಲ್ಲಿ ಹೆಚ್ಚುವರಿ ಮೇಲ್ಸೇತುವೆ ಮತ್ತು ಕೆಳಸೇತುವೆಗಳ ನಿರ್ಮಾಣ. ಇಎಂಡಿ: **ರೂ.2250 ಲಕ್ಷಗಳು.**

ವೇಳಾಪಟ್ಟಿ: ಪ್ರಸ್ತಾವನೆಯ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 22.08.2022** (2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **26.08.2022 ಸಂಜೆ 4.00 ಗಂಟೆವರೆಗೆ** (3) ಪ್ರಸ್ತಾವನೆ ಪೂರ್ವ ಸಭೆಯ ದಿನಾಂಕ ಮತ್ತು ಸಮಯ: **29.08.2022 ಮಧ್ಯಾಹ್ನ 3.00 ಗಂಟೆಗೆ** (4) ಪ್ರಸ್ತಾವನೆ ಪೂರ್ವ ಸಭೆ ನಡೆಸುವ ಸ್ಥಳ: **ಸಭಾಂಗಣ, ನೆಲ ಮಹಡಿ, "ಎ" ಬ್ಲಾಕ್, ಬಿಡಿಎ, ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020** (5) ಪ್ರಸ್ತಾವನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **07.09.2022 ಸಂಜೆ 4.00 ಗಂಟೆ ವರೆಗೆ.** (6) ಮೊದಲ ವಿದ್ಯುನ್ಮಾನ ದಾಖಲೆಗಳು (ತಾಂತ್ರಿಕ ಪ್ರಸ್ತಾವನೆ) ತೆರೆಯುವ ದಿನಾಂಕ ಮತ್ತು ಸಮಯ: **09.09.2022 ಸಂಜೆ 4.30 ಗಂಟೆಗೆ.** (7) ಮೊದಲ ವಿದ್ಯುನ್ಮಾನ ದಾಖಲೆಗಳು ತೆರೆಯುವ ಸ್ಥಳ: **ಅಭಿಯಂತರ ಸದಸ್ಯರ ಕಛೇರಿ, ಬಿಡಿಎ, ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020** (8) ಎರಡನೇ ವಿದ್ಯುನ್ಮಾನ ದಾಖಲೆಗಳು ತೆರೆಯುವ ಸ್ಥಳ (ಆರ್ಥಿಕ ಪ್ರಸ್ತಾವನೆ): ಅರ್ಹ ಗುತ್ತಿಗೆದಾರರಿಗೆ ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳು, ನೋಂದಣಿ, ನಿಯಮ ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೋಡುವುದು. ಸಹಾಯವಾಣಿ: 080–46010000/68948777

ಸಹಿ/–ಅಭಿಯಂತರ ಸದಸ್ಯರು, ಬಿಡಿಎ, ಬೆಂಗಳೂರು.
BDA/PRO/TN/15/2022-23

'ಸಾಲ ಮರುಪಾವತಿ ಮಾಡಿದರೆ 10 ದಿನಗಳಲ್ಲಿ ಆಸ್ತಿ ಪತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಸಾಲ ಪಡೆದುಕೊಂಡವರು ಸಾಲ ಮರುಪಾವತಿ ಮಾಡಿದ 10 ದಿನಗಳೊಳಗೆ ಅವರ ಆಸ್ತಿ ಪತ್ರದ ದಾಖಲೆಗಳನ್ನು ಹಿಂತಿರುಗಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಶ್ರೀಗುರುರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರಗಳ ಕುರಿತ ತನಿಖೆಯ ಪ್ರಗತಿ ಹಾಗೂ ಬ್ಯಾಂಕ್‌ನ ಪುನಶ್ಚೇತನದ ಕುರಿತು ಚರ್ಚಿಸಲು ಬುಧವಾರ ಅಧಿಕಾರಿಗಳ ಸಭೆ ಕರೆಯಲಾಗಿತ್ತು. ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಈ ಸಹಕಾರ ಬ್ಯಾಂಕಿನಲ್ಲಿ ₹1,294 ಕೋಟಿ ವಂಚನೆ ಆಗಿರುವುದು ಆಡಿಟ್‌ನಿಂದ ತಿಳಿದುಬಂದಿದೆ. ಸಾಲ ಮರುಪಾವತಿ ಮಾಡಲು ಇಚ್ಛಿಸುವವರಿಗೆ ದಾಖಲೆಗಳನ್ನು ಹಿಂದಿರುಗಿಸಲು ತಡವಾಗುತ್ತಿರುವ ಸಂಬಂಧ ಆಡಳಿತಾಧಿಕಾರಿ, ಭಾರತೀಯ ರಿಸರ್ವ್ ಬ್ಯಾಂಕ್, ಸಿಐಡಿ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು ಎಂದರು.

ಸಾಲ ಪಡೆದವರ ಎಲ್ಲಾ ದಾಖಲೆಗಳು ಇ.ಡಿ (ಜಾರಿ ನಿರ್ದೇಶನಾಲಯ) ಬಳಿ ಇದೆ. ಸಿಐಡಿ ತನಿಖೆಯೂ ನಡೆಯುತ್ತಿರುವುದರಿಂದ ದಾಖಲೆ ನೀಡಲು ವಿಳಂಬವಾಗುತ್ತದೆ ಎಂದು ಹಣ ಪಾವತಿಗೆ ಸಾಲಗಾರರು ಹಿಂದೇಟು ಹಾಕಬಹುದು. ಇ.ಡಿಗೆ 15 ದಿನಗಳೊಳಗೆ ಅಧಿಕಾರಿಗಳು ಸಂಪೂರ್ಣ ಮಾಹಿತಿ ನೀಡಲಿದ್ದಾರೆ. ಸಾಲ ವಸೂಲಾತಿ ಬಗ್ಗೆ ಕೂಡ ಗಂಭೀರ ಚರ್ಚೆಯಾಗಿದೆ. ಸೆ.5ಕ್ಕೆ ಮತ್ತೆ ಸಭೆ ಸೇರಿ ಏನೆಲ್ಲಾ ಪ್ರಗತಿ ಆಗಿದೆ ಎಂಬುದರ ಪರಾಮರ್ಶೆ ನಡೆಸಲಾಗುವುದು. ಸಭೆಯಲ್ಲಿ ಸಂಸದ ತೇಜಸ್ವಿ ಸೂರ್ಯ ಮತ್ತು ಶಾಸಕ ರವಿಸುಬ್ರಹ್ಮಣ್ಯ ಹಲವು ಸಲಹೆಗಳನ್ನು ನೀಡಿದರು ಎಂದು ತಿಳಿಸಿದರು.

ವಸಿಷ್ಠ ಸೌಹಾರ್ದ ಸಹಕಾರಿ ಬ್ಯಾಂಕ್‌ನಲ್ಲಿ ₹282 ಕೋಟಿ ವಂಚನೆ ಆಗಿದೆ. ಸಾಲ ವಸೂಲಾತಿ ಬಗೆಗಿನ ಕೋರ್ಟ್ ನೀಡಿದ್ದ ತಡೆ ತೆರವಾಗಿದೆ. ಸಿಐಡಿ ತನಿಖೆ ನಡೆಯುತ್ತಿದ್ದು, ಸಾಲ ವಸೂಲಿಗೆ ತ್ವರಿತವಾಗಿ ಕ್ರಮ ವಹಿಸಲಾಗುತ್ತದೆ ಎಂದು ಸೋಮಶೇಖರ್ ಹೇಳಿದರು.

ನಿಧನ ವಾರ್ತೆ

ವೈ.ವಿ. ಚನ್ನವೀರಯ್ಯ



ಬೆಂಗಳೂರು: ಚೊಕ್ಕಸಂದ್ರದ ನಿವಾಸಿ ವೈ.ವಿ. ಚನ್ನವೀರಯ್ಯ (ಅಪ್ಪಾಜಿ)(72) ಅವರು ಬುಧವಾರ ನಿಧನರಾಗಿದ್ದಾರೆ.

ಮೃತರಿಗೆ ಪತ್ನಿ, ಒಬ್ಬರು ಪುತ್ರಿ ಮತ್ತು ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ 10ಕ್ಕೆ ತುಮಕೂರಿನ ಕ್ಯಾತ್ಸಂದ್ರ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

FOND REMEMBRANCE



Dr. H.K. KALAPPA 18-08-2019
From Family and Friends

PUBLIC NOTICE

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ('ಕಕ್ಷಿದಾರ') ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ('ಬಿಬಿಎಂಪಿ') ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ('ಬಿಡಿಎ'), ಬೆಂಗಳೂರು ರವರು ಹೊರಡಿಸಲಿರುವ ಅಭಿ ವೃದ್ಧಿ ಹಕ್ಕು ಪ್ರಮಾಣಪತ್ರ ಅಡಿಯಲ್ಲಿನ 2755.20 ಚದರ ಮೀಟರ್ ಬಿಲ್ಟಪ್ ಏರಿಯಾ ಹೊಂದಿರುವ ಫ್ಲೋರ್ ಏರಿಯಾ ರೇಶೊ (ಎಫ್‌ಎಆರ್) ಕ್ರೆಡಿಟ್ ಹೊಂದಿರುವ, ಈ ಕೆಳಗೆ 'ಷೆಡ್ಯೂಲ್'ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ, ಸರ್ವೆ ನಂ. 15/4ಎ ರಲ್ಲಿ ಸಂಯೋಜಿತ (ಬಿಬಿಎಂಪಿ ಖಾತಾ ನಂ. 299/269/ 15/2ಎ/15/3ಎ/15/4ಎ), ದಿನಾಂಕ: 07.12.2021ರ ರೆಕ್ಟಿಫಿಕೇಶನ್ ಆಫ್ ರೆಲಿಕ್ವಿಷ್‌ಮೆಂಡ್ ಡೀಡ್ (ಡಾಕ್ಯೂ ಮೆಂಟ್ ನಂ. 6217/2021–22) ಪ್ರಕಾರ 1377.60 ಚದರ ಮೀಟರ್ ವಿಸ್ತೀರ್ಣವುಳ್ಳ ಸ್ವತ್ತನ್ನು, ಇಲ್ಲಿ ಇನ್ನು ಮುಂದೆ 'ಷೆಡ್ಯೂಲ್' ಮತ್ತು 'ಷೆಡ್ಯೂಲ್ ಟಿಡಿಆರ್' ಎನ್ನಲಾಗುವ ಸ್ವತ್ತನ್ನು ಅದರ ಮಾಲಿಕರಾದ ಶ್ರೀ. ಪ್ರವೀಣ್ ಎನ್. ನೂಜಿಬೈಲ್ ಅಲಿಯಾಸ್ ಎನ್.ಎನ್ ಪ್ರವೀಣ್ ಬಿನ್ ಶ್ರೀ. ಎನ್. ಕೃಷ್ಣಾ ಭಟ್ ('ಮಾಲಿಕರು') ಇವರ ಜೊತೆಗೆ ವ್ಯವಹರಿಸಲು ಉದ್ದೇಶಿಸಿರುತ್ತಾರೆ. ಪ್ರಸ್ತುತ ಮಾಲಿಕರು ನಮ್ಮ ಕಕ್ಷಿದಾರರಿಗೆ, ಷೆಡ್ಯೂಲ್ ಟಿಡಿಆರ್ ಸ್ವತ್ತಿಗೆ ತಾವೇ ಸಂಪೂರ್ಣ ಮಾಲಿಕರು ಮತ್ತು ಎಲ್ಲಾ ಅನಿರ್ಭಂಧಿತ ಹಕ್ಕುಗ ಳನ್ನು ಹೊಂದಿರುತ್ತೇನೆ ಎಂದು ಹೇಳಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಸದರಿ ಷೆಡ್ಯೂಲ್ ಟಿಡಿಆರ್ ಸ್ವತ್ತಿನ ಮಾಲಿಕರನ್ನು ಹೊರತುಪಡಿಸಿ ಇನ್ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಹಕ್ಕು, ಬಾದ್ಯತೆ, ಚಾರ್ಜ್, ಲೀನ್ ಅಥವಾ ಇನ್ನಿತರೆ ಹಿತಾಸಕ್ತಿಗಳಿದ್ದಲ್ಲಿ, ಅಂತಹವರು ಮೇಲ್ಕಂಡ ಷೆಡ್ಯೂಲ್ ಟಿಡಿಆರ್ ಸ್ವತ್ತು ಕುರಿತಂತೆ ಉದ್ದೇಶಿಸಲಾದ ವ್ಯವಹಾರಕ್ಕೆ ಸಂಬಂಧಿ ಸಿದಂತಹ ತಮ್ಮ ಕ್ಲೇಮ್‌ಗಳನ್ನು / ಆಕ್ಷೇಪಣೆಗಳನ್ನು ಈ ಕೆಳಗೆ ಸಹಿ ಹಾಕಿದವರಿಗೆ ಸಲ್ಲಿಸತಕ್ಕದ್ದು. ನಿಮ್ಮ ಕ್ಲೇಮ್ / ಆಕ್ಷೇಪಣೆಗಳು ಕಡ್ಡಾಯವಾಗಿ ಲಿಖಿತ ರೂಪದಲ್ಲಿ ಇರಬೇಕು ಮತ್ತು ಅಂತಹ ಕ್ಲೇಮ್‌ಗಳಿಗೆ ಸಂಬಂಧಿತ ದಾಖಲಾತಿ ಪುರಾವೆಗಳನ್ನು ಲಗತ್ತಿಸಿರಬೇಕು ಹಾಗೂ ಸದರಿ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ 10 (ಹತ್ತು) ದಿನಗಳೊಳಗೆ ಕೆಳಕಂಡ ವಿಳಾಸಕ್ಕೆ ತಲುಪ ತಕ್ಕದ್ದು. ಒಂದು ವೇಳೆ ಅಂತಹ ಯಾವುದೇ ಕ್ಲೇಮ್‌ಗಳು / ಆಕ್ಷೇಪಣೆಗಳು ಸಲ್ಲಿಕೆ ಯಾಗದಿದ್ದಲ್ಲಿ, ಮಾಲಿಕರನ್ನು ಹೊರತುಪಡಿಸಿ ಸದರಿ ಷೆಡ್ಯೂಲ್ ಟಿಡಿಆರ್ ಸ್ವತ್ತಿನ ಮೇಲೆ ಇನ್ನಿತರ ಯಾವುದೇ ಹಕ್ಕು, ಬಾದ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳಿರುವುದಿಲ್ಲ ಎಂದು ಪರಿಗಣಿ ಸಲಾಗುತ್ತದೆ ಹಾಗೂ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಟಿಡಿಆರ್ ಸಂಬಂಧಿತ ಉದ್ದೇಶಿತ ವ್ಯವಹಾರವನ್ನು ಮುಂದುವರಿಸಲು ಸ್ವತಂತ್ರರಾ ಗಿರುತ್ತಾರೆ ಎಂದು ಕೂಡ ಪರಿಗಣಿಸಲಾಗುತ್ತದೆ.

ಷೆಡ್ಯೂಲ್
(ಷೆಡ್ಯೂಲ್ ಟಿಡಿಆರ್ ಸ್ವತ್ತಿನ ವಿವರ)

ಗಾಣಕಲ್ಲು ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ಥಿತಗೊಂಡಿರುವ, ದಿನಾಂಕ 07.12.2021ರ ರೆಕ್ಟಿಫಿಕೇಶನ್ ಆಫ್ ರೆಲಿಕ್ವಿಷ್‌ಮೆಂಡ್ ಡೀಡ್ (ಡಾಕ್ಯೂಮೆಂಟ್ ನಂ. 6217/2021–22 ಮೇರೆಗೆ ನೋಂದಾಯಿತ) ಅಡಿಯಲ್ಲಿರುವ, 03 ಎಕರೆ 33 ಗುಂಟಾ (07 ಗುಂಟಾ 'ಬಿ' ಖರಾಬ್ ಜಮೀನು ಹೊರತು ಪಡಿಸಿ), ಸರ್ವೆ ನಂ. 15/4ಎ ರಲ್ಲಿ ಸಂಯೋಜಿತ (ಬಿಬಿಎಂಪಿ ಖಾತಾ ನಂ. 299/269/15/2ಎ/ 15/3ಎ/15/ 4ಎ), ಬಿಬಿ ಎಂಪಿ ಕಮಿಷನರ್ ಅಥವಾ ಬಿಡಿಎ ಹೊರಡಿ ಸಿರುವ ಡೆವಲಪ್‌ಮೆಮಟ್ ರೈಟ್ ಸರ್ಟಿ ಫಿಕೇಟ್ ಮೇರೆಗಿನ, 2755.20 ಚದರ ಮೀಟರ್ ಬಿಲ್ಟಪ್ ಏರಿಯಾ ಹೊಂದಿರುವ ಫ್ಲೋರ್ ಏರಿಯಾ ರೇಶೊ (ಎಫ್‌ಎಆರ್) ಕ್ರೆಡಿಟ್ ಹೊಂದಿರುವ, 1377.60 ಚದರ ಮೀಟರ್ ವಿಸ್ತೀ ರ್ಣವುಳ್ಳ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ.

ದಿನಾಂಕ: 18.8.2022

ಸಹಿ/– ಶ್ರೀ. ಶ್ರೀನಿವಾಸ ಬಿ.ಅರ್. ಮತ್ತು ಬ್ರಿಜಿತಾ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್, 206 ಮತ್ತು 207, 2ನೇ ಮಹಡಿ, ಹೆಚ್‌ಎಂ ಜಿನೀವಾ ಹೌಸ್, 14, ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು – 560052 ಫೋನ್:+91–80–6836–1111

JOB OPPORTUNITIES

Engg/ Production Technical

URGENTLY REQ. B.E MECH AutoCad & solid works exp, Sr. Accountant (M), Quality Engineer. Rush resume to alm.hr2005@gmail.com

Multiple Vacancy

REQUIRED TEAMLEADER, Telecaller, & FieldExecutive For BankLoan collection. Direct recruitment to company Contact:- 9620206756, 9620200756.

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/9606701007

WANTED BUSINESS Partner Veg Hotel 1 Crore Investment Monthly Income 5 Lakhs Contact: 8892501007/ 9606701007

RENTAL PROPERTIES

Accommodation Available

Commercial

RENTAL 80000 SQFT Prime Office Space for Co-Working Companies MNC's, SCHOOLS COLLEGES Software, Hospitals Near Bommasandra Metro Station Bangalore- 9844016139

PROPERTY CORNER

PRIME INDUSTRIAL PROPERTY FOR SALE/ LONG LEASE AT PEENYA.

5.2 acres land with 2 lakh sft beautiful industrial building with 1000 KVA connected power load available for immediate occupation.

Contact 9342107595

email srcmgr5@gmail.com

EDUCATIONAL

General

B.ED ADMISSIONS OPEN "FRANK COLLEGE OF EDUCATION" 6TH PHASE JP-NAGAR, BANGALORE-78 9980167814 DR. HEGDE

PERSONAL

Change of Name

14871787F SEP/MT SARVAIYA LAKKIRAJSINH RAMDEVSINH 2ATC MOTHER NAME RECORDS SARVAIYA DIVYABA RAMDEVSINH instead of SARVAIYA DAYABA RAMDEVSINH NOTARY KV MANI

14827982Y HAV MUKLESUR RAHAMAN 2ATC FATHER NAME RECORDS AMERUDDIN MANDAL instead of AMIRUDDIN MONDALNOTARY KV MANI

I, KANDEPI RADHIKA (New Name) aged 48 years, Working as Scientist in ISRO & R/at #24, Pearl Villa, F-3, A-Cross, Murugeshpalya, Nanjareddy Colony, Vimanapura Post, Bengaluru-560017, declare that I have changed my name from CHITIRALA RADHIKA (Old Name) to KANDEPI RADHIKA (New Name), henceforth I shall be known and called as KANDEPI RADHIKA (New Name) for all my personal, official & legal purpose, vide Affidavit dated: 16.08.2022, before Notary RAMESH.D.SHAH at BENGALURU.

14827982Y HAV MUKLESUR RAHAMAN 2ATC MOTHER NAME RECORDS HADICHA BIBI instead of HADECHHA BIBI NOTARY MD KHAIRUL ISLAM

I, MUZEEBUR RAHAMAN, Residing at P&C Enclave, Door. No. 001, 4th Cross, Nanjappa Layout, Vidyaranyapura Post, Banglaore- 560097, have changed my name to MUZEEBUR REHMAN, vide affidavit dated 16.08.2022, before notary K.C. Pemmaiah, Bangalore. Henceforth I shall be called MUZEEBUR REHMAN only.

I, PARAM SRIHARI Resident of K. Vellanti Panchayathi Office, Nellore (Rural), Vellanti, Nellore, Andhra Pradesh- 524309, have changed my name to SRIHARI REDDY PERAM vide affidavit dated 16.08.2022, before notary Sivakumara. M.N, Bangalore. Henceforth I shall be called SRIHARI REDDY PERAM only

ಪಾದಚಾರಿ ಮಾರ್ಗವೇ ಬಟ್ಟೆ ತೊಳೆಯುವ ಸ್ಥಳ: ಈಸ್ಟ್ ವೆಸ್ಟ್ ಶಾಲೆ ವಿದ್ಯಾರ್ಥಿಗಳಿಗೆ ಸಂಕಷ್ಟ

ಖಾಸಗಿ ಬಸ್‌ಗೆ ರಸ್ತೆಯೇ ನಿಲ್ದಾಣ!

● ಆದಿತ್ಯ ಕೆ.ಎ.





ಬಸವನಗುಡಿಯ ಆರ್ಮುಗಂ ವೃತ್ತಕ್ಕೆ ಹೊಂದಿಕೊಂಡಿರುವ 'ದಿ ಈಸ್ಟ್ ವೆಸ್ಟ್ ಸ್ಕೂಲ್' ಸಮೀಪವೇ ನಿಲುಗಡೆ ಮಾಡಿರುವ ಜಬ್ಬಾರ್ ಟ್ರಾವೆಲ್ಸ್‌ನ ಬಸ್‌ಗಳು. (ಎಡ ಚಿತ್ರ). ರಸ್ತೆ ಬದಿ ಗ್ಯಾರೇಜ್ ಮಾಡಿಕೊಂಡಿರುವುದು.

ಬೆಂಗಳೂರು: ಹಗಲು, ರಾತ್ರಿಯೆನ್ನದೇ ರಸ್ತೆ ಬದಿಯಲ್ಲೇ ನಿಲ್ಲುವ ಖಾಸಗಿ ಬಸ್‌ಗಳು, ಕಾರು, ಜೀಪುಗಳನ್ನೂ ಅಲ್ಲಿಯೇ ನಿಲುಗಡೆ ಮಾಡಿ ತೆರಳುವ ಬಸ್ ಮಾಲೀಕರು, ಸರಕು ಸಾಗಣೆ ಟ್ರಕ್ಕುಗಳ ನಿಲ್ದಾಣವೂ ಅದೇ... ಇದರಿಂದ ವಿದ್ಯಾರ್ಥಿಗಳು ನಿತ್ಯವೂ ಸಂಕಷ್ಟ ಪಡುತ್ತಿದ್ದಾರೆ.

ಇದು ಬಸವಗುಡಿಯ ಆರ್ಮುಗಂ ವೃತ್ತದ 'ದಿ ಈಸ್ಟ್ ವೆಸ್ಟ್ ಸ್ಕೂಲ್'ನ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಂಕಷ್ಟ.

ಈಸ್ಟ್ ವೆಸ್ಟ್ ಎಜುಕೇಷನ್ ಟ್ರಸ್ಟ್‌ಗೆ ಸೇರಿದ ಶಾಲೆ ಇದಾಗಿದ್ದು, 1ನೇ ತರಗತಿಯಿಂದ ಎಸ್ಸೆಸ್ಸೆಲ್ಸಿ ತನಕ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲೆಯಲ್ಲಿದ್ದಾರೆ.

ಈ ಶಾಲೆಯ ಸುತ್ತಮುತ್ತಲ ರಸ್ತೆಯಲ್ಲಿಯೇ ಜಬ್ಬಾರ್ ಟ್ರಾವೆಲ್ಸ್‌ಗೆ ಸೇರಿದ 5 ಬಸ್‌ಗಳು ನಿತ್ಯವೂ ನಿಲ್ಲುತ್ತಿವೆ. ಅವುಗಳಿಗೆ ರಸ್ತೆಯೇ 'ಬಸ್ ನಿಲ್ದಾಣ'. ರಾತ್ರಿ ವೇಳೆ ದೂರದ ಊರಿಗೆ ತೆರಳುವ ಖಾಸಗಿ ಬಸ್‌ಗಳು, ಹಗಲಿನಲ್ಲಿ ಈ ಸ್ಥಳಕ್ಕೆ ಬಂದು ನಿಲ್ಲುತ್ತಿವೆ.

ಚಾಲಕರು, ನಿರ್ವಾಹಕರು, ಕ್ಲೀನರ್‌ಗೆ ಶಾಲಾ ಸುತ್ತಲಿನ ಪಾದಚಾರಿ ಮಾರ್ಗವೇ ಸ್ನಾನಗೃಹವಾಗಿದೆ. ನಿತ್ಯ ರಸ್ತೆ ಬದಿಯಲ್ಲೇ ಅವರು ಬಟ್ಟೆ ತೊಳೆಯುವುದು, ಬಸ್ ಶುಚಿ ಮಾಡುವ ಕೆಲಸ ಮಾಡುತ್ತಿದ್ದಾರೆ. ಕಲುಷಿತ ನೀರಿನಿಂದ ರಸ್ತೆಯಲ್ಲಿ ಮಲಿನ ವಾತಾವರಣ ನಿರ್ಮಾಣವಾಗುತ್ತಿದೆ.

ಬಸ್ ಮಾಲೀಕರು ರಸ್ತೆಯನ್ನೇ ಗ್ಯಾರೇಜ್ ಮಾಡಿಕೊಂಡಿದ್ದಾರೆ. ಇದರಿಂದ ಹೊಮ್ಮುವ ಶಬ್ದ ಮಕ್ಕಳ ಪಾಠಕ್ಕೆ ಅಡ್ಡಿ ಆಗುತ್ತಿದೆ. ರಸ್ತೆಯಲ್ಲಿ ಬಸ್‌ಗಳು ಅನಧಿಕೃತವಾಗಿ ದಿನಪೂರ್ತಿ ನಿಲ್ಲುತ್ತಿರುವುದು ಅಪಘಾತಕ್ಕೂ ಕಾರಣವಾಗುತ್ತಿದೆ ಎಂದು ಪೋಷಕರು ನೋವು ತೋಡಿಕೊಂಡರು.

ದಶಕದ ಸಮಸ್ಯೆ: ಇದು ದಶಕದ ಸಮಸ್ಯೆ, ಇನ್ನೂ ಬಗೆಹರಿದಿಲ್ಲ. ಟ್ರಸ್ಟ್ ಸದಸ್ಯರು ಹಾಗೂ ಶಿಕ್ಷಕರು ಹತ್ತು ವರ್ಷಗಳಿಂದಲೂ ಪರಿಹಾರ ಒದಗಿಸುವಂತೆ ಪಾಲಿಕೆ ಸದಸ್ಯರಿಗೆ ಹಾಗೂ ಸಂಚಾರ ಪೊಲೀಸರಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನ ಆಗಿಲ್ಲ ಎಂದು ಶಿಕ್ಷಕರು ದೂರಿದ್ದಾರೆ.

2018ರಲ್ಲಿ ಬಸವನಗುಡಿ ಸಂಚಾರ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಸ್ಥಳಕ್ಕೆ ಬಂದ ಪೊಲೀಸರು, ಬಸ್ ಮಾಲೀಕರಿಗೆ ಎಚ್ಚರಿಕೆ ನೀಡಿ ಶಾಲೆ ಸಮೀಪ ನಿಲುಗಡೆ ಮಾಡದಂತೆ ತಾಕೀತು ಮಾಡಿದ್ದರು.

ಇದರಿಂದ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ಬಸ್ ನಿಲುಗಡೆ ಮುಂದುವರಿದಿದೆ.

ವಿದ್ಯಾರ್ಥಿಗಳ ಆತಂಕದ ಹೆಜ್ಜೆ

'ಸಮೀಪದಲ್ಲಿ ಪಿಯು ಕಾಲೇಜುಗಳಿವೆ. ಅಲ್ಲಿನ ವಿದ್ಯಾರ್ಥಿಗಳು ಬೈಕ್‌ನಲ್ಲಿ ವೇಗವಾಗಿ ತೆರಳುತ್ತಾರೆ. ಶಾಲೆಗೆ ಬರುವ ಪುಟ್ಟ ಮಕ್ಕಳು ಆತಂಕದಿಂದ ಹೆಜ್ಜೆ ಹಾಕುವ ಸ್ಥಿತಿಯಿದೆ. ರಸ್ತೆಯಲ್ಲಿ ಖಾಸಗಿ ಬಸ್‌ಗಳ ನಿಲುಗಡೆಯಿಂದಾಗಿ ಶಾಲೆ ಅವಧಿಯಲ್ಲಿ ಆರ್ಮುಗಂ ವೃತ್ತ, ಆಸುಪಾಸಿನಲ್ಲಿ ಸಂಚಾರ ದಟ್ಟಣೆ ಇರುತ್ತದೆ' ಎಂದು ಸ್ಥಳೀಯರಾದ ನವೀನ್ ಹೇಳಿದರು.

ದಿವಾನ್ ಮಾಧವ ರಸ್ತೆ, ಪಟಾಲಮ್ಮ ದೇವಸ್ಥಾನ ರಸ್ತೆ, ಹಳೇ ಕನಕಪುರ ರಸ್ತೆಯ ಮೂಲಕ ಬರುವ ಸಾವಿರಾರು ವಾಹನಗಳ ಚಾಲಕರು ಮುಖ್ಯರಸ್ತೆಗೆ ತೆರಳಲು ಮಸೀದಿ ರಸ್ತೆಯನ್ನೇ ಬಳಸುತ್ತಾರೆ. ಈ ಮಾರ್ಗದಲ್ಲಿ ನಿತ್ಯವೂ ವಾಹನ ದಟ್ಟಣೆ. ವಿದ್ಯಾರ್ಥಿಗಳಂತೂ ಆತಂಕದಿಂದಲೇ ಹೆಜ್ಜೆ ಹಾಕುತ್ತಿದ್ದಾರೆ.

ಕ್ರಮ ಕೈಗೊಳ್ಳದ ಪೊಲೀಸರು

ಸಮಸ್ಯೆ ಬಗೆಹರಿಸುವಂತೆ ಕೋರಿ ಟ್ರಸ್ಟ್ ಸದಸ್ಯರು ಮತ್ತೆ ಜುಲೈ 29ರಂದು ಬಸವನಗುಡಿ ಸಂಚಾರ ಪೊಲೀಸ್ ಠಾಣೆಗೆ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದ್ದಾರೆ. ಪೊಲೀಸರು ಮನವಿ ಸ್ವೀಕರಿಸಿ ಮೊಹರು ಹಾಗೂ ಸಹಿ ಹಾಕಿ ಕಳುಹಿಸಿದ್ದಾರೆ. 18 ದಿನ ಕಳೆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಅದೇ ಸ್ಥಳಕ್ಕೆ ಮಂಗಳವಾರವೂ ಬಸ್ ಬಂದು ನಿಂತಿದೆ.

ಮಾಲೀಕರಿಗೆ ಎಚ್ಚರಿಕೆ ನೀಡಿ, ನೋಟಿಸ್ ಜಾರಿ ಮಾಡಲಾಗಿದೆ. ಪುನರಾವರ್ತನೆ ಆದಲ್ಲಿ 15 ದಿನದ ಬಳಿಕ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿದ್ದೇವೆ.

ಚಿದಾನಂದಮೂರ್ತಿ, ಇನ್‌ಸ್ಪೆಕ್ಟರ್, ಬಸವನಗುಡಿ ಸಂಚಾರ ಪೊಲೀಸ್ ಠಾಣೆ



ಬಟ್ಟೆ ತೊಳೆಯುವ ಸ್ಥಳವಾದ ಪಾದಚಾರಿ ಮಾರ್ಗ

ರಾಷ್ಟ್ರಗೀತೆ ಕಡ್ಡಾಯ

ಬೆಂಗಳೂರು: ರಾಜ್ಯದ ಎಲ್ಲ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲೂ ಪ್ರತಿದಿನ ಮುಂಜಾನೆ ಸಾಮೂಹಿಕ ಪ್ರಾರ್ಥನೆ ಸಮಯದಲ್ಲಿ ವಿದ್ಯಾರ್ಥಿಗಳು ರಾಷ್ಟ್ರಗೀತೆ ಹಾಡುವುದನ್ನು ಕಡ್ಡಾಯಗೊಳಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಪ್ರಕಾರ ಶಿಕ್ಷಣ ಸಂಸ್ಥೆಗಳಲ್ಲಿ ರಾಷ್ಟ್ರಗೀತೆ ಹಾಡುವುದು ಕಡ್ಡಾಯ. ಕೆಲವು ಶಾಲೆಗಳಲ್ಲಿ ನಿಯಮ ಉಲ್ಲಂಘಿಸಲಾಗುತ್ತಿದೆ ಎಂಬ ದೂರುಗಳು ಬಂದಿವೆ. ಅದಕ್ಕೆ ಅವಕಾಶ ನೀಡಬಾರದು ಎಂದು ತಾಕೀತು ಮಾಡಲಾಗಿದೆ.

ವಿದ್ಯಾರ್ಥಿಗಳಲ್ಲಿ ನಾಗರಿಕ ಪ್ರಜ್ಞೆ ಬೋಧಿಸುವುದು, ಸಂವಿಧಾನ ಅನುಸರಿಸುವುದು, ಸಂವಿಧಾನದ ಆದರ್ಶಗಳನ್ನು ಪಾಲಿಸುವುದು, ಸಾಂವಿಧಾನಿಕ ಸಂಸ್ಥೆಗಳನ್ನು, ರಾಷ್ಟ್ರಧ್ವಜ, ರಾಷ್ಟ್ರಗೀತೆ ಗೌರವಿಸುವಂತೆ ಮಾಡಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಮೈದಾನದ ಕೊರತೆ ಇದ್ದರೆ, ಕೊಠಡಿಗಳಲ್ಲೇ ಹಾಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ಜೆ.ಮಂಜುನಾಥ್ ಜಾಮೀನು ಅರ್ಜಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ನೋಟಿಸ್ ನೀಡಿದೆ.

ಜಮೀನು ಮಾಲೀಕತ್ವದ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅರ್ಜಿದಾರರ ಪರ ಆದೇಶ ನೀಡಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದ ಅವಧಿಯಲ್ಲಿ ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಜೆ. ಮಂಜುನಾಥ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಜುಲೈ 4ರಂದು ಬಂಧಿಸಿದ್ದರು.

ಹಣ ಅಕ್ರಮ ವರ್ಗಾವಣೆ ಪ್ರಕರಣ

ನ್ಯಾಯಾಲಯಕ್ಕೆ ಗೌರವ ನೀಡಿ ವಿಚಾರಣೆಗೆ ಹಾಜರಾಗಿದ್ದೇನೆ. ಇ.ಡಿಯಿಂದ ದಾಖಲೆಗಳನ್ನು ಕೊಟ್ಟ ಬಳಿಕ ಈ ವಿಚಾರದ ಬಗ್ಗೆ ಮಾತನಾಡುತ್ತೇನೆ: ಡಿಕೆಶಿ

ಇ.ಡಿ ವಿಚಾರಣೆಗೆ ಹಾಜರಾದ ಶಿವಕುಮಾರ್

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳು ಇಲ್ಲಿನ ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯದಲ್ಲಿ (ಇ.ಡಿ. ನ್ಯಾಯಾಲಯ) ಬುಧವಾರ ವಿಚಾರಣೆಗೆ ಹಾಜರಾದರು.

ವಿಚಾರಣೆ ಆರಂಭವಾಗುತ್ತಿದ್ದಂತೆ ಆರೋಪಿಗಳು, ಆರೋಪಪಟ್ಟಿಯ ಜತೆಗೆ ಇ.ಡಿ. ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲ ದಾಖಲೆಗಳನ್ನು ನೀಡುವಂತೆ ಮನವಿ ಮಾಡಿದರು. ಇ.ಡಿ. ಪರ ವಕೀಲರು, 'ಈ ದಾಖಲೆಗಳನ್ನು ಕೂಡಲೇ ಸಲ್ಲಿಸಲು ಆಗುವುದಿಲ್ಲ. ನಾಲ್ಕೈದು ವಾರಗಳ ಕಾಲಾವಕಾಶ ಬೇಕು' ಎಂದರು. ಅವರ ವಾದವನ್ನು ಸಮ್ಮತಿಸಿದ ನ್ಯಾಯಾಲಯವು ವಿಚಾರಣೆಯನ್ನು ಸೆಪ್ಟೆಂಬರ್ 27ಕ್ಕೆ ಮುಂದೂಡಿತು.

ಶಿವಕುಮಾರ್, ಅವರ ನಿಕಟವರ್ತಿಗಳಾದ ಉದ್ಯಮಿ ಸಚಿನ್ ನಾರಾಯಣ್, ಶರ್ಮಾ ಟ್ರಾನ್ಸ್‌ಪೋರ್ಟ್ ಮಾಲೀಕ ಸುನೀಲ್ ಕುಮಾರ್ ಶರ್ಮಾ, ದೆಹಲಿಯ ಆಂಜನೇಯ ಹನುಮಂತಯ್ಯ ಮತ್ತು ರಾಜೇಂದ್ರ ಎನ್. ವಿರುದ್ಧ ವಿಚಾರಣೆ ಆರಂಭಿಸುವಂತೆ ಕೋರಿ ನ್ಯಾಯಾಲಯಕ್ಕೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಆರೋಪ ಪಟ್ಟಿ ಸಲ್ಲಿಸಿದ್ದರು.

ಈ ವರದಿಯನ್ನು ಮಾನ್ಯ ಮಾಡಿದ ನ್ಯಾಯಾಲಯವು ವಿಚಾರಣೆಗೆ ಹಾಜರಾಗುವಂತೆ ಎಲ್ಲ ಆರೋಪಿಗಳಿಗೂ ಸಮನ್ಸ್ ಜಾರಿ ಮಾಡಿತ್ತು. ಐವರು ಆರೋಪಿಗಳಿಗೆ ನ್ಯಾಯಾಲಯವು ಆಗಸ್ಟ್ 2ರಂದು ಜಾಮೀನು ನೀಡಿತ್ತು.

2017ರಲ್ಲಿ ಶಿವಕುಮಾರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ, ದೆಹಲಿಯ ವಿವಿಧ ಸ್ಥಳಗಳಲ್ಲಿ ₹ 8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು.

ಗೈರುಹಾಜರಿ: ಕ್ರಮಕ್ಕೆ ಸೂಚನೆ

ಬೆಂಗಳೂರು: ಶಾಲಾ ಅವಧಿಯಲ್ಲಿ ಅನಧಿಕೃತವಾಗಿ ಗೈರು ಹಾಜರಾಗುವ, ತಡವಾಗಿ ತರಗತಿಗಳಿಗೆ ಬರುವ ಶಿಕ್ಷಕರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಮಿತಿ ಸಚಿವ ಬಿ.ಸಿ.ನಾಗೇಶ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಾಗಮಂಗಲ ತಾಲ್ಲೂಕು ನೆಲ್ಲಿಗೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಈಚೆಗೆ ಭೇಟಿ ಕೊಟ್ಟಾಗ ಯಾವ ಶಿಕ್ಷಕರೂ ಶಾಲೆಗೆ ಬಂದಿರಲಿಲ್ಲ. ಮಕ್ಕಳು ಶಾಲಾ ಆವರಣದಲ್ಲೇ ಕುಳಿತಿದ್ದರು. ಇಂತಹ ಘಟನೆಗಳು ಶಿಕ್ಷಕರಿಗೆ ಶೋಭೆ ತರುವುದಿಲ್ಲ. ರಾಜ್ಯದ ಯಾವ ಶಾಲೆಗಳಲ್ಲೂ ಇಂತಹ ಘಟನೆಗಳು ಮರುಕಳಿಸಬಾರದು. ಮಕ್ಕಳ ಬೋಧನೆ, ಸುರಕ್ಷತೆಗೆ ಅಡ್ಡಿಯಾಗುವ ಶಿಕ್ಷಕರ ನಡೆ ಕ್ಷಮಿಸಲು ಸಾಧ್ಯವಿಲ್ಲ. ಶಿಸ್ತುಕ್ರಮ ಜರುಗಿಸಬೇಕು ಎಂದು ತಾಕೀತು ಮಾಡಿದ್ದಾರೆ.

ಬೆಂಗಳೂರು ವಿ.ವಿ ಜಾಗ ಹಸ್ತಾಂತರಕ್ಕೆ ವಿರೋಧ

ಯಾವುದೇ ಸಂಸ್ಥೆಗಳಿಗೆ ನೀಡುವುದು ಬೇಡ: ಸಂಘಟನೆಗಳ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಯಾವುದೇ ಸಂಸ್ಥೆಗಳಿಗೂ ನೀಡಬಾರದು ಎಂದು ವಿವಿಧ ಸಂಘಟನೆಗಳು ಒತ್ತಾಯಿಸಿವೆ.

ವಿಶ್ವವಿದ್ಯಾಲಯದ ಶಿಕ್ಷಕರ ಪರಿಷತ್, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಿಕ್ಷಕರ ಸಂಘ, ಶಿಕ್ಷಕೇತರ ನೌಕರರ ಸಂಘ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಿಕ್ಷಕೇತರ ನೌಕರ ಸಂಘಗಳ ಒಕ್ಕೂಟವು ಈ ಬಗ್ಗೆ ಕುಲಪತಿ ಅವರಿಗೆ ಮನವಿ ಸಲ್ಲಿಸಿವೆ.

ಬೆಂಗಳೂರು ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ ಅಡಿಯಲ್ಲಿ ಈ ಸಂಘಟನೆಗಳು ಒಕ್ಕೊರಲ ಆಗ್ರಹ ಮಾಡಿವೆ.

ಯೋಗ ವಿಜ್ಞಾನ ಅಂತರ ವಿಶ್ವ ವಿದ್ಯಾಲಯ ಕೇಂದ್ರಕ್ಕೆ 15 ಎಕರೆ, ವಾಸ್ತುಶಿಲ್ಪ ಪರಿಷತ್ ಮತ್ತು ಅಭಿವೃದ್ಧಿ ಪ್ರಾದೇಶಿಕ ಕೇಂದ್ರಕ್ಕೆ ಎರಡು ಎಕರೆ, ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಗೆ ಒಂದು ಎಕರೆ ಪ್ರದೇಶವನ್ನು ನೀಡಲು ಉದ್ದೇಶಿಸಲಾಗಿದೆ. ವಿಶ್ವವಿದ್ಯಾಲಯ ಈ ಮನವಿಯನ್ನು ಪರಿಗಣಿಸದಿದ್ದರೆ ಹೋರಾಟ ಅನಿವಾರ್ಯ ಎಂದು ಸಂಘಟನೆಗಳ ಪದಾಧಿಕಾರಿಗಳು ಮನವಿಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸರ್ಕಾರ ಮಂಜೂರು ಮಾಡಿದ್ದ 1112 ಎಕರೆ ಜಾಗದಲ್ಲಿ ಈಗಾಗಲೇ ಬಿಎಎಸ್‌ಇಗೆ 40 ಎಕರೆ, ಕಲಾಗ್ರಾಮಕ್ಕೆ 20 ಎಕರೆ ಸೇರಿ 297 ಎಕರೆ ಜಾಗವನ್ನು ಇತರೆ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿದೆ. ಮೂಲಗಳ ಪ್ರಕಾರ ಸುಮಾರು 139 ಎಕರೆ ಒತ್ತುವರಿಯಾಗಿದೆ. 307 ಎಕರೆ ಜಾಗದಲ್ಲಿ ಬಯೋ–ಪಾರ್ಕ್ ಇದೆ. ಇದರಿಂದ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಳಸಲು ಉಳಿಯುವುದು ಕೇವಲ 269 ಎಕರೆ ಜಾಗ ಎಂದು ವಿವರಿಸಿದ್ದಾರೆ.

ವಿಶ್ವವಿದ್ಯಾಲಯದ ಜಾಗವನ್ನು ಯಾವುದೇ ಸಂಸ್ಥೆಗಳಿಗೆ ಮಂಜೂರು ಮಾಡಬಾರದು ಎಂದು 2017ರ ಮೇ 17ರಂದು ನಡೆದ ಸಿಂಡಿಕೇಟ್ ಸಭೆ ಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಗುತ್ತಿಗೆ ಆಧಾರದ ಮೇಲೆ ಜಾಗ ಪಡೆದುಕೊಂಡ ಸಂಸ್ಥೆಗಳು, ವಿಶ್ವವಿದ್ಯಾಲಯದ ಜತೆ ಒಡಂಬಡಿಕೆ ಮಾಡಿಕೊಂಡ ಸಂದರ್ಭದಲ್ಲಿ ವಿಶ್ವ ವಿದ್ಯಾಲಯ ವಿದ್ಯಾರ್ಥಿಗಳಿಗೆ ಮತ್ತು ನೌಕರರಿಗೆ ತಮ್ಮ ಸೌಲಭ್ಯಗಳನ್ನು ಬಳಸಲು ಅನುವು ಮಾಡಿಕೊಡುವುದಾಗಿ ತಿಳಿಸಿವೆ. ಆದರೆ, ಈ ಯಾವುದೇ ಸಂಸ್ಥೆಗಳು ತಮ್ಮ ಸೌಲಭ್ಯಗಳನ್ನು ಬಳಸಲು ವಿಶ್ವವಿದ್ಯಾಲಯಕ್ಕೆ ಅವಕಾಶ ನೀಡಿಲ್ಲ ಎಂದು ದೂರಿದ್ದಾರೆ.

ವಿಶ್ವವಿದ್ಯಾಲಯದ ಅಶೋಕ ಭವನದಲ್ಲಿಯೇ (ಸುಮಾರು ಒಂದು ಎಕರೆ ಜಾಗ) ನಾಲ್ಕು ದೊಡ್ಡ ವಿಭಾಗಗಳು (ಇತಿಹಾಸ ವಿಭಾಗ, ರಾಜ್ಯಶಾಸ್ತ್ರ ವಿಭಾಗ, ಗ್ರಾಮೀಣ ಅಭಿವೃದ್ಧಿ ಕೇಂದ್ರ ಮತ್ತು ಆಂಗ್ಲ ವಿಭಾಗ) ಕಾರ್ಯನಿರ್ವಹಿಸುತ್ತಿವೆ. ಈ ವಿಭಾಗಗಳಲ್ಲಿ ಒಂದು ಕೊಠಡಿಯಲ್ಲಿ ಮೂರು ಅಧ್ಯಾಪಕರು ಆಸೀನರಾಗಿರುವುದು ದುರಂತ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಎಸ್–ವ್ಯಾಸ ಯೋಗ ವಿಶ್ವವಿದ್ಯಾಲಯ ಆನೇಕಲ್ ಬಳಿಯ 100 ಎಕರೆ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ಯೋಗ ವಿಭಾಗವು ಕಳೆದ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರೂ ತನ್ನದೇ ಆದ ಕಟ್ಟಡವಿಲ್ಲ. ವಿಶ್ವವಿದ್ಯಾಲಯದ ಯೋಗ ವಿಭಾಗವು ಎರಡು ಕೊಠಡಿಗಳಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದ್ದಾರೆ.

ವಿಶ್ವವಿದ್ಯಾಲಯದ ಜಾಗದ ಬೆಲೆ ಮಾರುಕಟ್ಟೆಯಲ್ಲಿ ಎಕರೆಗೆ ಸುಮಾರು ₹70 ಕೋಟಿಯಷ್ಟಿದೆ. 18 ಎಕರೆ ಜಾಗದ ಒಟ್ಟು ಮಾರುಕಟ್ಟೆ ಬೆಲೆ ₹1260 ಕೋಟಿ ಎಂದು ತಿಳಿಸಿದ್ದಾರೆ.

'ಮುಜುಗರದ ಹೇಳಿಕೆ ನೀಡಬೇಡಿ'

ಬೆಂಗಳೂರು: ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಆಗುವಂತ ಹೇಳಿಕೆಗಳನ್ನು ನೀಡಬಾರದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಸಚಿವರು ಮತ್ತು ಶಾಸಕರಿಗೆ ಸೂಚನೆ ನೀಡಿದ್ದಾರೆ.

ಈ ಸಂಬಂಧ ಸಚಿವರಾದ ಜೆ.ಸಿ. ಮಾಧುಸ್ವಾಮಿ, ಬಿ.ಶ್ರೀರಾಮುಲು ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರ ಜತೆ ನಳಿನ್ ಕುಮಾರ್ ಬುಧವಾರ ಮಾತುಕತೆ ನಡೆಸಿದರು.

ಸರ್ಕಾರದ ಕಾರ್ಯವೈಖರಿ ಅಥವಾ ಪಕ್ಷದ ಸಂಘಟನೆಗೆ ಸಂಬಂಧಿಸಿದ ಯಾವುದಾದರು ಸಲಹೆ –ಸೂಚನೆಗಳು ಇದ್ದರೆ ಅದನ್ನು ಪಕ್ಷದ ವೇದಿಕೆಯಲ್ಲಿ ಅಥವಾ ಸಚಿವ ಸಂಪುಟ ಸಭೆಯಲ್ಲಿ ತಿಳಿಸಬೇಕು. ಬಹಿರಂಗವಾಗಿ ಹೇಳಿಕೆ ನೀಡಿ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಬಾರದು ಎಂದು ಸೂಚಿಸಿದ್ದಾಗಿ ಮೂಲಗಳು ತಿಳಿಸಿವೆ.

'ಇತ್ತೀಚೆಗೆ ಮಾಧುಸ್ವಾಮಿ ಅವರು ಸರ್ಕಾರ ನಡೆಯುತ್ತಿಲ್ಲ, ಮ್ಯಾನೇಜ್ ಮಾಡುತ್ತಿದ್ದೇವೆ' ಎಂದು ಹೇಳಿದ್ದು, 'ಸಿದ್ದರಾಮಯ್ಯ ಮತ್ತೊಮ್ಮೆ ಮುಖ್ಯಮಂತ್ರಿ ಆಗಲಿ ಎಂದು ಬಯಸುತ್ತೇನೆ' ಎಂದು ಶ್ರೀರಾಮುಲು ಹೇಳಿಕೆ ನೀಡಿರುವುದು ಪಕ್ಷವನ್ನು ಮುಜುಗರಕ್ಕೆ ಸಿಲುಕಿಸಿತ್ತು.

ಸಲಗ ಮತ್ತೆ ಪರಾರಿ!

ಚನ್ನಪಟ್ಟಣ: ತಾಲ್ಲೂಕಿನ ತೆಂಗಿನಕಲ್ಲು ಅರಣ್ಯ ಪ್ರದೇಶದ ಕಾಡನಕುಪ್ಪೆ ಬಳಿ ಅರಣ್ಯ ಇಲಾಖೆ ಸಿಬ್ಬಂದಿಗೆ ಪ್ರಜ್ಞೆತಪ್ಪಿ ಸೆರೆ ಸಿಕ್ಕಿದ್ದ ಒಂಟಿ ಸಲಗವೊಂದು ಕೊನೆಕ್ಷಣದಲ್ಲಿ ಮತ್ತೆ ಎಚ್ಚರಗೊಂಡು ಕಾಡಿಗೆ ಪರಾರಿಯಾಗಿದೆ.

ತಾಲ್ಲೂಕಿನಲ್ಲಿ ರೈತರಿಗೆ ಹಾವಳಿ ನೀಡುತ್ತಿದ್ದ ಎರಡು ಪುಂಡಾನೆಗಳನ್ನು ಸಾಕಾನೆಗಳ ಮೂಲಕ ಸೆರೆ ಹಿಡಿಯಲು ಮುಂದಾಗಿರುವ ಅರಣ್ಯ ಇಲಾಖೆ ಕಾರ್ಯಪಡೆಯ ತಂಡ, ಈಗಾಗಲೇ ತಾಲ್ಲೂಕಿನ ಬಿ.ವಿ.ಹಳ್ಳಿ ಬಳಿಯ ಅರಣ್ಯದಲ್ಲಿ ಪುಂಡಾನೆ ಸೆರೆ ಹಿಡಿದಿದೆ.

ಸುಧಾ, ಮಯೂರ ಓದಿರಿ

ಇಂಡೊನೇಷ್ಯಾದ ನಾಲ್ವರಿಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ



ಶಸ್ತ್ರಚಿಕಿತ್ಸೆಗೆ ಒಳಪಟ್ಟವರು ಹಾಗೂ ಅವರ ಪಾಲಕರ ಜತೆಗೆ ರೋಟೇರಿಯನ್ ಒ.ಪಿ ಖನ್ನಾ, ಡಾ.ಸಿ.ಎನ್. ಮಂಜುನಾಥ್, ಡಾ.ಪಿ.ಎಸ್. ಸೀತಾರಾಮ್ ಭಟ್, ಡಾ. ದಿವ್ಯಾ ಹಾಗೂ ಡಾ. ಉಷಾ ಇದ್ದಾರೆ.

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಇಂಡೊನೇಷ್ಯಾದ ಮೂವರು ಮಕ್ಕಳು ಹಾಗೂ ಯುವತಿಗೆ ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಿದೆ.

ಮಕ್ಕಳು ಹುಟ್ಟಿನಿಂದಲೇ ಸಂಕೀರ್ಣ ಹೃದ್ರೋಗ ಸಮಸ್ಯೆ ಎದುರಿಸುತ್ತಿದ್ದರು. 28 ವರ್ಷದ ಯುವತಿ ಹೃದಯ ಕವಾಟದ ತೊಂದರೆಯಿಂದ ಬಳಲುತ್ತಿದ್ದರು. ಈ ನಾಲ್ವರೂ ಕೂಲಿ ಕಾರ್ಮಿಕ ಕುಟುಂಬದವರಾಗಿದ್ದಾರೆ.

ಇಂಡೊನೇಷ್ಯಾದ ರೋಟರಿ ಸಂಸ್ಥೆ, ಬೆಂಗಳೂರಿನ ಅಂತರರಾಷ್ಟ್ರೀಯ ರೋಟರಿ 3190 ಮತ್ತು ನೀಡಿ ಹಾರ್ಟ್ ಫೌಂಡೇಷನ್‌ನ ರಾಜೇಂದ್ರ ರೈ ಅವರು ನಾಲ್ವರ ಶಸ್ತ್ರಚಿಕಿತ್ಸೆಗೆ ನೆರವಾಗಿದ್ದಾರೆ.

ಕಳೆದ ಜುಲೈ 21ರಂದು ಸಂಸ್ಥೆಗೆ ದಾಖಲಾದ ಮೂರು ವರ್ಷದ ವಿಲಿಯಮ್ ಬುಂಡಾ ಜಯಾ, ಐದು ವರ್ಷದ ಓಸ್ ವಾಲ್ಡೋ ಲೀ, ಮೂರು ವರ್ಷದ ಮಾರ್ಸೆಲೋ ಆರ್ಕಾ ಸೀನ್ ಹಾಗೂ ಇಂಡಾ ಪೃಥ್ವಿ ಟಾನ್‌ಜಂಗ್ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಸಂಸ್ಥೆಯ ವೈದ್ಯರಾದ ಡಾ.ಪಿ.ಎಸ್. ಸೀತಾರಾಮ್ ಭಟ್, ಡಾ. ದಿವ್ಯಾ, ಡಾ. ಜಯರಂಗನಾಥ್ ಹಾಗೂ ಡಾ. ಪ್ರಭಾಕರ್ ಅವರನ್ನು ಒಳಗೊಂಡ ವೈದ್ಯರ ತಂಡ ಯಶಸ್ವಿಯಾಗಿ ಈ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಿದೆ.

'ಜನಿಸಿದ ಪ್ರತಿ ಸಾವಿರ ಮಕ್ಕಳಲ್ಲಿ 6-7 ಮಕ್ಕಳಿಗೆ ಹೃದಯದಲ್ಲಿ ರಂಧ್ರ, ಹೃದಯದ ಕವಾಟ ಸಂಕುಚಿತಗೊಳ್ಳುವಿಕೆ ಸೇರಿ ವಿವಿಧ ಸಂಕೀರ್ಣ ಹೃದ್ರೋಗ ಸಮಸ್ಯೆಗಳು ಕಂಡುಬರುತ್ತಿವೆ. ಹೃದಯದಲ್ಲಿ ರಂಧ್ರ ಇರುವವರಿಗೆ ಜ್ವರ, ಕೆಮ್ಮು, ನೆಗಡಿ, ನ್ಯುಮೋನಿಯಾದಂತಹ ಸಮಸ್ಯೆ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಬೆಳವಣಿಗೆಯಲ್ಲಿ ಕುಂಠಿತ, ಚರ್ಮ ಮತ್ತು ಉಗುರು ನೀಲಿ ಬಣ್ಣಕ್ಕೆ ತಿರುಗುವುದು, ತೂಕ ಕಳೆದುಕೊಳ್ಳುವಿಕೆಯಂತಹ ಸಮಸ್ಯೆಗಳೂ ಕಂಡುಬರುತ್ತವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

'ಗುಣಮುಖರಾಗಿರುವ ನಾಲ್ವರೂ ಸದ್ಯದಲ್ಲೇ ತಮ್ಮ ದೇಶಕ್ಕೆ ಮರಳಲಿದ್ದಾರೆ. ಶಸ್ತ್ರಚಿಕಿತ್ಸೆಯನ್ನು ರಿಯಾಯಿತಿ ದರದಲ್ಲಿ ಮಾಡಲಾಗಿದೆ' ಎಂದು ಹೇಳಿದರು.

ನಗರದಲ್ಲಿ ಇಂದು

ವಚನ ಶ್ರಾವಣ: ವಚನ ಗಾಯನ: ಎಸ್.ಪಿನಾಕಪಾಣಿ, ಉಪನ್ಯಾಸ: ಪ್ರಭು ಇಸುವನಹಳ್ಳಿ, ಅಧ್ಯಕ್ಷತೆ: ಸೂಡಿ ಸುರೇಶ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಎಸ್.ಎಸ್. ಪಬ್ಲಿಕ್ ಸ್ಕೂಲ್, ವಿಘ್ನೇಶ್ವರನಗರ, ಸುಂಕದಕಟ್ಟೆ, ಬೆಳಿಗ್ಗೆ 9.30

ಶ್ರೀಕೃಷ್ಣ ಜನ್ಮಾಷ್ಟಮಿ: ಆಯೋಜನೆ: ಇಸ್ಕಾನ್ ಸಾಂಸ್ಕೃತಿಕ ಕೇಂದ್ರ, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 8ರಿಂದ ರಾತ್ರಿ 10

ಶ್ರೀಕೃಷ್ಣ ಜನ್ಮಾಷ್ಟಮಿ: ಆಯೋಜನೆ: ಇಸ್ಕಾನ್ ಸೌತ್ ಜಯನಗರ, ಸ್ಥಳ: ಕುಚಲಾಂಬಲ್ ಕಲ್ಯಾಣ ಮಹಲ್, ಮಾಧವನ್ ಪಾರ್ಕ್ ಹತ್ತಿರ, ಜಯನಗರ, ಬೆಳಿಗ್ಗೆ 8ರಿಂದ ರಾತ್ರಿ 10

ಶ್ರೀಕೃಷ್ಣ ಜನ್ಮಾಷ್ಟಮಿ: ಆಯೋಜನೆ: ಇಸ್ಕಾನ್, ಸ್ಥಳ: ವೈಕುಂಠ ಹಿಲ್, ಕನಕಪುರ ರಸ್ತೆ, ಬೆಳಿಗ್ಗೆ 9ರಿಂದ 10

ಶ್ರೀಕೃಷ್ಣ ಜನ್ಮಾಷ್ಟಮಿ: ಇಸ್ಕಾನ್, ಸ್ಥಳ: ಶ್ರೀರಾಧಾಕೃಷ್ಣ ದೇವಸ್ಥಾನ, ಹರೇ ಕೃಷ್ಣ ಹಿಲ್, ರಾಜಾಜಿನಗರ, ಬೆಳಿಗ್ಗೆ 9 ರಿಂದ 10

ಸಿದ್ಧಲಿಂಗಯ್ಯ ಅವರ ಬದುಕು–ಬರಹ ರಾಷ್ಟ್ರೀಯ ವಿಚಾರಸಂಕಿರಣ, 'ಬೆಳ್ಳಿಕಿರಣ' ಕೃತಿ ಬಿಡುಗಡೆ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಕೃತಿ ಬಿಡುಗಡೆ: ಕೆ. ನಾರಾಯಣ, ಅತಿಥಿಗಳು: ಡಾ.ಎ.ಕೆ. ಅತ್ರೆ, ಮಾನಸ ಸಿದ್ಧಲಿಂಗಯ್ಯ, ಅಧ್ಯಕ್ಷತೆ: ಡಿ.ಆರ್. ಸುಧಾ, ಬಿ.ಟಿ. ಲಲಿತಾ ನಾಯಕ, ಪುರುಷೋತ್ತಮ ಬಿಳಿಮಲೆ, ಆಯೋಜನೆ: ವಿಜಯ ಕಾಲೇಜು, ಜಯನಗರ, ಸ್ಥಳ: ರಾಮಸ್ವಾಮಿ ಸಭಾಂಗಣ, ವಿಜಯ ಪಿ.ಯು. ಕಾಲೇಜು ಆವರಣ, ಜಯನಗರ, 4ನೇ ಬ್ಲಾಕ್, ಬೆಳಿಗ್ಗೆ 10

'ರಂಗಾಯಣ ನಾಟಕ ತಿರುಗಾಟ' ಉದ್ಘಾಟನಾ ಸಮಾರಂಭ: ಉದ್ಘಾಟನೆ: ವಿ.ಸುನಿಲ್ ಕುಮಾರ್, ಉಪಸ್ಥಿತಿ: ಎನ್. ಮಂಜುಳ, ಪ್ರಕಾಶ್.ಜಿ.ಟಿ., ನಿಟ್ಟಾಲಿ, ಅಡ್ಡಂಡ.ಸಿ. ಕಾರ್ಯಪ್ಪ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಬೆಳಿಗ್ಗೆ 11

ಸಂಸ್ಥಾಪಕರ ದಿನಾಚರಣೆ: ಅಧ್ಯಕ್ಷತೆ: ಸರೋಜಮ್ಮ ಚಂದ್ರಶೇಖರ್, ಅತಿಥಿಗಳು: ಬಿ.ಎಲ್. ಶಂಕರ್, ಸಿ. ನಾರಾಯಣಸ್ವಾಮಿ, ಜಿ.ಕೆ. ವೆಂಕಟೇಶ್, ಆಯೋಜನೆ: ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ, ಸ್ಥಳ: ಶಾರದಾದೇವಿ ಸಭಾಮಂದಿರ, ಶಾರದಾದೇವಿ ಮಹಿಳಾ ಪದವಿಪೂರ್ವ ಕಾಲೇಜು ಗೊಟ್ಟಿಗೆರೆ, ಬನ್ನೇರಘಟ್ಟ ರಸ್ತೆ, ಬೆಳಿಗ್ಗೆ 11.30

ಅತ್ರಿ (ಪರಿಸರ ಸಂಬಂಧಿ ಸಂಶೋಧನಾ ಸಂಘಟನೆ) ಬೆಳ್ಳಿ ಮಹೋತ್ಸವ: ಅತಿಥಿಗಳು: ಕಮಲಜಿತ್ ಎಸ್.ಬಾವ, ಶರತ್ಚಂದ್ರ ಲೆಲೆ, ನಿತಿನ್ ಸೇಕರ್, ಆಯೋಜನೆ: ಅತ್ರಿ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ, ಮಲ್ಲೇಶ್ವರ



ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನೃತ್ಯುಷಾ ಡಾನ್ಸ್ ಅಕಾಡೆಮಿ ವಿದ್ಯಾರ್ಥಿಗಳು, ನಿರ್ದೇಶನ: ನಾಗಶ್ರೀ ಸಾತ್ವಿಕ್, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಜಯನಗರ, 5ನೇ ಬಡಾವಣೆ, ಸಂಜೆ 7.30

ಅಣಕು ಪರೀಕ್ಷೆಯ ಅನುಕೂಲಗಳು



ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವ ಮುನ್ನ ಅಭ್ಯರ್ಥಿಗಳು ಅಣಕು ಪರೀಕ್ಷೆಗಳನ್ನು ಎದುರಿಸಬೇಕು.ಇದರಿಂದ ಆತ್ಮವಿಶ್ವಾಸದೊಂದಿಗೆ ನೈಜ ಪರೀಕ್ಷೆ ಬರೆಯಲು ಅನುಕೂಲವಾಗುತ್ತದೆ.

ಆರ್.ಕೆ. ಬಾಲಚಂದ್ರ

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆಯ (ಐಬಿಪಿಎಸ್) ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆ ಸೇರಿದಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳು ಆನ್‌ಲೈನ್‌ನಲ್ಲಿಯೇ ನಡೆಯುತ್ತವೆ. ಹಾಗಾಗಿ ಈ ಪರೀಕ್ಷೆ ಎದುರಿಸಲು ಒಂದಿಷ್ಟು ತಯಾರಿ ಅಗತ್ಯವಾಗಿದೆ. ಈ ತಯಾರಿಯ ಮೊದಲ ಹೆಜ್ಜೆ ಹಾಗೂ ಸುಲಭದ ಮಾರ್ಗವೆಂದರೆ ಅಣಕು ಪರೀಕ್ಷೆ(ಮಾಕ್ ಟೆಸ್ಟ್) ಬರೆಯುವುದು.

ಅಣಕು ಪರೀಕ್ಷೆ ಏಕೆ ?

ಅಣಕು ಪರೀಕ್ಷೆಯು ಬಹುತೇಕ ನೈಜ ಪರೀಕ್ಷೆ ರೀತಿಯಲ್ಲೇ ಇರುತ್ತದೆ. ಆದ್ದರಿಂದ, ನೈಜ ಪರೀಕ್ಷೆಯ ಪರಿಕಲ್ಪನೆ ಪಡೆಯುವುದಕ್ಕಾಗಿ ಅಣಕು ಪರೀಕ್ಷೆ ಬರೆಯುವುದು ಅಗತ್ಯ. ಅಷ್ಟೇ ಅಲ್ಲ, ಋಣಾತ್ಮಕ ಮೌಲ್ಯಮಾಪನದೊಂದಿಗೆ(Negative Valuation) ಪರೀಕ್ಷೆಯ ವಾತಾವರಣದಲ್ಲಿ ಅಣಕು ಪರೀಕ್ಷೆ ಬರೆದಾಗ ಮಾತ್ರ ಅಭ್ಯರ್ಥಿಗಳು ನಿಜವಾದ ಪರೀಕ್ಷಾ ಹಾಲ್‌ನಲ್ಲಿ ತಮ್ಮ ಸಾಮರ್ಥ್ಯವನ್ನು ಸುಧಾರಿಸಲು ಸಾಧ್ಯವಾಗುತ್ತದೆ. ಆಗಾಗ ಈ ಅಣಕು ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿದ್ದರೆ ಆನ್‌ಲೈನ್ ಪರೀಕ್ಷೆ ಬರೆಯುವ ಆತಂಕವೂ ದೂರವಾಗಬಹುದು. ಜತೆಗೆ ಅಭ್ಯರ್ಥಿಗಳು ತಮ್ಮ ಸಾಮರ್ಥ್ಯವನ್ನು ಪರೀಕ್ಷೆಗಿಂತ ಮೊದಲೇ ತಿಳಿದುಕೊಳ್ಳಲೂಬಹುದು.

ಪರೀಕ್ಷೆ ಹೇಗೆ ಅನುಕೂಲ

ಕಳೆದ ಸಾಲಿನ ಪರೀಕ್ಷೆಯಲ್ಲಿ ಯಾವ ಯಾವ ಅಧ್ಯಾಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಲಾಗಿದೆಯೋ ಅದೆಲ್ಲ, ಈ ಅಣಕು ಪರೀಕ್ಷೆಗಳಿಂದ ತಿಳಿದುಕೊಳ್ಳಬಹುದು. ಆ ಪ್ರಶ್ನೆಗಳನ್ನು ಕ್ರೋಡೀಕರಿಸಿ ಅಂತಹುದೇ ಮಾದರಿಯಲ್ಲಿ ನಡೆಯುವ ಅಣಕು ಪರೀಕ್ಷೆ ಮೂಲಕ ಹೊಸ ರೀತಿಯ ಪ್ರಶ್ನೆಗಳನ್ನು ತಿಳಿದುಕೊಳ್ಳಬಹುದು. ಇದರಿಂದ ಹೆಚ್ಚು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ಅಭ್ಯರ್ಥಿಗಳಿಗೆ ಅನುಕೂಲವಾಗಲಿದೆ.

ಆಪ್ಟಿಟ್ಯೂಡ್, ಬೌದ್ಧಿಕ ಸಾಮರ್ಥ್ಯ(ಮೆಂಟಲ್ ಎಬಿಲಿಟಿ), ರೀಸನಿಂಗ್ ನಂತಹ ಕಷ್ಟಕರ ವಿಷಯಗಳ ಪ್ರಶ್ನೆಗಳನ್ನು ಬಿಡಿಸುವುದು ಹೇಗೆಂಬುದೂ ಇದರಿಂದ ಗೊತ್ತಾಗಲಿದೆ. ಪರೀಕ್ಷೆಗಳಲ್ಲಿ ಸಮಯ ನಿರ್ವಹಣೆಗೆ ಅನುಕೂಲವಾಗಲಿದೆ. ವರ್ಷದಿಂದ ವರ್ಷಕ್ಕೆ ಬದಲಾದ ಅಧ್ಯಾಯಗಳ ಸೂಕ್ತ ಮಾಹಿತಿಯೂ ಲಭ್ಯವಾಗುತ್ತದೆ. ಆಸಕ್ತಿಯ ಅಧ್ಯಾಯಕ್ಕೆ ಹೆಚ್ಚು ಸಮಯ ಮೀಸಲಿಡಲು ಸಾಧ್ಯವಾಗುತ್ತದೆ.

ಎಚ್ಚರಿಕೆ ಅಗತ್ಯ

ಬಹುತೇಕ ನೇಮಕಾತಿ ಪರೀಕ್ಷೆಗಳೂ ಆನ್‌ಲೈನಲ್ಲಿಯೇ ನಡೆಯುತ್ತಿವೆ. ಕೆಲವು ನೇಮಕಾತಿ ಸಂಸ್ಥೆಗಳು ತಮ್ಮ ಜಾಲ ತಾಣದಲ್ಲೇ ಅಣಕು ಪರೀಕ್ಷೆಗಳನ್ನು ನೀಡುತ್ತಿವೆ. ಇಂಥ ಪರೀಕ್ಷೆಯ ವಿಡಿಯೊ ಕೂಡ ಲಭ್ಯವಿರುತ್ತದೆ. ಹಾಗಿದ್ದಾಗ ಮೊದಲು ವಿಡಿಯೊ ನೋಡಿ ಪ್ರಶ್ನೆಗಳನ್ನು ಬಿಡಿಸುವ ಅಭ್ಯಾಸ ಮಾಡಿ. ಕಾರಣ ಪ್ರತಿಯೊಂದು ಪ್ರಶ್ನೆ ಬಿಡಿಸಲು ಶಾರ್ಟ್ ಕಟ್ ವಿಧಾನವನ್ನು ವಿವರಿಸಿರುತ್ತಾರೆ. ಇದರಿಂದ ಸಹಜವಾಗಿ ಸಮಯದ ಉಳಿತಾಯ ಜೊತೆಗೆ ಪರೀಕ್ಷಾರ್ಥಿಗಳಿಗೆ 'ತಾನು ಪ್ರಶ್ನೆಗಳನ್ನು ಬಿಡಿಸಬಲ್ಲೆ' ಎಂಬ ವಿಶ್ವಾಸವೂ ಮೂಡುತ್ತದೆ.

ಉದಾಹರಣೆಗೆ: 'ಕ್ಲಿಯರ್ ಐಎಎಸ್' ಪರೀಕ್ಷೆಯ ಮೂಲಕ ಯುಪಿಎಸ್‌ಸಿ ಪ್ರಿಲಿಮ್ಸ್ ಆನ್‌ಲೈನ್ ಅಣಕು ಪರೀಕ್ಷೆಗಳನ್ನು ಉಚಿತವಾಗಿ ಪ್ರಯತ್ನಿಸಿ ನೋಡಿ. ಇದು ಕಲಿಕೆಯ ಜೊತೆಯಲ್ಲಿ ಪರೀಕ್ಷೆ ಎದುರಿಸಲು ಸಂಯೋಜಿಸಿರುವ ಒಂದು ಹೊಸ ನವೀನ ವೇದಿಕೆಯಾಗಿದೆ. ನೀವು ಎಷ್ಟು ವೇಗವಾಗಿ ಕಲಿಯಬಹುದು ಎಂಬುದನ್ನು ಕಂಡು ನಿಮಗೆ ಆಶ್ಚರ್ಯವಾಗುತ್ತದೆ!

ಇವೆಲ್ಲ ಗೊತ್ತಿರಲಿ

ಈ ರೀತಿಯ ಆನ್‌ಲೈನ್ ಪರೀಕ್ಷೆಗಳನ್ನು ನಡೆಸುವ ನೂರಾರು ಜಾಲತಾಣಗಳಿವೆ. ಆದರೆ ಎಲ್ಲ ಜಾಲತಾಣಗಳೂ ಸರಿಯಾಗಿ ಅಣಕು ಪರೀಕ್ಷೆ ನಡೆಸುತ್ತವೆ ಎಂದೇನೂ ಇಲ್ಲ. ಕೆಲವು ಅಭ್ಯರ್ಥಿಗಳ ದಿಕ್ಕು ತಪ್ಪಿಸುವ ಕೆಲಸವನ್ನೂ ಮಾಡುತ್ತಿವೆ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸಬೇಕು. ಜಾಲತಾಣದ ವಿಶ್ವಾಸಾರ್ಹತೆ ಪರೀಕ್ಷಿಸಿದ ನಂತರವೇ ಪರೀಕ್ಷೆಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಕೆಲವು ಜಾಲತಾಣಗಳು ಉಚಿತ ಅಣಕು ಪರೀಕ್ಷೆ ನಡೆಸಿದರೆ, ಇನ್ನು ಕೆಲವು ನೆಪಮಾತ್ರಕ್ಕೆ ಉಚಿತವಾಗಿ ಕಾರ್ಯನಿರ್ವಹಿಸಿ, ನಂತರ ಹಣ ನೀಡಿ ಹೆಚ್ಚಿನ ಸೌಲಭ್ಯ ಪಡೆಯವಂತೆ ಆಫರ್ ನೀಡುತ್ತವೆ. ಈ ಬಗ್ಗೆ ಎಚ್ಚರವಿರಲಿ. ಇಂಥ 'ಉಚಿತ ಸೇವೆ ' ಯ ಜಾಲತಾಣಗಳು ಇ-ಮೇಲ್ ಮಾಹಿತಿ, ಮೊಬೈಲ್ ನಂಬರ್ ಮತ್ತಿತರ ವಿವರಗಳನ್ನು ಕೇಳುತ್ತವೆ. ನಿಮಗೆ ಕಿರಿಕಿರಿ ಉಂಟುಮಾಡದಿರುವ ಮಾಹಿತಿಯನ್ನೇ ಒದಗಿಸಿ. ಸ್ಪರ್ಧಾತ್ಮಕ ಪರೀಕ್ಷೆಯ ಮಾಹಿತಿ ನೀಡಬೇಡಿ. ಇದಕ್ಕಾಗಿಯೇ ಪ್ರತ್ಯೇಕ ಇ-ಮೇಲ್ ವಿಳಾಸ ಹೊಂದಿದ್ದರೆ ಒಳ್ಳೆಯದು. ಯಾವುದೇ ತಂತ್ರಾಂಶ (ಸಾಫ್ಟ್‌ವೇರ್) ಪಡೆಯಲು ತಿಳಿಸಿದರೆ, ಅದು ಅಗತ್ಯವೇ ಎಂದು ಯೋಚಿಸಿ ಮುಂದುವರಿಯಿರಿ.

(ಮುಂದಿನ ವಾರ: ಅಣಕು ಪರೀಕ್ಷೆಯ ಜಾಲತಾಣಗಳ ಪಟ್ಟಿ)

(ಲೇಖಕರು: ಬ್ಯಾಂಕಿಂಗ್ ತರಬೇತುದಾರರು ಹಾಗೂ ವ್ಯಕ್ತಿತ್ವ ವಿಕಸನ ತರಬೇತುದಾರರು ಮತ್ತು ವೃತ್ತಿ ಮಾರ್ಗದರ್ಶಕರು.ಮಡಿಕೇರಿ)

ಈ ಅಂಶಗಳನ್ನು ಗಮನದಲ್ಲಿಡಿ

- ಉಚಿತ ಎಂಬ ಕಾರಣಕ್ಕೆ ಸಿದ್ಧತೆ ಇಲ್ಲದೆ, ಆಗಾಗ ಆನ್‌ಲೈನ್‌ನಲ್ಲಿ ಅಣಕು ಪರೀಕ್ಷೆ ಬರೆಯಬೇಡಿ. ಹೀಗೆ ಬರೆದಾಗ ಅಂಕಗಳು ಕಡಿಮೆಯಾದರೆ, ನಿರಾಸೆಯಾಗುತ್ತದೆ. ಆಮೇಲೆ ಕುಗ್ಗಿ ಹೋಗುತ್ತೀರಿ. ಕನಿಷ್ಠ ಶೇ 50 ಅಂಕ ತೆಗೆಯುವಷ್ಟು ಅಧ್ಯಯನ ಮಾಡಿ, ಅಣಕು ಪರೀಕ್ಷೆಗಳನ್ನು ಎದುರಿಸಿ.
- ಅಂಕ ಕಡಿಮೆ ಬಂದರೆ ಕುಗ್ಗಬೇಡಿ. ಕ್ರೀಡಾ ಸ್ಫೂರ್ತಿಯಿಂದ ಫಲಿತಾಂಶ ಸ್ವೀಕರಿಸಿ. ಮತ್ತೆ ಸಿದ್ಧತೆಯೊಂದಿಗೆ ಪುನಃ ಪರೀಕ್ಷೆ ಎದುರಿಸಿ.
- ಪ್ರತಿ ವಿಷಯಗಳಿಗೆ ಅಧ್ಯಾಯವಾರು ಪ್ರಶ್ನೆಗಳನ್ನು ಬಿಡಿಸಿದಾಗ ವಿಷಯದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ.
- ಅಣಕು ಪರೀಕ್ಷೆ ತೆಗೆದುಕೊಳ್ಳುವಾಗ ನೀಡಿರುವ ಸೂಚನೆಗಳನ್ನು ಸರಿಯಾಗಿ ಓದಿಕೊಳ್ಳಿ. ಈ ಅಭ್ಯಾಸ ನಿಜವಾದ ಪರೀಕ್ಷೆಯನ್ನು ಎದುರಿಸುವಾಗ ಅನುಕೂಲವಾಗುತ್ತದೆ.
- ನಿಗದಿತ ಸಮಯದಲ್ಲೇ ಅಣಕು ಪರೀಕ್ಷೆ ಎದುರಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ. ಇಲ್ಲಿ ಸಮಯ ನಿರ್ವಹಣೆ ಕಲಿತರೆ, ಪರೀಕ್ಷೆಯಲ್ಲಿ ಉತ್ತರಿಸಲು ನೆರವಾಗುತ್ತದೆ.
- ತಾಂತ್ರಿಕ ಸಮಸ್ಯೆಗಳು ಎದುರಾದರೆ, ಏನಾದರೂ ಗೊಂದಲಗಳಿದ್ದರೆ ತಜ್ಞರನ್ನು ಸಂಪರ್ಕಿಸಿ, ಮಾಹಿತಿ ಪಡೆದುಕೊಳ್ಳಿ.
- ಮೊಬೈಲ್‌ನಲ್ಲಿ ಮಾಕ್ ಟೆಸ್ಟ್ ಬರೆಯುವ ಅಭ್ಯಾಸ ಒಳ್ಳೆಯದಲ್ಲ. ಕಂಪ್ಯೂಟರ್ ಅಥವಾ ಲ್ಯಾಪ್ ಟಾಪ್ ಅನ್ನೇ ಬಳಸಿ.
- ಪರೀಕ್ಷೆ ಮುಗಿಯುವವರೆಗೆ ದಿನದ ಕನಿಷ್ಠ 4 ರಿಂದ 6 ಗಂಟೆಗಳಷ್ಟಾದರೂ ಈ ಅಣಕು ಪರೀಕ್ಷೆಗಾಗಿ ಮೀಸಲಿಡಿ.

ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ, ಕೆಎಸ್‌ಐಎಸ್‌ಎಫ್ ಸೇರಿದಂತೆ ಮುಂದೆ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ.

ಸಾಮಾನ್ಯ ಜ್ಞಾನ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1) ಕರ್ನಾಟಕದಲ್ಲಿ ರಾಜ್ಯ ಸಚಿವ ಸಂಪುಟವು 'ಜಲನೀತಿ – 2022' ಕ್ಕೆ ಒಪ್ಪಿಗೆ ನೀಡಿದೆ. ವಾಣಿಜ್ಯ ಉದ್ದೇಶ ಹಾಗೂ ಕೃಷಿಗೆ ಅಂತರ್ಜಲ ಬಳಕೆಗೆ ಕಡಿವಾಣ ಹಾಕುವುದು, ಕುಡಿಯುವ ನೀರಿನ ಪೂರೈಕೆ ಹಾಗೂ ನೀರಿನ ಸಮರ್ಪಕ ಬಳಕೆಗೆ ಆದ್ಯತೆ ನೀಡುವುದು ಜಲನೀತಿಯ ಆಶಯವಾಗಿದೆ.

2) ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯಕ್ಕೆ ಹೊರಗಿನ ನೀರು, ಸ್ಥಳೀಯ ನೀರು, ಮೇಲ್ಮೈ ನೀರು ಮತ್ತು ಅಂತರ್ಜಲ, ಮೇಲ್ಛಾವಣಿ ನೀರು ಮತ್ತು ತ್ಯಾಜ್ಯ ನೀರಿನ ನಿರ್ವಹಣೆಗೆ ಆದ್ಯತೆ.

3) ನೀರು ಬಳಕೆದಾರರ ಸಂಘ, ನೀರಿನ ಬಳಕೆದಾರರ ಮಹಾಮಂಡಳಿ, ಕೆರೆ ನೀರು ಬಳಕೆದಾರರ ಸಂಘ, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ, ಜಲಾನಯನ ಸಮಿತಿಗಳನ್ನು ಬಲಪಡಿಸಲು ನಿಯಮಿತವಾಗಿ ಸಭೆಗಳನ್ನು ನಡೆಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಜಲನೀತಿ ರಚನೆಯಾಗಿದೆ.

ಉತ್ತರ ಸಂಕೇತಗಳು :

ಎ) 1 ಮತ್ತು 3 ಮಾತ್ರ ಸರಿಯಾಗಿದೆ ಬಿ) 2 ಮತ್ತು 3 ಮಾತ್ರ ಸರಿಯಾಗಿದೆ

ಸಿ) ಎಲ್ಲವೂ ತಪ್ಪಾಗಿವೆ. ಡಿ) 1, 2 ಮತ್ತು 3 ಮೂರು ಸರಿಯಾಗಿವೆ

ಉತ್ತರ: ಡಿ

2) ಕರ್ನಾಟಕದ ಏರೋಸ್ಪೇಸ್ ಮತ್ತು ಡಿಫೆನ್ಸ್ ನೀತಿ- 2022-27ಕ್ಕೆ ಸಚಿವರ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1) 2022-27 ಅವಧಿಯಲ್ಲಿ ₹40 ಸಾವಿರ ಕೋಟಿ ಬಂಡವಾಳ ಹೂಡಿಕೆ ಆಗಲಿದೆ.

2) ಭಾರತದ ಶೇ 25ರಷ್ಟು ವಿಮಾನ ಮತ್ತು ಬಾಹ್ಯಾಕಾಶ ನೌಕೆ ಉದ್ಯಮವು ಕರ್ನಾಟಕದಲ್ಲಿ ನೆಲೆಗೊಳ್ಳಲಿದೆ.

3) ರಕ್ಷಣಾ ಸೇವೆಗಳಿಗಾಗಿ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಉತ್ಪಾದನೆಯಲ್ಲಿ ಶೇ 67ರಷ್ಟು ನಮ್ಮ ರಾಜ್ಯದಲ್ಲಿ ಉತ್ಪಾದಿಸಲಾಗುತ್ತದೆ.

4) ಏರೋಸ್ಪೇಸ್ ಸಂಬಂಧಿತ ರಫ್ತಿನಲ್ಲಿ ಕರ್ನಾಟಕದ ಪಾಲು ಶೇ 65 ಇದ್ದು, ಆ ಪ್ರಮಾಣವನ್ನು ಹೆಚ್ಚಿಸಲಾಗುವುದು.

ಉತ್ತರ ಸಂಕೇತಗಳು:

ಎ) 2 ಮಾತ್ರ ಸರಿಯಾಗಿದೆ ಬಿ) 1 ಮಾತ್ರ ಸರಿಯಾಗಿದೆ

ಸಿ) ಎಲ್ಲವೂ ತಪ್ಪಾಗಿವೆ. ಡಿ) 1 ಮತ್ತು 2 ಎರಡೂ ಸರಿಯಾಗಿದೆ

ಉತ್ತರ: ಡಿ

3) ಸ್ಟಾರ್ಟ್‌ಅಪ್ ಎಕೋಸಿಸ್ಟಮ್ ನಿರ್ಮಿಸುವಲ್ಲಿ ವಿಶ್ವದಲ್ಲೇ ಭಾರತ 3ನೇ ಸ್ಥಾನದಲ್ಲಿದೆ. ಪ್ರಸ್ತುತ ಭಾರತದಲ್ಲಿ 105 ಯೂನಿಕಾರ್ನ್‌ಗಳಿವೆ. ಸುಮಾರು 75 ಸಾವಿರ ಸ್ಟಾರ್ಟ್‌ಅಪ್‌ಗಳಿವೆ. ಹಾಗಾದರೆ 2 ಮತ್ತು 3ನೇ ಹಂತದ ನಗರಗಳಲ್ಲಿ ಶೇಕಡ ಎಷ್ಟು ಸ್ಟಾರ್ಟ್‌ಅಪ್‌ಗಳಿವೆ ?

ಎ) ಶೇ 25 ಬಿ) ಶೇ 49 ಸಿ) ಶೇ 76 ಡಿ) ಶೇ 60

ಉತ್ತರ: ಬಿ

4) ಸಂಕ್ಷಿಪ್ತ ಕನ್ನಡ ಭಾಷೆ ಚರಿತ್ರೆ, ಶೃಂಗಾರ ಲಹರಿ, ಕಲಾದರ್ಶನ, ರಂಗಭೂಮಿ ಮತ್ತು ಸೌಂದರ್ಯ ಪ್ರಜ್ಞೆ ಮೊದಲಾದ ಕೃತಿಗಳನ್ನು ಯಾರು ಬರೆದಿದ್ದಾರೆ?

ಎ) ಪ್ರೊ. ಎಂ.ಎಚ್.ಕೃಷ್ಣಯ್ಯ ಬಿ) ಪ್ರೊ.ಎಲ್.ಎಸ್.ಶೇಷಗಿರಿ ರಾವ್

ಸಿ) ಕೃ.ನರಹರಿ ಡಿ) ಜಿ.ರಾಮಕೃಷ್ಣ

ಉತ್ತರ: ಎ

5) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಕಾರ್ನಿಯಾ ಹಾನಿಯಿಂದ ದೃಷ್ಟಿ ಕಳೆದುಕೊಂಡಿದ್ದ ಭಾರತ ಮತ್ತು ಇರಾನಿನ 20 ಮಂದಿಗೆ ಸಂಶೋಧಕರು ಹಂದಿಯ ಚರ್ಮದಿಂದ ರೂಪಿಸಿದ ಜೈವಿಕ ಕಾರ್ನಿಯಾ (ಕಣ್ಣಿನ ಅತ್ಯಂತ ಪಾರಾದರ್ಶಕ ಪದರ) ಕಸಿ ಮಾಡಿ ದೃಷ್ಟಿ ಮರಳಿ ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

2) ನವದೆಹಲಿಯ ಏಮ್ಸ್ ಸಂಶೋಧಕರು ಸೇರಿದ್ದ ಅಂತಾರಾಷ್ಟ್ರೀಯ ಸಂಶೋಧಕರ ತಂಡವು ಕಾರ್ನಿಯಾ ಕಸಿ ಶಸ್ತ್ರ ಚಿಕಿತ್ಸೆಗೆ ಬೇಕಾದ ಜೈವಿಕ ಕಾರ್ನಿಯಾ ಕಸಿ ಪ್ರಯೋಗದಲ್ಲಿ ಯಶಸ್ವಿಯಾಗಿದೆ.

ಉತ್ತರ ಸಂಕೇತಗಳು :

ಎ) 1 ಮಾತ್ರ ಸರಿಯಾಗಿದೆ ಬಿ) 2 ಮಾತ್ರ ಸರಿಯಾಗಿದೆ

ಸಿ) ಎಲ್ಲವೂ ತಪ್ಪಾಗಿವೆ ಡಿ) 1 ಮತ್ತು 2 ಎರಡೂ ಸರಿಯಾಗಿದೆ

ಉತ್ತರ: ಡಿ

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ನಮ್ಮ ಭೂಮಿಯ ಬಹುಭಾಗ ಆವರಿಸುವ ಸಮುದ್ರವು ಮಾನವನ ಬದುಕಿನ ಪ್ರಮುಖ ಭಾಗವಾಗಿದೆ. ಆದರೆ ಸಮುದ್ರದ ಸುಮಾರು ಶೇ 95ರಷ್ಟು ಭಾಗ ಅನ್ವೇಷಿಸದೇ ಉಳಿದು ಹೋಗಿದೆ.

2) ಬ್ಲೂ ಎಕಾನಾಮಿಗೆ ಉತ್ತೇಜನ ನೀಡುವ ಸಲುವಾಗಿ ಭಾರತ ಸರ್ಕಾರವು ಅಕ್ಟೋಬರ್ 2021ರಲ್ಲಿ ಮೆಗಾ ಓಷನ್ ಮಿಷನ್ 'ಸಮುದ್ರಯಾನ' ಆರಂಭಿಸಿದೆ. ಈಗಾಗಲೇ ಇಂತಹದೇ ಮಿಷನ್‌ಗಳನ್ನು ಅಮೆರಿಕ, ರಷ್ಯಾ ಜಪಾನ್, ಫ್ರಾನ್ಸ್ ಮತ್ತು ಚೀನ ದೇಶಗಳು ಸೃಷ್ಟಿಸಿವೆ.

ಉತ್ತರ ಸಂಕೇತಗಳು :

ಎ) 1 ಮಾತ್ರ ಸರಿಯಾಗಿದೆ ಬಿ) 2 ಮಾತ್ರ ಸರಿಯಾಗಿದೆ

ಸಿ) ಎಲ್ಲವೂ ತಪ್ಪಾಗಿವೆ ಡಿ) 1 ಮತ್ತು 2 ಎರಡೂ ಸರಿಯಾಗಿದೆ

ಉತ್ತರ: ಡಿ

(ಮಾಹಿತಿ: **Spardha Bharati UPSC** ಯೂಟ್ಯೂಬ್ ಚಾನೆಲ್)

ನಿಮಗಿದು ಗೊತ್ತೆ?

ಪಕ್ಷಿಗಳನ್ನು ತಿನ್ನುವ ಜೇಡ

ಸಾಮಾನ್ಯವಾಗಿ ಜೇಡ ಹೆಣೆದಿರುವ ಬಲೆಗೆ ಕೀಟಗಳು ಬೀಳುತ್ತವೆ. ಆ ಕೀಟಗಳನ್ನು ಜೇಡ ತಿಂದು ಹಾಕುತ್ತದೆ. ಆದರೆ ಉಷ್ಣವಲಯದ ಕೆಲ ಪ್ರದೇಶಗಳಲ್ಲಿರುವ ಒಂದು ಬಗೆಯ ಜೇಡ, ಪಕ್ಷಿಯನ್ನೇ ಹಿಡಿದು ತಿನ್ನುತ್ತದೆ.

ಈ ಜೇಡದ ದೇಹ ತುಂಬ ದೊಡ್ಡದಾಗಿರುತ್ತದೆ. ಇಂಥ ಜೇಡವನ್ನು 'ಪಕ್ಷಿ ಭಕ್ಷಕ ಜೇಡ' (Bird eating spider) ಎಂದು ಕರೆಯಲಾಗುತ್ತದೆ. ಇದು ಪಕ್ಷಿಗಳನ್ನಷ್ಟೇ ಅಲ್ಲದೆ, ಇತರ ಸಣ್ಣ ಪ್ರಾಣಿಗಳನ್ನೂ ತಿನ್ನುತ್ತದೆ.

ಈ ಜೇಡ, ಮರದ ಕೊಂಬೆಗಳ ಮೇಲೆ ಬಲೆ ಕಟ್ಟುತ್ತದೆ. ಪಕ್ಷಿ ಈ ಬಲೆಗೆ ಬಿದ್ದ ಕೂಡಲೇ ಜೇಡ ಅದರ ಮೇಲೆ ವಿಷಪೂರಿತ ದ್ರವವೊಂದನ್ನು ಸ್ರವಿಸುತ್ತದೆ. ಆಗ ಪಕ್ಷಿ ಸತ್ತು ಹೋಗುತ್ತದೆ. ಬಳಿಕ ಅದನ್ನು ನಿಧಾನವಾಗಿ ತಿನ್ನುತ್ತದೆ. ಇದು ಮನುಷ್ಯನಿಗೆ ಅಪಾಯಕಾರಿಯಲ್ಲ. ಆದರೆ ಅದು ಕಚ್ಚಿದರೆ, ತುಂಬ ನೋವಾಗುತ್ತದೆ.

ಜೇಡಗಳಲ್ಲಿ ಸುಮಾರು 3000 ಪ್ರಬೇಧಗಳಿವೆ. ಇನ್ನೂ 20,000 ಜಾತಿಗಳಿಗೆ ಸೇರಿದ ಜೇಡಗಳನ್ನು ಗುರುತಿಸಬೇಕಿದೆ. ಇವುಗಳಲ್ಲಿ ಕೆಲವು ಜಾತಿ ಗಳಿಗೆ ಸೇರಿದ ಜೇಡಗಳು ಮನುಷ್ಯನಿಗೆ ತುಂಬ ಹಾನಿಕಾರಕ. ಅಂತಹ ಅಪಾಯಕಾರಿ ಜೇಡಗಳೆಂದರೆ - ಬ್ರೌನ್ ರೆಕ್ಲೂಸ್ (Brown recluse), ಬ್ಲಾಕ್ ವಿಂಡೊ (Black window), ಬ್ರೌನ್ ವಿಂಡೊ(Brown window) ಮತ್ತು ಟರಂಟುಲ (Tarantula). ಯೂರೋಪ್‌ನ ದಕ್ಷಿಣ ಭಾಗದಲ್ಲಿ ತೋಳ ಜೇಡ(Wolf spider) ಎಂಬ ಜಾತಿಗೆ ಸೇರಿದ ಜೇಡವಿದೆ. ಇದರಷ್ಟು ಅಪಾಯಕಾರಿ ಜೇಡ ಮತ್ತೊಂದು ಇಲ್ಲ.

ಉದ್ಯೋಗ ವಾರ್ತೆ

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗಳಿಗೆ ಅರ್ಜಿ

ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು.

- **ಅರ್ಹತೆ:** ಅಂಗನವಾಡಿ ಕಾರ್ಯಕರ್ತೆಯಾಗಲು 10ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು. ಅಂಗನವಾಡಿ ಸಹಾಯಕಿಯರಾಗಲು ಕನಿಷ್ಠ 4ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು.
- **ಒಟ್ಟು ಹುದ್ದೆಗಳ ಸಂಖ್ಯೆ:** 25
- **ಅಂಗನವಾಡಿ ಕಾರ್ಯಕರ್ತೆ:** 03
- **ಅಂಗನವಾಡಿ ಸಹಾಯಕಿ:** 22

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು...


1) ಮಾಹಿತಿ ಭರ್ತಿ ಮಾಡಿದ ಅರ್ಜಿ (ಆನ್‌ಲೈನ್)
2) ಜನನ ಪ್ರಮಾಣ ಪತ್ರ /ಜನ್ಮದಿನಾಂಕ ಇರುವ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ
3) ತಹಶೀಲ್ದಾರರು /ಉಪತಹಶೀಲ್ದಾರರು ಪಡೆದ 1 ವರ್ಷದೊಳಗಿನ ವಾಸಸ್ಥಳ ದೃಢೀಕರಣ
4) ಅಗತ್ಯ ಶೈಕ್ಷಣಿಕ ದಾಖಲೆ ಪತ್ರಗಳು.

- **ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ:** 20-08-2022
- **ಹೆಚ್ಚಿನ ಮಾಹಿತಿಗಾಗಿ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸುವುದು.
- **ಅರ್ಜಿ ಸಲ್ಲಿಸುವ ವೆಬ್‌ಸೈಟ್:** *https://anganwadirecruit.kar.nic.in*

ಸಿಎಸ್‌ಜಿನಲ್ಲಿ ವಿವಿಧ ಹುದ್ದೆಗಳು

- ಮಾಹಿತಿ ತಂತ್ರಜ್ಞಾನ (ಐಟಿ/ಐಸಿಟಿ) ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೆಂಟರ್ ಫಾರ್ ಸ್ಮಾರ್ಟ್ ಗವರ್ನನ್ಸ್ ಸಂಸ್ಥೆಯಲ್ಲಿ(ಸಿಎಸ್‌ಜಿ) ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಸ್ಮಾರ್ಟ್ ಗವರ್ನೆನ್ಸ್ ಕೇಂದ್ರ ನೇಮಕಾತಿ 2022 – ಈ ಶೀರ್ಷಿಕೆಯಡಿ ಉದ್ಯೋಗಗಳ ಭರ್ತಿಗೆ ಸಿಎಸ್‌ಜಿ ಅಧಿಸೂಚನೆ ಹೊರಡಿಸಿದೆ.
- ಸಾಫ್ಟ್‌ವೇರ್ ಎಂಜಿನಿಯರ್, ಟೆಸ್ಟ್ ಎಂಜಿನಿಯರ್ ಸೇರಿದಂತೆ 12 ಭಾಗಗಳಿಗೆ ಅಗತ್ಯವಿರುವ 128 ಹುದ್ದೆಗಳಿಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಇದು ಮೂರು ವರ್ಷಗಳ ಅವಧಿಯ ಗುತ್ತಿಗೆ ಆಧಾರದ ಉದ್ಯೋಗ ಎಂದು ಮಾಹಿತಿ ಪ್ರಕಟಿಸಿರುವ ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ತಿಳಿಸಿದೆ.
- ಅಭ್ಯರ್ಥಿಗಳು ಆಗಸ್ಟ್ 31ರೊಳಗೆ ತಮ್ಮ ಪರಿಚಯ ಪತ್ರವನ್ನು (Curriculum Vitae) careerscsg@karnataka.gov.in ಮೇಲ್‌ಗೆ ಕಳುಹಿಸಬೇಕು.
- ವಿದ್ಯಾರ್ಹತೆ, ಕೆಲಸದ ವಿವರ, ಅರ್ಜಿ ಸಲ್ಲಿಸುವ ಪ್ರಕ್ರಿಯೆ ಸೇರಿದಂತೆ ಹೆಚ್ಚಿನ ಮಾಹಿತಿಗಾಗಿ: ***https://csg.karnataka.gov.in/wp-content/uploads/2022/08/CSG-Hiring-1-Qual-Exp-JD-12.08.2022.pdf***

ಎನ್‌ಎಫ್‌ಟಿ - ಡಿಜಿಟಲ್ ಸ್ವತ್ತು



ಯು.ಟಿ.ಆಯಿಶ ಫರ್ಝಾನ

ಯಾವುದೇ ಕಲಾವಿದರು ಅಥವಾ ಸೃಜನಶೀಲ ಆವಿಷ್ಕಾರಗಳನ್ನು ಮಾಡುವವರು ತಮ್ಮ ವಿಶಿಷ್ಟ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ, ಅದರ ಮಾಲೀಕತ್ವ, ಹಕ್ಕು ಸ್ವಾಮ್ಯ ಮತ್ತು ಆ ಕೃತಿಗಳ ಭವಿಷ್ಯದ ಮೌಲ್ಯಗಳನ್ನು ಖಚಿತಪಡಿಸಿಕೊಳ್ಳಲು ಇರುವ ವೇದಿಕೆಯೇ ನಾನ್ ಫಂಜಿಬಲ್ ಟೋಕನ್(ಎನ್‌ಎಫ್‌ಟಿ).

ಎನ್‌ಎಫ್‌ಟಿ ಎಂದರೆ ಏನು ?

ಫಂಜಿಬಲ್ ಅಂದರೆ 'ಬದಲಾಯಿಸಬಹುದಾದ' ಎಂದು ಅರ್ಥ. ನಾನ್ ಫಂಜಿಬಲ್ ಅಂದರೆ 'ಯಾವ ವಸ್ತುವಿನ ಜತೆಗೂ ಪರ್ಯಾಯ ವಸ್ತುವಿನ ಸೃಷ್ಟಿಯ ಸಾಧ್ಯವಿಲ್ಲದ, ವಿಶಿಷ್ಟ ಮತ್ತು ತನ್ನದೇ ಆದ ಅನನ್ಯ ಗುರುತು ಹೊಂದಿರುವ' ಎಂಬ ಅರ್ಥ ಬರುತ್ತದೆ. ಉದಾ: ಮೊನಾಲಿಸಾ ವರ್ಣಚಿತ್ರ.

ಇಲ್ಲಿ 'ಟೋಕನ್' ಎಂದರೆ ಕಲಾಕೃತಿ, ವಿಡಿಯೊ, ಆಟ, ಆನಿಮೇಟೆಡ್ ಚಿತ್ರಗಳು.. ಹೀಗೆ ಯಾವುದೇ ಉತ್ಪನ್ನವಾಗಿರಬಹುದು. ಉದಾಹರಣೆಗೆ, ಒಂದು ದುಬಾರಿ ಪೇಂಟಿಂಗ್, ಮಹಾರಾಜರೊಬ್ಬರ ಖಡ್ಗ, ಯಾವುದೋ ಐತಿಹಾಸಿಕ ಮಹತ್ವವುಳ್ಳ ಸ್ಮರಣಿಕೆಗಳು, ಸೆಲೆಬ್ರಿಟಿ ಉಡುಪು.. ಇತ್ಯಾದಿ. ಇಂಥ ವಸ್ತುಗಳು ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಸೇರಿವೆ ಎಂಬುದನ್ನು ಪ್ರಮಾಣೀಕರಿಸುವಂತಹ ಒಂದು ತಂತ್ರಜ್ಞಾನದ ವೇದಿಕೆಯೇ ಎನ್‌ಎಫ್‌ಟಿ.

ಈವರೆಗೂ ನಾವು ನೋಡುತ್ತಿರುವ, ಅಂತರ್ಜಾಲದಲ್ಲಿ ಲಭ್ಯವಿರುವ ಚಿತ್ರ ಅಥವಾ ಆಟಗಳಿಗೂ ಮತ್ತು ಎನ್‌ಎಫ್‌ಟಿ ಗೆ ಸೇರಿದ ವಸ್ತುಗಳಿಗಿರುವ ವ್ಯತ್ಯಾಸವೇನು ?

- ಯಾವುದೇ ಚಿತ್ರ ಅಥವಾ ರಚನೆಯನ್ನು (ಟೋಕನ್) ಬ್ಲಾಕ್ ಚೈನ್ ಎಂಬ ಆನ್‌ಲೈನ್ ಜಾಲಕ್ಕೆ ಸೇರಿಸಿದಾಗ ಅದು ಎನ್‌ಎಫ್‌ಟಿ ಆಗುತ್ತದೆ.
- ಆ ಬ್ಲಾಕ್ ಚೈನ್ ಜಾಲದಲ್ಲಿ ಈ ಟೋಕನ್ ಅನ್ನು ಸೇರಿಸಿದಾಗ ಅದಕ್ಕೆ ಒಂದು ವಿಶಿಷ್ಟವಾದ ಸರಣಿ ಸಂಖ್ಯೆಯನ್ನು ನಿಗದಿಪಡಿಸಲಾಗುತ್ತದೆ. ಪ್ರತಿ ವಸ್ತುವನ್ನು ಎನ್‌ಎಫ್‌ಟಿಗೆ ಸೇರಿಸಿದಾಗ, ಅದರದ್ದೇ ಆದ ವಿಶಿಷ್ಟ ಸರಣಿ ಸಂಖ್ಯೆಯನ್ನು ಹೊಂದುತ್ತದೆ ಮತ್ತು ಅದು ಆ ವಸ್ತುವನ್ನು ನಾನ್ ಫಂಜಿಬಲ್ (ಪರ್ಯಾಯ ವಸ್ತು ಸೃಷ್ಟಿ ಅಸಾಧ್ಯ)ಆಗಿ ಮಾಡುತ್ತದೆ.
- ಸರಳವಾಗಿ ಹೇಳುವುದಾದರೆ ನಾನ್ ಫಂಜಿಬಲ್ ಟೋಕನ್ ಎಂದರೆ 'ಬ್ಲಾಕ್ ಚೈನ್ ಜಾಲಕ್ಕೆ ಸೇರಿಸಿದ ನಂತರ ತನ್ನದೇ ವಿಶಿಷ್ಟ ಸರಣಿ ಸಂಖ್ಯೆಯನ್ನು ಹೊಂದಿರುವ ವಸ್ತು' ಎನ್ನಬಹುದು.
- ಈ ವ್ಯವಸ್ಥೆಯಲ್ಲಿ 'ಈ ಜಗತ್ತಿನ ವಿಶಿಷ್ಟ ವಸ್ತುವಿನ ಮಾಲೀಕತ್ವ ನಿಮ್ಮದು' ಎಂಬ ಡಿಜಿಟಲ್ ಪ್ರಮಾಣ ಪತ್ರವೂ ಸಿಗುತ್ತದೆ. ಈ ಡಿಜಿಟಲ್ ಪ್ರಮಾಣ ಪತ್ರವನ್ನು ತಿದ್ದುಪಡಿ ಮಾಡಲು ಅಥವಾ ಹಾನಿ ಮಾಡಲು ಸಾಧ್ಯವಿರುವುದಿಲ್ಲ. ಇದು ಭೌತಿಕ ಆಸ್ತಿ ಅಥವಾ ವರ್ಚುಯಲ್ ಆಸ್ತಿಗಳನ್ನು ಸಂಪರ್ಕಿಸುತ್ತದೆ.

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನವೊಂದರ ಕುರಿತಮಾಹಿತಿ ಇಲ್ಲಿದೆ.

ಎನ್‌ಎಫ್‌ಟಿಗಳ ಪ್ರಯೋಜನ

- ಕಲಾವಿದರು ಮತ್ತು ಸೃಜನಶೀಲ ಅವಿಷ್ಕಾರಗಳನ್ನು ಮಾಡುವ ಮಂದಿ ಎನ್‌ಎಫ್‌ಟಿಯಾದ ತಮ್ಮ ರಚನೆ/ಕೃತಿಗಳನ್ನು ಜಗತ್ತಿನಾದ್ಯಂತ ಸುಲಭವಾಗಿ ಪ್ರದರ್ಶನ ಮತ್ತು ಮಾರಾಟ ಮಾಡಬಹುದು.
- ಇದು ಕಲಾವಿದರು ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ಸಾಂಪ್ರದಾಯಿಕ ರೀತಿಯ ಕಲಾಗ್ಯಾಲರಿಗಳ ಪ್ರದರ್ಶನ ಮತ್ತು ಹರಾಜುಗಳ ಮೇಲೆ ಅವಲಂಬಿಸುವುದನ್ನು ತಪ್ಪಿಸುತ್ತದೆ.

ರಾಯ ಧನ(ರಾಯಲ್ಟಿ)

- ಪ್ರತಿ ಬಾರಿ ಒಬ್ಬ ವ್ಯಕ್ತಿಯ ಎನ್‌ಎಫ್‌ಟಿ ಮಾರಾಟವಾದ ಮೇಲೆ, ಖರೀದಿಸಿದ ಗ್ರಾಹಕ ಅದನ್ನು ಮರು ಮಾರಾಟ ಮಾಡಲು ನಿರ್ಧರಿಸಿದರೆ ಅದರ ಬೆಲೆಯ ನಿರ್ದಿಷ್ಟ ಶೇಕಡಾವಾರು ಪ್ರಮಾಣವನ್ನು ಮೂಲ ಕಲಾವಿದರು ಪಡೆಯಬಹುದು.
- ಸಾಂಪ್ರದಾಯಿಕ ವ್ಯಾಪಾರದಲ್ಲಿ ಮೊದಲ ಮಾರಾಟದಲ್ಲಿಯೇ ಮೂಲ ಕಲಾವಿದನಿಗೂ ಆ ಉತ್ಪನ್ನಕ್ಕೂ ನಡುವಿನ ವಾಣಿಜ್ಯ ಸಂಬಂಧ ಕಳಚಿ ಹೋಗುತ್ತದೆ. ಆದರೆ, ಎನ್‌ಎಫ್‌ಟಿಯಲ್ಲಿ ಗ್ರಾಹಕರಿಂದ ಗ್ರಾಹಕರಿಗೆ ಕೈ ಬದಲಾಗುತ್ತಿದ್ದಂತೆಯೇ ಪ್ರತಿ ಬಾರಿಯೂ ಮೂಲ ಕಲಾವಿದರಿಗೆ ರಾಯಧನ ಪಾವತಿಸಲಾಗುತ್ತದೆ.
- ಇದು ಡಿಜಿಟಲ್ ವಸ್ತುವಿನ ಮೇಲಿನ ಮಾಲೀಕತ್ವವನ್ನು ಖಚಿತಪಡಿಸುತ್ತದೆ.

ಎನ್‌ಎಫ್‌ಟಿಗಳ ವೈಶಿಷ್ಟ್ಯ

- ಪ್ರತಿ ಎನ್‌ಎಫ್‌ಟಿಗಿರುವ ಸರಣಿ ಸಂಖ್ಯೆಯ ಗುರುತಿನೊಂದಿಗೆ ಮತ್ತೊಂದು ಎನ್‌ಎಫ್‌ಟಿ ರಚಿಸಲು ಸಾಧ್ಯವಿಲ್ಲ. ಇದೆಲ್ಲವನ್ನು ಬ್ಲಾಕ್ ಚೈನ್ ಮೂಲಕವೇ ನೋಡಬಹುದು ಮತ್ತು ಪರಿಶೀಲಿಸಬಹುದು.
- ಬ್ಲಾಕ್ ಚೈನ್‌ನಲ್ಲಿರುವ ಆ ಟೋಕನ್‌ನ ಮಾಲೀಕರು ಆ ಚಿತ್ರ ಮತ್ತು ಸ್ವತ್ತನ್ನು ಬಳಸಲು ಸಂಪೂರ್ಣ ಹಕ್ಕು ಸ್ವಾಮ್ಯ ಹೊಂದಿರುತ್ತಾರೆ.
- ಎನ್‌ಎಫ್‌ಟಿಗಳನ್ನು ನಕಲು ಮಾಡಲು ಸಾಧ್ಯವಾಗದ ಕಾರಣ ಅವು ಕಡಿಮೆ ಸಂಖ್ಯೆಯಲ್ಲಿರುತ್ತವೆ. ಹಾಗಾಗಿ ಅಂಥ ವಸ್ತುಗಳಿಗೆ ಸಹಜವಾಗಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ.
- ಒಂದು ಟೋಕನ್‌ನ ಮೆಟಾ ಡೇಟಾವನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ. ಆ ಚಿತ್ರ ಅಥವಾ ಟೋಕನ್ ಹೆಸರನ್ನು ಯಾರು ಅಳಿಸಲೂ ಸಾಧ್ಯವಿಲ್ಲ. ಹಾಗೆಯೇ, ಅದನ್ನು ಬ್ಲಾಕ್ ಚೈನ್‌ನಿಂದ ತೆಗೆದುಹಾಕಲು ಸಾಧ್ಯವಿಲ್ಲ ಮತ್ತು ಬದಲಾಯಿಸಲು ಸಾಧ್ಯವಿಲ್ಲ.
- ಎನ್‌ಎಫ್‌ಟಿ ಗಳು ಸುರಕ್ಷಿತವಾಗಿ ಸಂರಕ್ಷಿಸಬಹುದಾದ, ಡೌನ್ಲೋಡ್ ಮಾಡಬಹುದಾದ ಮತ್ತು ಮರು ಮಾರಾಟ ಮಾಡಬಹುದಾದ ಸೌಲಭ್ಯಗಳನ್ನು ಹೊಂದಿವೆ.

ಎನ್‌ಎಫ್‌ಟಿ ಒಂದು ಕ್ರಿಪ್ಟೊಕರೆನ್ಸಿಯೇ ?

ಖಂಡಿತಾ ಅಲ್ಲ. ಕ್ರಿಪ್ಟೊ ಕರೆನ್ಸಿಗಳು ಫಂಜಿಬಲ್ ಆಗಿರುತ್ತವೆ. ಒಂದು ಬಿಟ್ ಕಾಯಿನ್ ಅನ್ನು ಮತ್ತೊಂದು ಬಿಟ್ ಕಾಯಿನ್‌ಗೆ ಬದಲಾಯಿಸಬಹುದು. ಆದರೆ ಎನ್ ಎಫ್ ಟಿ ಗಳನ್ನು ಮತ್ತೊಂದು ಎನ್ ಎಫ್ ಟಿ ಯಿಂದ ಬದಲಾಯಿಸಲು ಸಾಧ್ಯವಿಲ್ಲ. ಅವು ಸಂಪೂರ್ಣ ವಿಭಿನ್ನ ಮೌಲ್ಯ ಹೊಂದಿರುತ್ತವೆ.

ಅಕ್ರಮದ ಬಗ್ಗೆ ದೂರು ನೀಡಿ ಸುಸ್ತಾದ 'ತಬರ'ನ ಕತೆ

ನ್ಯಾಯಕ್ಕಾಗಿ ಎರಡೂವರೆ ವರ್ಷ ಏಕಾಂಗಿಯಾಗಿ ಅಲೆದಾಟ

• ವಿಜಯಕುಮಾರ್ ಎಸ್.ಕೆ.



ವಿ.ಬಸವರಾಜ

ಬೆಂಗಳೂರು: ಗೃಹ ನಿರ್ಮಾಣ ಸಹಕಾರ ಸಂಘವೊಂದರಲ್ಲಿ ಅಕ್ರಮ ನಡೆದಿದೆ ಎಂದು ದೂರು ನೀಡಿದ ನಿವೃತ್ತ ನೌಕರರೊಬ್ಬರು ಎರಡೂವರೆ ವರ್ಷದಿಂದ ಏಕಾಂಗಿಯಾಗಿ ಸರ್ಕಾರಿ ಕಚೇರಿಗಳ ಬಾಗಿಲು ತಟ್ಟುತ್ತಿದ್ದಾರೆ. ಸಹಕಾರ ಇಲಾಖೆ, ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ), ಪೊಲೀಸ್ ಇಲಾಖೆಗೆ ದೂರುಗಳ ಮೇಲೆ ದೂರು ನೀಡಿ ನ್ಯಾಯ ಸಿಗದೆ 'ತಬರ'ನಂತಾಗಿದ್ದಾರೆ.

'ಲಿಂಗಧೀರನಹಳ್ಳಿ ಡಿ ಗ್ರೂಪ್ ಬಡಾವಣೆಯ ಹೌಸಿಂಗ್ ಸೊಸೈಟಿಯ ಪದಾಧಿಕಾರಿಗಳು ಕಾನೂನುಬಾಹಿರವಾಗಿ ನಿವೇಶನ ಹಂಚಿಕೆ ಮಾಡಿದ್ದಾರೆ. ಹಂಚಿಕೆಯಾದ ಕೆಲ ನಿವೇಶನಗಳನ್ನು ರದ್ದು ಮಾಡಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದಾರೆ' ಎಂದು ಆರೋಪಿಸಿ ಇದೇ ಬಡಾವಣೆಯ 71 ವರ್ಷ ವಯಸ್ಸಿನ ವಿ. ಬಸವರಾಜ ಅವರು 2020 ಏಪ್ರಿಲ್‌ನಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಿಕರಿಗೆ ದೂರು ನೀಡಿದ್ದರು.

ದೂರಿನ ಸಂಬಂಧ ಯಾವುದೇ ಕ್ರಮ ಕೈಗೊಳ್ಳದ ಜಂಟಿ ನಿಬಂಧಕರ ವಿರುದ್ಧ ಎಸಿಬಿಗೆ ದೂರು ನೀಡಿದ್ದರು. ಎಸಿಬಿ ಕಚೇರಿಯಲ್ಲೂ ಎಂಟು ತಿಂಗಳ ಕಾಲ ದೂರು ನನೆಗುದಿಗೆ ಬಿದ್ದಿತ್ತು. ದೂರಿನ ಬಗ್ಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂಬ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಕೋರಿದರು. ಆಗ ಎಚ್ಚೆತ್ತ ಎಸಿಬಿ ಅಧಿಕಾರಿಗಳು, ದೂರನ್ನು ಸಹಕಾರ ಇಲಾಖೆಗೆ ವರ್ಗಾಯಿಸಿದರು. ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರು ಸಹಕಾರ ಸಂಘಗಳ ರಿಜಿಸ್ಟ್ರಾರ್‌ಗೆ ರವಾನಿಸಿದರು. ಅವರು ಅದೇ ಜಂಟಿ ನಿಬಂಧಕರಿಗೆ ವಾಪಸ್ ಪತ್ರ ರವಾನಿಸಿದರು.

'ಅರ್ಜಿಯು ಎಸಿಬಿ, ಸಹಕಾರ ಇಲಾಖೆ, ರಿಜಿಸ್ಟ್ರಾರ್ ಕಚೇರಿ ಸುತ್ತಾಡಿ ಬರುವಷ್ಟರಲ್ಲಿ 2 ವರ್ಷ ಕಳೆದಿತ್ತು. 2 ವರ್ಷಗಳ ಹಿಂದೆ ಇದೇ ಜಂಟಿ ನಿಬಂಧಿಕರಿಗೆ ನೀಡಿದ್ದ ದೂರು ಆಧರಿಸಿ ತನಿಖೆ ಆರಂಭಿಸಿದ್ದರೆ ಸುತ್ತಾಡುವ ಅಗತ್ಯ ಇರುತ್ತಿರಲಿಲ್ಲ. ವಿನಾಕಾರಣ ಎರಡು ವರ್ಷ ನನ್ನನ್ನು ಸುತ್ತಾಡಿಸಿದರು' ಎಂದು ಬಸವರಾಜ ಬೇಸರ ವ್ಯಕ್ತಪಡಿಸುತ್ತಾರೆ.

'ಉಪ ನಿಬಂಧಕರಿಗೆ ಪತ್ರ ರವಾನಿಸಿ ಗೃಹ ನಿರ್ಮಾಣ ಸಂಘಕ್ಕೆ ಖುದ್ದು ಭೇಟಿ ನೀಡಿ ಮಾಹಿತಿ ಪಡೆದು 7 ದಿನಗಳಲ್ಲಿ ಸಲ್ಲಿಸುವಂತೆ ಜಂಟಿ ನಿಬಂಧಕರು ತಿಳಿಸಿದ್ದಾರೆ. ಒಂದೂವರೆ ತಿಂಗಳಾದರೂ ಯಾವುದೇ ಪ್ರಕ್ರಿಯೆ ನಡೆದಿಲ್ಲ. ಮತ್ತೊಮ್ಮೆ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದೇನೆ' ಎಂದರು.

'ಅಕ್ರಮ ನಡೆದಿದೆ ಎಂದು ದೂರು ನೀಡಿದ ತಪ್ಪಿಗೆ ನಾನು ಕಚೇರಿಗಳ ಬಾಗಿಲು ಸವೆಸಿದ್ದೇನೆ. ಅಕ್ರಮ ಎಸಗಿದವರು ನಿಶ್ಚಿಂತೆಯಿಂದ ಇದ್ದಾರೆ. ದೂರು ನೀಡಿದವರನ್ನು ಸರ್ಕಾರಿ ಅಧಿಕಾರಿಗಳು ಇಷ್ಟೊಂದು ಸತಾಯಿಸಿದರೆ ಸಾಮಾನ್ಯ ಜನರಿಗೆ ನ್ಯಾಯ ಸಿಗುವುದು ಹೇಗೆ' ಎಂದು ಅವರು ನೋವಿನಿಂದ ಪ್ರಶ್ನಿಸಿದರು.

'ಪ್ರತಿಭಟನೆಗೆ ಅನುಮತಿ ಕೋರಿದ್ದ ಅರ್ಜಿಯೂ ಬಾಕಿ'

ಎಸಿಬಿ ಕಚೇರಿ ಸುತ್ತಾಡಿ ಬಂದರೂ ತನಿಖೆ ಆರಂಭಿಸದ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಚೇರಿ ಎದುರು ಏಕಾಂಗಿ ಧರಣಿ ನಡೆಸಲು ಮಲ್ಲೇಶ್ವರ ಪೊಲೀಸ್ ಠಾಣೆಗೆ ಬಸವರಾಜ್ ಮನವಿ ಸಲ್ಲಿಸಿದ್ದರು.

'ಆರು ತಿಂಗಳು ಕಳೆದರೂ ಅನುಮತಿ ದೊರಕಲಿಲ್ಲ. ಅನುಮತಿ ನೀಡಲು ಸಾಧ್ಯವಿಲ್ಲ ಎಂಬ ಹಿಂಬರಹವನ್ನೂ ನೀಡಲಿಲ್ಲ. ಮನವಿಗೆ ಉತ್ತರ ನೀಡದ ಮಲ್ಲೇಶ್ವರ ಪೊಲೀಸರ ವಿರುದ್ಧ ಪೊಲೀಸ್ ಕಮಿಷನರ್ ಕಚೇರಿಗೆ ದೂರು ನೀಡಿದೆ. ಅಲ್ಲಿಯೂ ಮೂರು ತಿಂಗಳು ಉತ್ತರ ಸಿಗಲಿಲ್ಲ' ಎಂದು ಬಸವರಾಜ್ ಹೇಳಿದರು.

'ದೂರಿನ ಬಗ್ಗೆ ಕ್ರಮ ಕೈಗೊಂಡ ಮಾಹಿತಿ ಕೋರಿ ಮೂರು ತಿಂಗಳ ಬಳಿಕ ಪೊಲೀಸ್ ಕಮಿಷನರ್ ಅವರಿಗೆ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಹೋದಾಗ ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ರವಾನೆ ಆಯಿತು. ಇದೀಗ ಹಿಂಬರಹ ನೀಡಿದ್ದಾರೆ. ಹೈಕೋರ್ಟ್ ಆದೇಶ ಇರುವುದರಿಂದ ಸ್ವಾತಂತ್ರ್ಯ ಉದ್ಯಾನ ಹೊರತಾಗಿ ಯಾವ ಕಚೇರಿ ಎದುರೂ ಧರಣಿ ನಡೆಸುವಂತಿಲ್ಲ ಎಂದು ತಿಳಿಸಿದ್ದಾರೆ' ಎಂದರು.

'ಸಾರ್ವಜನಿಕ ಸಾರಿಗೆ ಬಳಕೆಯೇ ಸಂಚಾರ ದಟ್ಟಣೆ ನಿವಾರಣೆಗೆ ದಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಖಾಸಗಿ ವಾಹನಗಳು ಅಧಿಕವಾಗಿರುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಸಾರ್ವಜನಿಕ ಸಾರಿಗೆಯನ್ನು ಜನರು ಹೆಚ್ಚು ಬಳಸಿದರೆ ಸಮಸ್ಯೆ ಸಾಕಷ್ಟು ನಿವಾರಣೆಯಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಐಎನ್‌ಎಚ್‌ಎಫ್– ಹ್ಯಾಬಿಟ್ಯಾಟ್ ಫೋರಂ ಆಯೋಜಿಸಿದ್ದ '21ನೇ ಶತಮಾನದಲ್ಲಿ ನಗರಗಳ ಅಭಿವೃದ್ಧಿ' ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ನಗರದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿರುವುದರ ಜೊತೆಗೆ ಸಾಕಷ್ಟು ಮೂಲಸೌಕರ್ಯಗಳ ಕೊರತೆಯನ್ನೂ ಎದುರಿಸಲಾಗುತ್ತಿದೆ. ಯೋಜನಾತ್ಮಕವಾಗಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮುಂದಿನ 20 ವರ್ಷ ನಗರ ಬೆಳೆಯುತ್ತಲೇ ಹೋಗುತ್ತದೆ. ಮುಂದುವರಿದ ನಗರವನ್ನು ಅರೆ ನಗರವನ್ನಾಗಿ ರೂಪಿಸಬೇಕಾಗಿದೆ. ಸೌಲಭ್ಯ ಅಥವಾ ಸೇವೆಗಳನ್ನು ವಿಕೇಂದ್ರೀಕರಣ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಬಿಬಿಎಂಪಿ ಕಾರ್ಯಗತವಾಗಿದೆ' ಎಂದರು.

'ನಗರದಲ್ಲಿ ಘನತ್ಯಾಜ್ಯ ಹಾಗೂ ದ್ರವತ್ಯಾಜ್ಯದ ಸಮಸ್ಯೆ ಬಗ್ಗೆ ಸಾಕಷ್ಟು ಜನರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ನಾವು ನಿಯಂತ್ರಿಸಲು ಸಾಕಷ್ಟು ವಿಕೇಂದ್ರೀಕೃತ ಸೌಲಭ್ಯಗಳನ್ನು ಸ್ಥಾಪಿಸುತ್ತಿದ್ದೇವೆ. ವಾರ್ಡ್‌ವಾರು ತ್ಯಾಜ್ಯ ಸಂಸ್ಕರಣೆ ಇದರಲ್ಲಿ ಒಂದಾಗಿದೆ' ಎಂದು ಹೇಳಿದರು.

'ನಗರಗಳ ಬೆಳವಣಿಗೆಯಲ್ಲಿ 'ಮಾಸ್ಟರ್ ಪ್ಲಾನ್' ರೂಪಿಸುವಲ್ಲಿ ಸ್ಥಳೀಯ ಆಡಳಿತಗಳು ವಿಫಲವಾಗಿವೆ. ಯೋಜನೆಯಂತೆ ಅಭಿವೃದ್ಧಿಯಾಗದಿರುವುದು ಸಮಸ್ಯೆಗಳು ಹೆಚ್ಚಾಗಲು ಕಾರಣ' ಎಂದು ಸಿಎನ್‌ಟಿ ಆರ್ಕಿಟೆಕ್ಟ್ಸ್‌ನ ವ್ಯವಸ್ಥಾಪಕ ಪಾಲುದಾರ ಪ್ರೇಮ್ ಚಂದಾವರ್ಕರ್ ಹೇಳಿದರು.

'ವಸತಿಗಾಗಿ ನೈಸರ್ಗಿಕ ಪ್ರದೇಶಗಳಾದ ಕೆರೆಯಂತಹ ಸ್ಥಳಗಳನ್ನು ಉಪಯೋಗಿಸಿಕೊಳ್ಳುವ ಸಂದರ್ಭ ಬಾರದಂತೆ ಯೋಜನೆ ರೂಪಿಸುವುದು ನಗರಗಳಲ್ಲಿ ಅತ್ಯಗತ್ಯವಾಗಿದೆ' ಎಂದು ಅಮೆರಿಕದ ವಾಸ್ತುಶಿಲ್ಪಿ ಕ್ಯಾತೆ ದೊರ್ಗಾನ್ ಅಭಿಪ್ರಾಯಪಟ್ಟರು.

ನಗರದ ಸುಬ್ರಹ್ಮಣ್ಯಪುರ ವರ್ಷ ಕಳೆದಂತೆ ಹೇಗೆ ಬದಲಾಯಿತು, ಅಲ್ಲಿನ ಕೆರೆಯ ಪ್ರದೇಶದಲ್ಲಿ ಬಂದು ವಾಸ ಮಾಡುವವರನ್ನು ತೆರವುಗೊಳಿಸುವುದು ಎಷ್ಟು ಕಷ್ಟವಾಗುತ್ತಿದೆ, ಇದಕ್ಕಾಗಿ ನ್ಯಾಯಾಲಯದಲ್ಲಿನ ಹೋರಾಟ ಹೇಗೆ ನಡೆಯುತ್ತಿದೆ ಎಂಬುದನ್ನು ವಕೀಲ ಲಿಯೊ ಸಲ್ಡಾನಾ ವಿವರಿಸಿದರು.

'ರಾಜಕಾಲುವೆ ನಿರ್ವಹಣೆ ಯೋಜನೆಯಲ್ಲಿ ಸಾಕಷ್ಟು ಕೊರತೆ ಇದೆ. ಇವುಗಳ ನಿರ್ವಹಣೆಯಿಂದ ಮಳೆಗಾಲದಲ್ಲಿ ಸಮಸ್ಯೆಗಳೇ ಹೆಚ್ಚಾಗುತ್ತಿವೆ' ಎಂದು ವಿಎ ಗ್ರೂಪ್‌ನ ಪ್ರಧಾನ ಆರ್ಕಿಟೆಕ್ಟ್ ನರೇಶ್ ನರಸಿಂಹನ್ ಹೇಳಿದರು.

ಇಎಸ್‌ಜಿ ಟ್ರಸ್ಟಿ ಭಾರ್ಗವಿ ರಾವ್ ಕಾರ್ಯಕ್ರಮ ನಿರೂಪಿಸಿದರು.

ಪ್ರವಾಸಕ್ಕೆ ಕರೆದೊಯ್ದು ಪತ್ನಿ ಕೊಲೆ

ಬೆಂಗಳೂರು: ಅನೈತಿಕ ಸಂಬಂಧದ ಶಂಕೆ ವ್ಯಕ್ತಪಡಿಸಿ ಪತ್ನಿಯನ್ನು ಪ್ರವಾಸಕ್ಕೆ ಕರೆದೊಯ್ದು ಸಿನಿಮೀಯ ಶೈಲಿಯಲ್ಲಿ ಕೊಲೆ ಮಾಡಿದ್ದ ಬಿಹಾರದ ಪೃಥ್ವಿರಾಜ್ (23) ಎಂಬಾತನನ್ನು ಮಡಿವಾಳ ಪೊಲೀಸರು ಬಂಧಿಸಿದ್ದಾರೆ. ಜ್ಯೋತಿ ಕುಮಾರಿ (38) ಕೊಲೆಯಾದವರು.

'ಪೃಥ್ವಿರಾಜ್ ಹಾಗೂ ಜ್ಯೋತಿ ಕುಮಾರಿ ಇಬ್ಬರೂ ಬಿಹಾರದವರು. ಇಬ್ಬರ ಮಧ್ಯೆ ವಯಸ್ಸಿನ ಅಂತರವಿದ್ದರೂ ಪರಸ್ಪರ ಪ್ರೀತಿಸಿ ಮದುವೆ ಆಗಿದ್ದರು. ಬೆಂಗಳೂರಿಗೆ ಬಂದು ನೆಲೆಸಿದ ಮೇಲೆ ಜ್ಯೋತಿ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಂಡಿದ್ದರೂ ಯಶಸ್ವಿಯಾಗಿರಲಿಲ್ಲ. ಬಳಿಕ ಜ್ಯೋತಿಗೆ ಪುಟ್ಟರಾಜ್ ಎಂಬ ಯುವಕನ ಪರಿಚಯವಾಗಿತ್ತು. ಇವರಿಬ್ಬರೂ ಸಲುಗೆಯಿಂದ ಮಾತುಕತೆ ನಡೆಸುವುದನ್ನು ಕಂಡು ಪೃಥ್ವಿರಾಜ್ ಬೇಸರಗೊಂಡಿದ್ದ. ಇಬ್ಬರ ಮಧ್ಯೆ ಅನೈತಿಕ ಸಂಬಂಧದ ಶಂಕೆ ವ್ಯಕ್ತಪಡಿಸಿ ಕೊಲೆಗೆ ಸಂಚು ರೂಪಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಿಹಾರದ ಸ್ನೇಹಿತ ಸಮೀರ್ ಕುಮಾರ್ ಎಂಬಾತನೊಂದಿಗೆ ಸೇರಿಕೊಂಡು ಆಗಸ್ಟ್ 1ರಂದು ಮಲ್ಪೆಯ ಪ್ರವಾಸಕ್ಕೆ ಮೂವರೂ ಕಾರಿನಲ್ಲಿ ತೆರಳಿದ್ದರು. ಆಳ ಸಮುದ್ರಕ್ಕೆ ತಳ್ಳಿ ಕೊಲೆ ಮಾಡುವ ಯೋಜನೆಯಿತ್ತು. ಆದರೆ, ಆ. 2ರಂದು ಉಡುಪಿಯಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದರ ಪರಿಣಾಮ ಸಮುದ್ರಕ್ಕೆ ಇಳಿಯುವುದಕ್ಕೆ ನಿರ್ಬಂಧವಿತ್ತು. ತಕ್ಷಣವೇ ತಮ್ಮ ಯೋಜನೆ ಬದಲಾಯಿಸಿ ಬೆಂಗಳೂರಿಗೆ ವಾಪಸ್ ಬರುವಾಗ ಶಿರಾಡಿ ಘಾಟ್‌ನ ರಾಜಘಟ್ಟ ಎಂಬಲ್ಲಿ ದುಪಟ್ಟಾದಿಂದ ಆಕೆಯ ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಲಾಗಿತ್ತು. ಮೃತದೇಹವನ್ನು ಅರಣ್ಯ ಪ್ರದೇಶಕ್ಕೆ ಎಸೆದು ಸುಳಿವು ಸಿಗದಂತೆ ಮಾಡಲಾಗಿತ್ತು. ಬೆಂಗಳೂರಿಗೆ ವಾಪಸ್ ಬಂದು ಪತ್ನಿ ಕಾಣೆಯಾಗಿದ್ದಾರೆಂದು ಪೃಥ್ವಿರಾಜ್ ದೂರು ನೀಡಿದ್ದ.'

'ಮೂವರೂ ಕಾರನ್ನೇರಿ ತೆರಳಿದ್ದು, ವಾಪಸ್ ಬರುವಾಗ ಇಬ್ಬರೇ ಬಂದಿದ್ದು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿತ್ತು. ಅನುಮಾನಗೊಂಡು ಪೃಥ್ವಿರಾಜ್‌ನನ್ನೇ ಮೊದಲು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಪ್ರಕರಣ ಬೆಳಕಿಗೆ ಬಂದಿದೆ. ಸಮೀರ್‌ಕುಮಾರ್ ತಲೆಮರೆಸಿಕೊಂಡಿದ್ದಾನೆ' ಎಂದು ಮೂಲಗಳು ಹೇಳಿವೆ.



ಸ್ವಾತಂತ್ರ್ಯದ ನೆನಪು

ಸ್ವಾತಂತ್ರ್ಯೋತ್ಸವದ ಅಂಗವಾಗಿ ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿನ ವಿದ್ಯಾಮಾನ್ಯ ವಿದ್ಯಾ ಕೇಂದ್ರದ ವಿದ್ಯಾರ್ಥಿಗಳು ಬ್ರಿಟಿಷರ ವಿರುದ್ಧದ ಹೋರಾಟಗಳನ್ನು ನೆನಪಿಸುವ ರೂಪಕ ನಡೆಸಿಕೊಟ್ಟರು

ಉತ್ತರ ವಿಭಾಗದ ಪೊಲೀಸರ ಕಾರ್ಯಾಚರಣೆ: 61 ಆರೋಪಿಗಳ ಬಂಧನ

₹ 2 ಕೋಟಿ ಮೌಲ್ಯದ ವಸ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಿಭಾಗದ ವಿವಿಧ ಪೊಲೀಸ್ ಠಾಣೆಗಳಲ್ಲಿ ಮಾದಕ ವಸ್ತು, ರಕ್ತಚಂದನ ಮಾರಾಟ, ಸುಲಿಗೆ, ಸರ ಕಳವು, ಮೊಬೈಲ್ ಸುಲಿಗೆ, ಮನೆಯಲ್ಲಿ ಚಿನ್ನಾಭರಣ ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದ 61 ಆರೋಪಿಗಳನ್ನು ಬಂಧಿಸಿ, ₹ 2 ಕೋಟಿ ₹ 40 ಸಾವಿರ ಮೌಲ್ಯದ ವಸ್ತು ವಶ ಪಡಿಸಿಕೊಳ್ಳಲಾಗಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಉತ್ತರ ವಿಭಾಗದ 15 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆಸಿದ ಕಾರ್ಯಾಚರಣೆಯ ಮಾಹಿತಿ ನೀಡಿದರು.

ಒಟ್ಟು 89 ಪ್ರಕರಣ ಗಳಲ್ಲಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ತಿಳಿಸಿದರು. 'ಐವರಿ ಕೋಸ್ಟ್ ದೇಶದ ಪ್ರಜೆಯ ವೀಸಾ ಅವಧಿ ಮುಗಿದಿದ್ದರೂ ಬೆಂಗಳೂರಿನಲ್ಲಿ 2012ರಿಂದಲೂ ಅಕ್ರಮವಾಗಿ ನೆಲೆಸಿದ್ದ. ಜತೆಗೆ ಗಾಂಜಾ ಪೂರೈಕೆ ಮಾಡುತ್ತಿದ್ದ. ಆತನನ್ನು ಬಂಧಿಸಿ 1.9 ಕೆ.ಜಿ ಚರಸ್, 5 ಕೆ.ಜಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ಮತ್ತೊಂದು ಪ್ರಕರಣದಲ್ಲಿ ರಾಜಾಜಿ ನಗರದಲ್ಲಿ ಮಾದಕ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದ ಮೂವರನ್ನು ಬಂಧಿಸಲಾಗಿದೆ. 662 ಗ್ರಾಂ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ' ಎಂದರು.

ಅಪರಾಧ ಸುದ್ದಿ

ಆಂಧ್ರಪ್ರದೇಶದಿಂದ ರಕ್ತಚಂದನ ತಂದು ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿ ₹ 35 ಲಕ್ಷ ಮೌಲ್ಯದ 722 ಕೆ.ಜಿ ರಕ್ತಚಂದನ ವಶಕ್ಕೆ ಪಡೆಯಲಾಗಿದೆ.

ಬಾಡಿಗೆ ಕೇಳುವ ನೆಪದಲ್ಲಿ ಸುಲಿಗೆ: ಪೀಣ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆ ಬಾಡಿಗೆ ಕೇಳುವ ನೆಪದಲ್ಲಿ ಬಂದು ಚಾಕು ತೋರಿಸಿ, ಮನೆಯ ಮಾಲೀಕರನ್ನೇ ಸುಲಿಗೆ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ 70 ಗ್ರಾಂ ಚಿನ್ನಾಭರಣ, 120 ಗ್ರಾಂ ಬೆಳ್ಳಿ ಸಾಮಗ್ರಿ, ನಾಲ್ಕು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ.

ದೇವನಹಳ್ಳಿ ರಸ್ತೆಯಲ್ಲಿ ನಡೆದಿದ್ದ ಸುಲಿಗೆ ಪ್ರಕರಣದ ಆರೋಪಿಗಳನ್ನು ಸಂಜಯನಗರ ಪೊಲೀಸರು ಆಂಧ್ರಪ್ರದೇಶದದಲ್ಲಿ ಬಂಧಿಸಿದ್ದಾರೆ. ಬಂಧಿತರಿಂದ ನಾಡ ಪಿಸ್ತೂಲ್, 11 ಜೀವಂತ ಗುಂಡು ವಶಕ್ಕೆ ಪಡೆದಿದ್ದಾರೆ. ಶ್ರೀರಾಮಪುರ ವ್ಯಾಪ್ತಿಯಲ್ಲಿ ಕನ್ನಿಕಾ ಪರಮೇಶ್ವರ ದೇವಸ್ಥಾನಕ್ಕೆ ಭಕ್ತರ ಸೋಗಿನಲ್ಲಿ ಬಂದು ದೇವಿಯ ಸರ, ತಾಳಿ ಕಳವು ಮಾಡಿದ್ದ ಆರೋಪಿಯನ್ನು ಬಂಧಿಸಲಾಗಿದೆ ಎಂದರು.

ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳ್ಳಿ ಸಾಮಗ್ರಿ ಕಳವು ಮಾಡಿದ್ದ ಹಾಗೂ ಆರ್‌ಎಂಸಿ ಠಾಣೆಯ ವ್ಯಾಪ್ತಿಯಲ್ಲಿ ಬಾಗಿಲು ಒಡೆದು ಚಿನ್ನಾಭರಣ ದೋಚಿದ್ದ ಅಮೆಜಾನ್ ಡೆಲಿವರಿ ಬಾಯ್ ಒಬ್ಬನನ್ನು ಬಂಧಿಸಲಾಗಿದೆ ಎಂದು ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್, ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ್ ಹಾಜರಿದ್ದರು.

ಪೊಲೀಸ್ ಹೆಲ್ಮೆಟ್ ಧರಿಸಿ ಓಡಾಟ

ಮೊಬೈಲ್ ಕಸಿದು ಪರಾರಿಯಾಗಿದ್ದ ಪ್ರಕರಣದಲ್ಲಿ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಎಂಜಿನಿಯರಿಂಗ್ ಪದವೀಧರ, ಪೀಣ್ಯದ ನವೀನ್ (23) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಈತ ಪೊಲೀಸ್ ಹೆಲ್ಮೆಟ್ ಧರಿಸಿ, ಯಾರಿಗೂ ಅನುಮಾನ ಬಾರದಂತೆ ಓಡಾಟ ನಡೆಸುತ್ತಿದ್ದ. ದ್ವಿಚಕ್ರ ವಾಹನ ತಪಾಸಣೆ ವೇಳೆ ವೇಳೆ ಸಿಕ್ಕಿ ಬಿದ್ದಿದ್ದಾನೆ ಎಂದು ಆಯುಕ್ತರು ತಿಳಿಸಿದರು. ಮೊಬೈಲ್ ವಶಕ್ಕೆ ಪಡೆಯಲಾಗಿದೆ.

ಹೆಡ್ ಕಾನ್‌ಸ್ಟೆಬಲ್‌ಗೆ ಇರಿದ ಆರೋಪಿ

ಬೆಂಗಳೂರು: ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆತರಲು ತೆರಳಿದ್ದ ವೇಳೆ ಮಹಿಳಾ ಹೆಡ್ ಕಾನ್‌ಸ್ಟೆಬಲ್ ವಿನುತಾ (45) ಅವರಿಗೆ ಆರೋಪಿ ಡ್ರ್ಯಾಗರ್‌ನಿಂದ ಇರಿದ ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಆರೋಪಿ ಶೇಕ್ ಶರೀಫ್ (25) ಕೊಲೆ ಹಾಗೂ ಕೊಲೆಯತ್ನ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿದ್ದ. ಇತ್ತೀಚೆಗೆ ಜಾಮೀನಿನ ಮೇಲೆ ಹೊರಬಂದಿದ್ದ. ನ್ಯಾಯಾಲಯಕ್ಕೆ ವಿಚಾರಣೆಗೂ ಹಾಜರಾಗದೆ ತಲೆಮರೆಸಿಕೊಂಡಿದ್ದ. ಆತನ ಸುಳಿವು ಪಡೆದ ಪೊಲೀಸರ ತಂಡವು ಠಾಣೆಗೆ ಕರೆತರಲು ತೆರಳಿದ್ದ ವೇಳೆ ಡ್ರ್ಯಾಗರ್‌ನಿಂದ ಇರಿದು ಪರಾರಿಯಾಗಲು ಯತ್ನಿಸಿದ್ದ. ವಿನುತಾ ಅವರ ಜತೆಗಿದ್ದ ಪೊಲೀಸರು ಆರೋಪಿಯನ್ನು ಹಿಡಿದು ಠಾಣೆಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಹಿಳಾ ಹೆಡ್ ಕಾನ್‌ಸ್ಟೆಬಲ್ ಅವರು ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ. ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಬಿಎಂಪಿ ಚುನಾವಣೆ: ನ್ಯಾಯೋಚಿತವಾಗಿ ವಾರ್ಡ್ ಮರು ವಿಂಗಡಣೆಗೆ ಮನವಿ

ಜಿಜ್ಞಾಸೆ ಪರಿಹಾರಕ್ಕೆ 'ಸುಪ್ರೀಂ' ನಿರ್ದೇಶನ ಬಯಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್ ಪುನರ್ ವಿಂಗಡಣೆ ಹಾಗೂ ಮೀಸಲು ನಿಗದಿ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪಿನ ಭಿನ್ನ ನಿಲುವುಗಳಿಂದಾಗಿ ಸ್ಪಷ್ಟನೆ ಬೇಕು ಎಂದು ಬಯಸಿರುವ ಕರ್ನಾಟಕ ಹೈಕೋರ್ಟ್, 'ಈ ಕುರಿತಂತೆ ಸುಪ್ರೀಂ ಕೋರ್ಟ್‌ನಿಂದ ಉತ್ತರ ಪಡೆದುಕೊಂಡು ಬನ್ನಿ' ಎಂದು ಎಲ್ಲ ಅರ್ಜಿದಾರರಿಗೆ ನಿರ್ದೇಶಿಸಿದೆ.

ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣೆ ಪ್ರಶ್ನಿಸಿ ಹೈಕೋರ್ಟ್ ವಕೀಲ ಎಸ್. ಇಸ್ಮಾಯಿಲ್ ಜಬೀವುಲ್ಲಾ, ಶಾಂತಿನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ನಂದಕುಮಾರ್, ಯುವಕ ಕಲ್ಯಾಣ ಸಂಘದ ಕಾರ್ಯದರ್ಶಿ ಉಮಾಶಂಕರ್, ಮಡಿವಾಳದ ಮಾರುತಿನಗರದ ಮಾಜಿ ಪಾಲಿಕೆ ಸದಸ್ಯ ಬಿ.ಎನ್.ಮಂಜುನಾಥ ರೆಡ್ಡಿ, ಬೆಂಗಳೂರು ದಕ್ಷಿಣ ಭಾಗದ ಕೂಡ್ಲು ವಿನಾಯಕನಗರದ ನಿವಾಸಿ ಎಂ.ನವೀನ್, ಕೆಎಸ್ಆರ್‌ಟಿಸಿ ಲೇಔಟ್‌ನ ಎಸ್.ಡಿ.ಗುರುರಾಜ್, ಆನೇಕಲ್ ಸಿಂಗಸಂದ್ರದ ಎಸ್.ಆರ್. ಪ್ರತೀಶ್ ಕುಮಾರ್, ಶಾಸಕ ಬಿ.ಝಡ್. ಜಮೀರ್ ಅಹಮದ್ ಸೇರಿ ಒಟ್ಟು ಒಂಬತ್ತು ಜನರ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲರಾದ ಅಶೋಕ ಹಾರನಹಳ್ಳಿ, ಎ.ಎಸ್.ಪೊನ್ನಣ್ಣ, ಕೆ.ಅರವಿಂದ ಕಾಮತ್ ವಾದ ಮಂಡಿಸಿ, 'ನಾವು ಚುನಾವಣೆ ನಡೆಯುವುದನ್ನು ವಿರೋಧಿಸುತ್ತಿಲ್ಲ. ಆದರೆ, ಆಯೋಗ ಹೇಳುವಂತೆ ಪ್ರತಿ ವಿಧಾನಸಭಾ ಕ್ಷೇತ್ರದ ಭೌಗೋಳಿಕ ವ್ಯಾಪ್ತಿಯೊಳಗೇ ಜನಸಂಖ್ಯೆಗೆ ಅನುಗುಣವಾಗಿ ವಾರ್ಡ್ ವಿಂಗಡಣೆ ಮಾಡಲಾಗಿದೆ ಎಂದು ಹೇಳುತ್ತಿರುವುದು ಸರಿಯಲ್ಲ' ಎಂಬ ಆಕ್ಷೇಪವನ್ನು ಪುನರುಚ್ಚರಿಸಿದರು.

'ಆಡಳಿತರೂಢ ಸರ್ಕಾರವು ಬಿಜೆಪಿಯ ಶಾಸಕರು ಇರುವ ಕಡೆ ಒಂದು ವಾರ್ಡ್ ಜನಸಂಖ್ಯೆಯನ್ನು 30 ಸಾವಿರಕ್ಕೆ ಮಿತಿಗೊಳಿಸಿದ್ದರೆ, ಬಿಜೆಪಿಯೇತರ ವಿಧಾನಸಭಾ ಕ್ಷೇತ್ರಗಳಲ್ಲಿ 39 ಸಾವಿರದವರೆಗೆ ಏರಿಸಿದೆ. ಇದು ಅವೈಜ್ಞಾನಿಕ ಹಾಗೂ ಸರ್ಕಾರ ತನ್ನ ಅನುಕೂಲಕ್ಕೆ ತಕ್ಕಂತೆ ವಿಂಗಡಣೆ ಮಾಡಿಕೊಂಡಿರುವ ಕ್ರಮ. ಹಾಗಾಗಿ ನ್ಯಾಯೋಚಿತವಾದ ಪುನರ್ ವಿಂಗಡಣೆ ಯಾಗಬೇಕು. ಸಂವಿಧಾನದ ಆಶಯಗಳಿಗೆ ಧಕ್ಕೆಯಾಗದಂತೆ ಚುನಾವಣೆ ನಡೆಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರನ್ನು, 'ಶಿವಾಜಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಖ್ಯೆ ಕಡಿಮೆಯಾಗಿದೆ ಎಂಬುದಕ್ಕೆ ಯಾವ ದಾಖಲೆ ಇದೆ ತೋರಿಸಿ' ಎಂದು ಕುಟುಕಿತು.

ಇದಕ್ಕೆ ಏನನ್ನೂ ಪ್ರತಿಕ್ರಿಯಿಸದ ಫಣೀಂದ್ರ ಅವರು, 'ಬಿಬಿಎಂಪಿ ಮತದಾರರ ಪಟ್ಟಿ ತಯಾರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸೆಪ್ಟೆಂಬರ್ 22ರೊಳಗೆ ಅದನ್ನು ಅಂತಿಮಗೊಳಿಸಲಾಗುವುದು' ಎಂದು ತಿಳಿಸಿದರು.

ಅಂತೆಯೇ, 'ಸುರೇಶ್ ಮಹಾಜನ್ ಪ್ರಕರಣದ ಅನುಸಾರ ಅರ್ಜಿದಾರರ ತಕರಾರು ಬಗೆಹರಿಸಲು ಸುಪ್ರೀಂ ಕೋರ್ಟ್ ತೀರ್ಪಿನ ಭಿನ್ನ ನಿಲುವು ನ್ಯಾಯಪೀಠದ ಕೈಕಟ್ಟಿ ಹಾಕಿದೆ. ಈ ಜಿಜ್ಞಾಸೆಯನ್ನು ಸುಪ್ರೀಂ ಕೋರ್ಟ್‌ನಿಂದಲೇ ಬಗೆಹರಿಸಿಕೊಂಡು ಸ್ಪಷ್ಟನೆ ಪಡೆದುಕೊಂಡು ಬನ್ನಿ' ಎಂದು ಎಲ್ಲ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು. ಸುಪ್ರೀಂ ಕೋರ್ಟ್‌ನಲ್ಲಿ ಇದೇ 26ಕ್ಕೆ ಕುರಿತಂತೆ ವಿಚಾರಣೆ ನಿಗದಿಯಾಗಿದೆ.

ಸುಪ್ರೀಂ ಕೋರ್ಟ್‌ನಿಂದ ಹೈಕೋರ್ಟ್‌ಗೆ...

ಬಿಬಿಎಂಪಿ ಚುನಾವಣೆ ವಿಚಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಇದರಿಂದಾಗಿ, ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ವಾರ್ಡ್‌ಗಳ ಪುನರ್‌ರಚನೆಯ ಕರಡು ಹೊರಡಿಸಲಾಗಿತ್ತು. ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್ ಜನಸಂಖ್ಯೆ ಹೆಚ್ಚಿಸಿರುವುದು ಮತ್ತು ಒಂದು ವಾರ್ಡ್ ಅನ್ನು ಕಡಿಮೆ ಮಾಡಿರುವುದನ್ನು ಎಸ್. ಇಸ್ಮಾಯಿಲ್ ಜಬೀವುಲ್ಲಾ ಆಕ್ಷೇಪಿಸಿದ್ದರು.

ಈ ಕುರಿತಂತೆ ಅವರು, ಬಿಬಿಎಂಪಿ ಆಯುಕ್ತರಿಗೆ ಮನವಿ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸದ ಕಾರಣ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಕ್ಷೇತ್ರ ಪುನರ್‌ವಿಂಗಡಣೆ ವಿಚಾರವನ್ನು ಹೈಕೋರ್ಟ್‌ನಲ್ಲೇ ಪ್ರಶ್ನಿಸಿಕೊಳ್ಳಿ ಎಂದು ಅವರಿಗೆ ಸ್ವಾತಂತ್ರ್ಯ ನೀಡಿತ್ತು. ಇದರಿಂದಾಗಿ, ಇಸ್ಮಾಯಿಲ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗಳ ಜೊತೆಗೆ ಈಗ ಮತ್ತಷ್ಟು ಅರ್ಜಿಗಳು ಸೇರ್ಪಡೆಯಾಗಿವೆ.

'ಬಿಜೆಪಿಯಿಂದ ಬಿಬಿಎಂಪಿ ಚುನಾವಣೆ ವಿಳಂಬ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರ ಅವೈಜ್ಞಾನಿಕವಾಗಿ ಬಿಬಿಎಂಪಿ ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಿರುವುದರಿಂದ ಚುನಾವಣೆ ವಿಳಂಬವಾಗುತ್ತಿದೆ' ಎಂದು ಬಿಬಿಎಂಪಿಯ ಆಡಳಿತ ಪಕ್ಷದ ಮಾಜಿ ನಾಯಕ ಎನ್. ನಾಗರಾಜ್ ಆರೋಪಿಸಿದರು.

'ಬಿಜೆಪಿ ಸರ್ಕಾರಕ್ಕೆ ಬಿಬಿಎಂಪಿಗೆ ಚುನಾವಣೆ ನಡೆದು ಕಾರ್ಪೊರೇಟರ್‌ಗಳು ಬರುವುದು ಬೇಕಿಲ್ಲ. ಹೀಗಾಗಿ ಎರಡು ವರ್ಷಗಳಿಂದ ಚುನಾವಣೆ ನಡೆಸಲು ಮುಂದಾಗಿಲ್ಲ. ಇದೀಗ ವಾರ್ಡ್‌ಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಪುನರ್‌ವಿಂಗಡಣೆ ಮಾಡದೆ ಎಲ್ಲರಿಗೂ ಅನ್ಯಾಯ ಮಾಡಿದ್ದಾರೆ' ಎಂದು ದೂರಿದರು.

'ವಾರ್ಡ್ ವಿಂಗಡಣೆಯನ್ನು ರಾಜಕೀಯ ದುರುದ್ದೇಶದಿಂದ ಮಾಡಲಾಗಿದೆ. ಕಾಂಗ್ರೆಸ್ ಪಕ್ಷದ ಶಾಸಕರಿರುವ ಕ್ಷೇತ್ರದಲ್ಲಿ 39 ಸಾವಿರ ಮತದಾರರ ವಾರ್ಡ್ ಮಾಡಿದ್ದಾರೆ. ಅದೇ ಬಿಜೆಪಿ ಶಾಸಕರಿರುವ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ 30 ಸಾವಿರ ಜನರಿಗೆ ವಾರ್ಡ್ ವಿಂಗಡಣೆ ಮಾಡಿದ್ದಾರೆ' ಎಂದು ಆರೋಪಿಸಿದರು.

'ಬಿಬಿಎಂಪಿ ವಾರ್ಡ್‌ಗಳನ್ನು ಆಯುಕ್ತರು, ಜಿಲ್ಲಾಧಿಕಾರಿ ಸೇರಿ ಅಧಿಕಾರಿಗಳ ತಂಡ ಜನಸಂಖ್ಯೆಗೆ ಅನುಗುಣವಾಗಿ ಪುನರ್ ವಿಂಗಡಣೆ ಮಾಡಬೇಕಿತ್ತು. ಆದರೆ ಬಿಜೆಪಿ ಶಾಸಕರು ಈ ಪುನರ್‌ವಿಂಗಡಣೆ ಕಾರ್ಯವನ್ನು ಮಾಡಿದ್ದಾರೆ. ಅವರ ಹಿತಾಸಕ್ತಿಗೆ ಅನುಗುಣವಾಗಿ ನ್ಯಾಯ ಯುತವಲ್ಲದ, ಜನವಿರೋಧಿ ರೀತಿಯಲ್ಲಿ ವಾರ್ಡ್ ಪುನರ್‌ವಿಂಗಡಣೆ ಮಾಡಿದ್ದಾರೆ' ಎಂದು ದೂರಿದರು.

'ವಾರ್ಡ್ ವಿಂಗಡಣೆಗೆ ಸಂಬಂಧಿಸಿದಂತೆ ನ್ಯಾಯಾಲಯ ಯಾವ ರೀತಿಯ ತೀರ್ಮಾನ ನೀಡುತ್ತದೆಯೋ ಅದಕ್ಕೆ ನಾವು ಬದ್ಧರಾಗಿದ್ದೇವೆ' ಎಂದರು.

ಗಲಾಟೆ: ವ್ಯಕ್ತಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಗ್ಗನಹಳ್ಳಿಯಲ್ಲಿ ಬುಧವಾರ ರಾತ್ರಿ ನಡೆದ ಗಲಾಟೆಯಲ್ಲಿ ಚಾಕುವಿನಿಂದ ಇರಿತಕ್ಕೆ ಒಳಗಾದ ಅಜಿಮುಲ್ಲಾ ಖಾನ್ (43) ಎಂಬುವರು ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ.

ಪಕ್ಕದ ಮನೆಯವರೊಂದಿಗೆ ಗಲಾಟೆ ನಡೆದಿದ್ದು ಆರೋಪಿ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ. ಘಟನೆಗೆ ಕಾರಣ ತಿಳಿದುಬಂದಿಲ್ಲ. ಆರೋಪಿಯ ಹಿನ್ನೆಲೆಯ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ್ ತಿಳಿಸಿದ್ದಾರೆ.



ಬೆಂಗಳೂರಿನ ಕನಕಪುರ ಮುಖ್ಯರಸ್ತೆಯಲ್ಲಿರುವ ಕಮ್ಮವಾರಿ ಸಂಘದ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಆಯೋಜಿಸಲಾಗಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಏಕತೆಯ ಪ್ರತಿಜ್ಞಾ ವಿಧಿ ಬೋಧಿಸಲಾಯಿತು

ಬಿಎಸ್‌ವೈ ನೇಮಕ 'ಮಿಷನ್ ದಕ್ಷಿಣ್'ಗೆ ಸಹಕಾರಿ: ಮುಖ್ಯಮಂತ್ರಿ ಬೊಮ್ಮಾಯಿ

ಬೆಂಗಳೂರು: ದಕ್ಷಿಣದ ರಾಜ್ಯಗಳಾದ ತಮಿಳುನಾಡು, ಆಂಧ್ರ, ತೆಲಂಗಾಣದಲ್ಲಿ ಹೆಚ್ಚಿನ ಸ್ಥಾನಗಳಿಸಲು 'ಮಿಷನ್ ದಕ್ಷಿಣ್' ಬಗ್ಗೆ ಪ್ರಧಾನಿ ಮೋದಿ ಇತ್ತೀಚೆಗೆ ಮಾತನಾಡಿದ್ದರು. ಈ ದಿಸೆಯಲ್ಲಿ ಯಡಿಯೂರಪ್ಪ ಅವರಿಗೆ ಸಂಸದೀಯ ಮಂಡಳಿಯಲ್ಲಿ ಸ್ಥಾನ ನೀಡಿರುವುದು ಹೆಚ್ಚಿನ ಬಲ ತರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ಅವರ ಈ ನೇಮಕದ ಪರಿಣಾಮ 2023 ರ ಚುನಾವಣೆಯಲ್ಲಿ ಕಂಡುಬರಲಿದೆ. ಬಿಜೆಪಿ ಮರಳಿ ಅಧಿಕಾರಕ್ಕೆ ಬರುವುದು ಖಚಿತ. ಕಾಂಗ್ರೆಸ್ ಪಕ್ಷದ ಸಮೀಕ್ಷೆ ಯಾವ ರೀತಿ ಇದೆ ಎಂಬುದು ಗೊತ್ತು. ಜನರ ಒಲವು ಬೇರೆಯದೇ ಇದೆ ಎಂದು ಹೇಳಿದರು.

'ಮೋದಿಯವರು ಸಮಗ್ರ ಭಾರತದ ಅಭಿವೃದ್ಧಿಯ ಜತೆಗೆ ಬಿಜೆಪಿಯನ್ನು ಅಖಂಡ ಭಾರತದಲ್ಲಿ ಶಕ್ತಿಶಾಲಿ ಪಕ್ಷವನ್ನಾಗಿ ರೂಪಿಸಬೇಕು ಎಂಬ ದೂರದೃಷ್ಟಿ ಹೊಂದಿದ್ದಾರೆ. ಹೈದರಾಬಾದ್‌ನಲ್ಲಿ ನಡೆದ ಕಾರ್ಯಕಾರಿಣಿಯಲ್ಲಿ ದಕ್ಷಿಣ ಭಾರತದಲ್ಲಿ ಪಕ್ಷವನ್ನು ಶಕ್ತಿಶಾಲಿಯಾಗಿ ಕಟ್ಟಬೇಕು ಎಂಬ ಸಂಕಲ್ಪ ಮಾಡಲಾಗಿದೆ' ಎಂದರು.

'ಸರ್ಕಾರ ವಿಸರ್ಜಿಸಿ ಚುನಾವಣೆಗೆ ಬನ್ನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಳ್ಳಾಟ, ಕಿತ್ತಾಟದ ಸರ್ಕಾರ ನಡೆಸುವುದಕ್ಕಿಂತ ವಿಸರ್ಜಿಸಿ ಚುನಾವಣೆಗೆ ಬನ್ನಿ' ಎಂದು ಬಿಜೆಪಿಗೆ ಕಾಂಗ್ರೆಸ್ ಸವಾಲು ಹಾಕಿದೆ. ನಾಯಕತ್ವ ಬದಲಾವಣೆ ಮತ್ತು ಸಚಿವರ ಮಧ್ಯದ ಭಿನ್ನ ಹೇಳಿಕೆಗಳನ್ನು ಉಲ್ಲೇಖಿಸಿ ಕಾಂಗ್ರೆಸ್‌ನ ರಾಜ್ಯ ಘಟಕ ಸರಣಿ ಟ್ವೀಟ್ ಮಾಡಿದೆ.

'ಸಿಎಂ ಬದಲಾಗುತ್ತಾರೆ ಎನ್ನುತ್ತಾರೆ ಸುರೇಶ್ ಗೌಡ, ಸ್ಟ್ರಾಂಗ್ ಗೃಹ ಸಚಿವರು ಬೇಕು ಎನ್ನುತ್ತಾರೆ ಯತ್ನಾಳ್, ಮಾಧುಸ್ವಾಮಿ ರಾಜೀನಾಮೆ ಕೊಡಬೇಕು ಎನ್ನುತ್ತಾರೆ ಮುನಿರತ್ನ, ಸಿಎಂ ಹೇಳಿದ್ರೆ ರಾಜೀನಾಮೆ ಕೊಡ್ತೀನಿ ಅಂತಾರೆ ಮಾಧುಸ್ವಾಮಿ. ಇಂತಹ ತಳ್ಳಾಟ, ಕಿತ್ತಾಟದ ಸರ್ಕಾರ ನಡೆಸುವುದಕ್ಕಿಂತ ವಿಸರ್ಜಿಸಿ ಚುನಾವಣೆಗೆ ಬನ್ನಿ' ಎಂದು ಕಾಂಗ್ರೆಸ್ ಸವಾಲು ಹಾಕಿದೆ.

'ಯಡಿಯೂರಪ್ಪ ವರ್ಸಸ್ ಬಿ.ಎಲ್. ಸಂತೋಷ್, ಆರಗ ಜ್ಞಾನೇಂದ್ರ ವರ್ಸಸ್ ಯತ್ನಾಳ್, ಸೊಗಡು ಶಿವಣ್ಣ ವರ್ಸಸ್ ಜಿ.ಎಸ್. ಬಸವರಾಜ್, ರೇಣುಕಾಚಾರ್ಯ ವರ್ಸಸ್ ಡಾ.ಕೆ. ಸುಧಾಕರ್, ಸೋಮಶೇಖರ್ ವರ್ಸಸ್ ಮಾಧುಸ್ವಾಮಿ, ಮುನಿರತ್ನ ವರ್ಸಸ್ ಮಾಧುಸ್ವಾಮಿ, ಆರ್. ಅಶೋಕ ವರ್ಸಸ್ ಅಶ್ವತ್ಥನಾರಾಯಣ್, ಭಗವಂತ ಖೂಬಾ ವರ್ಸಸ್ ಶರಣು ಸಲಗರ... ಒಂದೇ ಹಡಗಿನಲ್ಲಿ ಇಷ್ಟೊಂದು ರಂಧ್ರಗಳಿದ್ದರೆ ಮುಳುಗದೆ ಇರುತ್ತದೆಯೇ' ಎಂದೂ ವ್ಯಂಗ್ಯವಾಡಿದೆ.

'ರಾಜ್ಯದಲ್ಲಿ ಮುಂದೆ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಬೇಕೆನ್ನುವುದು ಜನರ ಬಯಕೆಯಷ್ಟೇ ಅಲ್ಲ, ಬಿಜೆಪಿಯವರ ಬಯಕೆಯೂ ಕೂಡ. ಈ ಬಯಕೆ ಸಚಿವ ಶ್ರೀರಾಮುಲು ಅವರ ಬಾಯಲ್ಲೇ ವ್ಯಕ್ತವಾಗಿದೆ. ಸಿಎಂ ಬೊಮ್ಮಾಯಿ ಅವರ 'ತಳ್ಳುವ ಸರ್ಕಾರದ' ಮೇಲೆ ಮಾಧುಸ್ವಾಮಿಯವರಂತೆ ಸಚಿವ ಶ್ರೀರಾಮುಲು ಅವರಿಗೂ ನಂಬಿಕೆ ಇಲ್ಲವಾಗಿದೆಯೇ' ಎಂದೂ ಪ್ರಶ್ನಿಸಿದೆ.

ಬಿಎಸ್‌ವೈಗೆ ಸ್ಥಾನ: ಸಿದ್ದರಾಮಯ್ಯ ಸಂತಸ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯರನ್ನಾಗಿ ನೇಮಕ ಮಾಡಿರುವ ಬಗ್ಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, 'ಬಿಜೆಪಿಯು ಯಡಿಯೂರಪ್ಪ ಅವರನ್ನು ಗುರುತಿಸಿರುವುದು ಸಂತೋಷ' ಎಂದಿದ್ದಾರೆ.

ಆದರೆ, ಕೆಪಿಸಿಸಿ ಯಡಿಯೂರಪ್ಪ ಅವರ ನೇಮಕದ ಬಗ್ಗೆ ವ್ಯಂಗ್ಯವಾಗಿ ಪ್ರತಿಕ್ರಿಯೆ ನೀಡಿದೆ.

'ಯಡಿಯೂರಪ್ಪ ಅವರನ್ನು ಬಿಜೆಪಿ ಸಂಸದೀಯ ಮಂಡಳಿಗೆ ಕಳಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ಬಿಎಸ್‌ವೈ ಮುಕ್ತ ಬಿಜೆಪಿ ಮಾಡುವಲ್ಲಿ ಯಶಸ್ವಿ ಹೆಜ್ಜೆಯನ್ನಿಟ್ಟಿದೆ 'ಸಂತೋಷ' ಕೂಟ. ಯಡಿಯೂರಪ್ಪ ಅವರೀಗ ಅಧಿಕೃತವಾಗಿ ಮಾರ್ಗದರ್ಶನ ಮಂಡಳಿ ಸೇರಿದಂತಾಯಿತು. ಬಿಎಸ್‌ವೈ ಅವರನ್ನು ಮುಗಿಸಿಹಾಕುವ ಡಿಮೋಷನ್ ಕೊಟ್ಟು ಪ್ರಮೋಷನ್ ಎಂಬಂತೆ ಬಿಂಬಿಸುತ್ತಿದೆ' ಎಂದು ಕೆಪಿಸಿಸಿ ಟ್ವೀಟ್ ಮೂಲಕ ಲೇವಡಿ ಮಾಡಿದೆ.

ಗಿರಿಧಾಮದಲ್ಲಿನ ಅವ್ಯವಸ್ಥೆಗಳ ಬಗ್ಗೆ ಪ್ರವಾಸಿಗರ ಅಸಮಾಧಾನ

ದುಬಾರಿಯಾದ 'ನಂದಿ' ಪ್ರವಾಸ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಒಂದು ಲೀಟರ್ ನೀರಿನ ಬೆಲೆ ₹ 100. ಒಂದೂವರೆ ಕಿ.ಮೀ. ದೂರದ ಪ್ರಯಾಣಕ್ಕೆ ಒಬ್ಬರಿಗೆ ₹25. ಒಂದು ಟೀ ಬೆಲೆ ₹30. ಒಂದು ಸೌತೆ ಕಾಯಿ ಬೆಲೆ ₹20!

- ಇದು ಪ್ರಸಿದ್ಧ ನಂದಿಗಿರಿಧಾಮದಲ್ಲಿ ನಿಗದಿಯಾಗಿರುವ ಕೆಲವು ದರಗಳ ಸ್ಯಾಂಪಲ್ ಮಾತ್ರ.

ನಂದಿ ಗಿರಿಧಾಮದ ಪ್ರವಾಸ ದಿನದಿಂದ ದಿನಕ್ಕೆ ದುಬಾರಿ ಆಗುತ್ತಿದೆ. ಗಿರಿಧಾಮದಲ್ಲಿ ಎಲ್ಲದಕ್ಕೂ ಹೆಚ್ಚು ಬೆಲೆ ತೆರಬೇಕಾಗಿದೆ ಎಂದು ಪ್ರವಾಸಿಗರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ) ನಿರ್ವಹಣೆಯಲ್ಲಿ ಗಿರಿಧಾಮದಲ್ಲಿ ಹೋಟೆಲ್, ವಸತಿ ನಿಲಯ ಇವೆ. ಪ್ರವೇಶ ಮತ್ತು ವಾಹನ ನಿಲುಗಡೆ ಶುಲ್ಕ ತೋಟಗಾರಿಕಾ ಇಲಾಖೆಯ ಪಾಲಾಗುತ್ತದೆ.

ಬೆಲೆ ಹೆಚ್ಚಳ ಮತ್ತು ಗಿರಿಧಾಮದಲ್ಲಿನ ಅವ್ಯವಸ್ಥೆಗಳ ಬಗ್ಗೆ ವಾಸುದೇವ ಶರ್ಮ ಎಂಬುವವರು 'ನಂದಿಬೆಟ್ಟದ ಮೇಲೆ ಅದೆಷ್ಟೊಂದು ಬೇಸರದ ಸಂಗತಿಗಳು' ಎಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರಹ ಪ್ರಕಟಿಸುವ ಮೂಲಕ ಅಸಮಾಧಾನ ಸಹ ವ್ಯಕ್ತಪಡಿಸಿದ್ದರು. ಪ್ರವಾಸಕ್ಕೆ ಬಂದ ಬಹಳಷ್ಟು ಮಂದಿ ಬೆಲೆ ಹೆಚ್ಚಳದ ಬಗೆಗೆ ಗೊಣಗುತ್ತಿದ್ದಾರೆ.

ಗಿರಿಧಾಮದ ಪ್ರವೇಶ ದ್ವಾರದಿಂದ ಯೋಗ ನಂದೀಶ್ವರ ದೇವಾಲಯದವರೆಗಿನ ಒಂದೂವರೆ ಕಿ.ಮೀ ಪ್ರಯಾಣದ ಹಾದಿ ಇದೆ. ಪ್ರವೇಶ ದ್ವಾರದಿಂದ ದೇಗುಲದ ಬಳಿಗೆ ಬರಲು ಕೆಎಸ್‌ಟಿಡಿಸಿ ವಾಹನಗಳಲ್ಲಿ ಒಬ್ಬರಿಗೆ ₹25 ಟಿಕೆಟ್ ದರ ನಿಗದಿಗೊಳಿಸಲಾಗಿದೆ. ಒಂದು ಕಾರಿನಲ್ಲಿ ನಾಲ್ಕು ಮಂದಿ ಪ್ರವಾಸಿಗರು ಬಂದರೆ ಅವರು ಪ್ರವೇಶ ಮತ್ತು ಪಾರ್ಕಿಂಗ್ ಶುಲ್ಕ ರೂಪದಲ್ಲಿ ₹150 ತೆರಬೇಕು.



ನಂದಿಗಿರಿಧಾಮದ ಪ್ರವೇಶ ದ್ವಾರ

ಇಲ್ಲಿನ ಮಯೂರ ಫೈನ್ ಟಾಪ್ ಹೋಟೆಲ್‌ನಲ್ಲಿ ಒಂದು ಲೀಟರ್ ಬಿಸ್ಲೆರಿ ಬೆಲೆ ₹100. ಪ್ಲಾಸ್ಟಿಕ್ ಬಳಕೆ ನಿಷೇಧದ ಕಾರಣ ಗಾಜಿನ ಬಾಟಲ್‌ಗಳಲ್ಲಿ ನೀರು ಮಾರಾಟ ಮಾಡಲಾಗುತ್ತಿದೆ. ಇದರಿಂದ ಹೆಚ್ಚು ಬೆಲೆ ಎಂದು ಇಲ್ಲಿನ ಸಿಬ್ಬಂದಿ ತಿಳಿಸುವರು. ಆದರೆ ಇದನ್ನು ಅಣಕಿಸುವಂತೆ ಹೋಟೆಲ್ ಮುಂಭಾಗ, ಆಸುಪಾಸಿನಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ಕವರ್‌ಗಳು ರಾಶಿ ರಾಶಿ ಬಿದ್ದಿವೆ. ಹೋಟೆಲ್ ಮುಂಭಾಗದಲ್ಲಿ ಇಟ್ಟಿರುವ ಶುದ್ಧ ಕುಡಿಯುವ ನೀರಿನ ಘಟಕ ಸಹ ದುರಸ್ತಿಗೆ ಬಂದಿದೆ.

'ಮಯೂರ ಫೈನ್ ಟಾಪ್‌ನಲ್ಲಿ ದೊರೆಯುವ ಆಹಾರದ ಬೆಲೆಗಳು ಸಹ ಅಧಿಕವಾಗಿದೆ. ಕಾರ್ ಪಾರ್ಕಿಂಗ್‌ಗೆ ವಿಧಿಸುವ ದರ ದುಬಾರಿಯಾಗಿದೆ. ಇಲ್ಲಿಗೆ ಎಲ್ಲ ವರ್ಗದ ಜನರು ಬಂದರೂ ಹೆಚ್ಚು ಬರುವುದು ಮಧ್ಯಮ ವರ್ಗದ ಜನರು. ಸಂಬಂಧಿಸಿದವರು ದರ ಇಳಿಕೆಯ ಬಗ್ಗೆ ಗಮನವಹಿಸಬೇಕು' ಎಂದು ಬೆಂಗಳೂರಿನ ಪ್ರವಾಸಿಗ ಪ್ರದೀಪ್ ಆಗ್ರಹಿಸಿದರು.

'ಇದೇ ಮೊದಲ ಬಾರಿಗೆ ನಂದಿಬೆಟ್ಟಕ್ಕೆ ಬಂದಿದ್ದೇವೆ. ಎಲ್ಲದಕ್ಕೂ ಇಲ್ಲಿ ಹೆಚ್ಚು ಹಣವಿದೆ. ನಮ್ಮಂತಹ ಮಧ್ಯಮ ವರ್ಗಗಳ ಕುಟುಂಬಗಳಿಗೆ ಇದು ದುಬಾರಿ' ಎನ್ನುತ್ತಾರೆ ಮೈಸೂರಿನ ರಮೇಶ್.

15 ದಿನದಲ್ಲಿ ಬೇಡಿಕೆ ಈಡೇರಿಕೆ: ಪ್ರತಿಭಟನೆ ಹಿಂಪಡೆದ ನೌಕರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತಿ ಹೊಂದಿರುವ ಅಕ್ಷರ ದಾಸೋಹ ನೌಕರರಿಗೆ ನಿವೃತ್ತಿ ವೇತನ ಮತ್ತು ₹1 ಲಕ್ಷ ಇಡುಗಂಟು ನೀಡಬೇಕು ಎಂಬ ಬೇಡಿಕೆಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಅನಿರ್ದಿಷ್ಟಾವಧಿ ಅಹೋರಾತ್ರಿ ಹೋರಾಟವನ್ನು ನೌಕರರು ಹಿಂಪಡೆದಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ಆರಂಭಿಸಿದ್ದ ನೌಕರರು ಅಹೋರಾತ್ರಿ ಧರಣಿ ನಡೆಸಿದ್ದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಅವರ ಜತೆ ನೌಕರರ ಸಂಘದ ಪದಾಧಿಕಾರಿಗಳು ಬುಧವಾರ ಸಭೆ ನಡೆಸಿದರು. 'ಬೇಡಿಕೆಗೆ ಸಂಬಂಧಿಸಿದಂತೆ ಹಣಕಾಸು ಇಲಾಖೆಗೆ ಸೆಲ್ವಕುಮಾರ್ ಶಿಫಾರಸು ಮಾಡಿದ್ದಾರೆ. ಇಲಾಖೆ ಕೇಳಿರುವ ಮಾಹಿತಿ ಒದಗಿಸಲು ಪ್ರಯತ್ನಿಸುತ್ತಿರುವ ಬಗ್ಗೆಯೂ ನಮಗೆ ವಿವರಿಸಿದರು' ಎಂದು ಸಂಘದ ಗೌರವಾಧ್ಯಕ್ಷೆ ಎಸ್.ವರಲಕ್ಷ್ಮಿ ತಿಳಿಸಿದರು.

'ಸಭೆಯ ನಡಾವಳಿಯನ್ನು ಲಿಖಿತವಾಗಿ ಒದಗಿಸಿದ ಬಳಿಕವೇ ಪ್ರತಿಭಟನೆ ಹಿಂಪಡೆಯಲು ನಿರ್ಧರಿಸಲಾಯಿತು. ಅಲ್ಲದೇ ಮುಖ್ಯಮಂತ್ರಿ ಅವರನ್ನು ನಾವು ಭೇಟಿ ಮಾಡಿದ್ದು, ಹಣಕಾಸು ಇಲಾಖೆ ಅಧಿಕಾರಿಗಳ ಜತೆ ಮಾತನಾಡುವುದಾಗಿ ಅವರೂ ಭರವಸೆ ನೀಡಿದ್ದಾರೆ' ಎಂದು ಹೇಳಿದರು.

'ನಿವೃತ್ತಿ ವೇತನಕ್ಕೆ ಸಂಬಂಧಿಸಿದಂತೆ ಹಣಕಾಸು ಇಲಾಖೆ ಕೇಳಿರುವ ಮಾಹಿತಿಯನ್ನು ಒದಗಿಸಿ 15 ದಿನಗಳಲ್ಲಿ ಬೇಡಿಕೆ ಈಡೇರಿಸುವುದಾಗಿ ಸೆಲ್ವಕುಮಾರ್ ತಿಳಿಸಿದ್ದಾರೆ. ಆದ್ದರಿಂದ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆದಿದ್ದೇವೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ತಿಳಿಸಿದರು.

ಶೌಚ, ಊಟಕ್ಕೆ ಪರದಾಟ

ಮಂಗಳವಾರ ರಾತ್ರಿ ಚಳಿಯನ್ನೂ ಲೆಕ್ಕಿಸದೆ ಸ್ವಾತಂತ್ರ್ಯ ಉದ್ಯಾನದಲ್ಲೇ ನೌಕರರು ಪ್ರತಿಭಟನೆ ನಡೆಸಿದರು.

ಸಾವಿರಾರು ಸಂಖ್ಯೆಯಲ್ಲಿದ್ದ ಮಹಿಳೆಯರು, ಶೌಚಕ್ಕೆ ಪರದಾಡಬೇಕಾಯಿತು. 'ಸ್ವಾತಂತ್ರ್ಯ ಉದ್ಯಾನದಲ್ಲಿರುವ ಬೆರಳೆಣಿಕೆಯಷ್ಟು ಶೌಚಾಲಯ, ಗಾಂಧಿನಗರದಲ್ಲಿನ ಸಣ್ಣ ಪುಟ್ಟ ಹೋಟೆಲ್‌ಗಳನ್ನು ಹುಡುಕಿ ಶೌಚಕ್ಕೆ ಬಳಸಿದೆವು' ಎಂದು ನೌಕರರು ಹೇಳಿದರು.

ರಾಜ್ಯದ ಎಲ್ಲೆಡೆಯಿಂದ ಬಂದಿದ್ದ ನೌಕರರಲ್ಲಿ ಕೆಲವರು ರೊಟ್ಟಿ ಮತ್ತು ಚಟ್ನಿಪುಡಿ ಬುತ್ತಿಗಳನ್ನು ತಂದಿದ್ದು, ಅದನ್ನೇ ಎರಡು ದಿನ ಸೇವಿಸಿದರು. ಬುತ್ತಿ ತರದೆ ಬಂದಿದ್ದವರು ಊಟಕ್ಕಾಗಿ ಪರಿತಪಿಸಿದರು.

'ಜನೋತ್ಸವ' ಮತ್ತೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 28 ರಂದು ದೊಡ್ಡಬಳ್ಳಾಪುರದಲ್ಲಿ ಬಿಜೆಪಿ ನಡೆಸಲು ಉದ್ದೇಶಿಸಿದ್ದ 'ಜನೋತ್ಸವ'ವನ್ನು ಮುಂದೂಡಲಾಗಿದ್ದು, ಸೆಪ್ಟೆಂಬರ್ 11 ಕ್ಕೆ ನಡೆಸುವ ಸಾಧ್ಯತೆ ಇದೆ.

ಎರಡನೇ ಬಾರಿಗೆ ಜನೋತ್ಸವ ಮುಂದೂಡಲಾಗಿದೆ. ಈ ಹಿಂದೆ ಜುಲೈ 28 ರಂದು ಜನೋತ್ಸವಕ್ಕೆ ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ, ಆ ಸಂದರ್ಭದಲ್ಲಿ ಸುಳ್ಯ ತಾಲ್ಲೂಕು ಬೆಳ್ಳಾರೆಯಲ್ಲಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ಹತ್ಯೆ ನಡೆದಿದ್ದರಿಂದಾಗಿ ಕಾರ್ಯಕ್ರಮ ಮುಂದೂಡಲಾಗಿತ್ತು.

ಬೊಮ್ಮಾಯಿ ಸರ್ಕಾರದ ಒಂದು ವರ್ಷದ ಸಾಧನೆಯನ್ನು ಬಿಂಬಿಸುವ ಉದ್ದೇಶದಿಂದ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಆ. 30 ಮತ್ತು 31 ರಂದು ಗೌರಿ- ಗಣೇಶ ಹಬ್ಬ ಇರುವುದರಿಂದ ಪಕ್ಷದ ಕಾರ್ಯಕರ್ತರು, ಶಾಸಕರು ಮತ್ತು ಸಚಿವರಿಗೆ ಕಾರ್ಯಕ್ರಮದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳವುದು ಕಷ್ಟವಾಗುತ್ತದೆ ಎಂಬ ಕಾರಣಕ್ಕೆ ಮುಂದೂಡಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಪದಾಧಿಕಾರಿಗಳ ಸಭೆ ಇಂದು: ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳ ಸಭೆ ಪಕ್ಷದ ಕಚೇರಿಯಲ್ಲಿ ಗುರುವಾರ ನಡೆಯಲಿದ್ದು, ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ಭಾಗವಹಿಸಲಿದ್ದಾರೆ.

ಮುಂಬರುವ ಬಿಬಿಎಂಪಿ ಮತ್ತು ವಿಧಾನಸಭಾ ಚುನಾವಣೆ, ಸಂಘಟನೆ ಬಲಪಡಿಸುವ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಸಭೆಯಲ್ಲಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಮುಖ್ಯಾಂಶಗಳು
- ಈ ಹಿಂದೆ ಜುಲೈ 28 ರಂದು ಜನೋತ್ಸವಕ್ಕೆ ದಿನಾಂಕ ನಿಗದಿ ಮಾಡಲಾಗಿತ್ತು
- ಗೌರಿ– ಗಣೇಶ ಹಬ್ಬದ ಕಾರಣ ಮುಂದೂಡಿಕೆ
- ಸರ್ಕಾರದ ವರ್ಷದ ಸಾಧನೆ ಬಿಂಬಿಸುವ ಉದ್ದೇಶ ಹೊಂದಿರುವ ಸಮಾವೇಶ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ Providing Sound and Lighting System to Samskruthika bhavana at Sorabha in Shivmogga KPWD/2022-23/EL/WORK_INDENT 154047/CALL-2 ಕಾಮಗಾರಿಯ ಮೊತ್ತ ರೂ. 54.86 ಲಕ್ಷಗಳ ಟೆಂಡರ್‌ನ ಎರಡನೇ ಕರೆಯನ್ನು ಕೆ.ಡಬ್ಲ್ಯೂ-3, ಎಸ್.ಟಿ.ಡಿ ಷರತ್ತುಗೊಳ್ಳಪಟ್ಟಂತೆ The tenderer as a Prime Contractor having valid Class-1 & above Electrical License issued by Electrical Inspectorate Govt. of Karnataka ರವರಿಂದ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್ ಸೈಟ್ ಸಂ: www.eproc.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: 12.08.2022 ರಿಂದ 23.08.2022 16:00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: 23.08.2022 ರಂದೆ 16:00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ),
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.

ವಾ.ಸಾ.ಸಂ.ಇ/ಎಂಸಿಎ/ಶಿ/80/08/22-23/771

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಒಂದನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560001. ದೂರವಾಣಿ : 080-22374981/2235778.
E-mail ID: om.dwcd@gmail.com

ಪತ್ರಿಕಾ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಕಛೇರಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕರೊಂದಿಗೆ ಬಾಡಿಗೆ ವಾಹನಗಳ ಸೇವೆಯನ್ನು ಬಾಹ್ಯಮೂಲದಿಂದ ಪಡೆಯಲು ದ್ವಿ-ಲಕೋಟೆ ಪದ್ಧತಿಯಲ್ಲಿ E-Procurement ಟೆಂಡರ್ ಮೂಲಕ 2022-23ನೇ ಸಾಲಿನ ಆರ್ಥಿಕ ವರ್ಷ ಅಥವಾ ಇಲಾಖೆ ತಿಳಿಸುವ ಮುಂದಿನ ಅವಧಿಯವರೆಗೆ ಅರ್ಹ ಏಜೆನ್ಸಿದಾರರನ್ನು ಗುರುತಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTTP), 1999 ನಿಯಮಗಳು 2000ರ ಪ್ರಕಾರ E-Procurement ವೇದಿಕೆ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ದಿನಾಂಕ: 10.08.2022 ರಿಂದ ದಿನಾಂಕ: 25.08.2022 (ಸಂಜೆ 5.00 ಗಂಟೆ) ವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜಿನಲ್ಲಿ ಲಭ್ಯವಿದ್ದು, www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 22374981/2235778.

ಸಹಿ/- ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1824/ಆಕಾರ್/22-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18. ದೂರವಾಣಿ: 26709689/ 26706775, ಫ್ಯಾಕ್ಸ್: 26700801
Email: endowmentcommissioner@gmail.com.

ಸಂಖ್ಯೆ: ಎಡಿಎಂ-8/ಸಿಆರ್/25/2019-20 ದಿನಾಂಕ: 17.08.2022.

ಪ್ರಕಟಣೆ
ನಮೂನೆ-1ಎ [22ನೇ ನಿಯಮ]

ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕಿನ, ಇನಾಂ ದತ್ತಾತ್ರೇಯ ಪೀಠ ಗ್ರಾಮದ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾ/ಪೀಠವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಡುವ ಸಮೂಹ "ಎ" ಪ್ರವರ್ಗದ ಸಂಯುಕ್ತ ಅಧಿಸೂಚಿತ (Composite Institution) ಸಂಸ್ಥೆಯಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/114/ಮುದಾಪ್ರ/2022, ಬೆಂಗಳೂರು, ದಿನಾಂಕ: 19.07.2022ರ ಆದೇಶದ ಕ್ರಮ ಸಂಖ್ಯೆ(1)ರನ್ವಯ ಪ್ರಸ್ತಾಪಿತ ಸಂಯುಕ್ತ ಅಧಿಸೂಚಿತ (Composite Institution) ಸಂಸ್ಥೆಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011ರ ಕಲಂ 25ರನ್ವಯ 8 ಸದಸ್ಯರಿರುವ ವ್ಯವಸ್ಥಾಪನಾ ಸಮಿತಿಯನ್ನು ಮೂರು ವರ್ಷಗಳ ಅವಧಿಗೆ ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅಪೀಲು ಸಂಖ್ಯೆ: 1110/2021ರಲ್ಲಿ ಆಗುವ ಅಂತಿಮ ಆದೇಶಕ್ಕೆ ಒಳಪಟ್ಟು ರಚಿಸಲು ಆಸಕ್ತಿವುಳ್ಳ ಹಿಂದೂ ಮತ್ತು ಮುಸ್ಲಿಂ ಎರಡೂ ಧರ್ಮಗಳ ಭಕ್ತಾಧಿಗಳಿಂದ/ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ವಿವರ
1.	ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಕನಿಷ್ಠ ಒಬ್ಬ ಸದಸ್ಯ.
2.	ಇಬ್ಬರು ಮಹಿಳೆಯರು.
3.	ಅರ್ಜಿದಾರನು i. ದೇವರಲ್ಲಿ ನಂಬಿಕೆಯುಳ್ಳವನಾಗಿರತಕ್ಕದ್ದು. ii. 25 ವರ್ಷದವನಾಗಿರತಕ್ಕದ್ದು. iii. ಒಳ್ಳೆಯ ನಡತೆ ಮತ್ತು ಖ್ಯಾತಿಯನ್ನು ಹೊಂದಿರತಕ್ಕದ್ದು ಹಾಗೂ ಆ ಸ್ಥಳೀಯವಾಗಿ ಗೌರವುಳ್ಳವನಾಗಿರತಕ್ಕದ್ದು. iv. ಅಧಿನಿಯಮದ 25ನೇಯ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.
4.	ಅರ್ಜಿಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ನಿಯಮಿಸಲಾದ ನಮೂನೆಯಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸತಕ್ಕದ್ದು. ಆ ನಂತರ ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಹಾಗೂ ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -560018.

ನಿಗಧಿತ ಅರ್ಜಿ ನಮೂನೆಯು ಇಲಾಖಾ ವೆಬ್ ಸೈಟ್ https://itms.kar.nic.in/ನಲ್ಲಿ ಹಾಗೂ ಈ ಕಛೇರಿಯಲ್ಲಿ ಲಭ್ಯವಿರುತ್ತದೆ.

ಸಹಿ/-
(ರೋಹಿಣಿ ಸಿಂಧೂರಿ, ಭಾ.ಆ.ಸೇ,)
ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ ಹಾಗೂ
ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1825/ಆಕಾರ್/22-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಬಕಾನಿ ವಿಭಾಗ ನಂ. ಕೌಜಲಗಿ

ಕ್ರ.ಸಂ. ಕನೀನಿನಿ/ಘಬಕಾನಿ/ವಿ-5/ಡಿಬಿ/ಟೆಂಡರ್ ಪ್ರಕಟಣೆ/2022-23/854 ದಿನಾಂಕ: 16-08-2022

ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ)

ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಬಕಾನಿ ವಿಭಾಗ ನಂ. 5 ಕೌಜಲಗಿ ವಿಭಾಗ ಅಡಿಯಲ್ಲಿ ಅಲ್ಪಾವಧಿ ಶೇಕಡಾವಾರು ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟನಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ 01 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು **104.44 ಲಕ್ಷಗಳು** ಇದ್ದು ಮುಂಗಡ ಠೇವಣಿ ಮೊತ್ತವು **1,04,500.00 ರೂ.**ಗಳು ಇರುತ್ತದೆ. ಟೆಂಡರ್‌ಗಳನ್ನು ಸ್ವೀಕರಿಸುವ **ದಿನಾಂಕ: 16-08-2022 ರಿಂದ 26-08-2022** ರ **ಸಂಜೆ 16:00** ಗಂಟೆಯವರೆಗೆ ಮತ್ತು ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 29-08-2022ರ ಮುಂಜಾನೆ 11:00 ಗಂಟೆ** ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.eproc.karnataka.gov.in** ರಲ್ಲಿ **ದಿನಾಂಕ: 16-08-2022**ರ ನಂತರ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಬಕಾನಿ ವಿಭಾಗ ನಂ.5 ಕೌಜಲಗಿ

DIPO/RO No. 716/2022-23

ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ ಗದಗ ರಾಜ್ಯ : ಕರ್ನಾಟಕ ದೂರವಾಣಿ : 08372-259932
ಇ-ಮೇಲ್ : itstaff.ulb.gadag@gmail.com

ನಂ.ಗಬೆನಸ/ತಾಂ.ವಿ/ವಿ.ಶಾ/ಮಾ.ಸಂ.ಪೂ/ವಹಿ/691/2022-23 ದಿನಾಂಕ:16-08-2022

ವಾರ್ಷಿಕ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ (ನಗರಸಭೆ ಅನುದಾನದಲ್ಲಿ) ಗದಗ ಬೆಟಗೇರಿ ನಗರಸಭೆ ಅವಳಿ ನಗರದ ದಿನಂಪ್ರತಿ ಬರುವ ವಿದ್ಯುತ್ ಚಾಲಿತ ಕೊಳವೆ ಭಾವಿಗಳ ರಿಪೇರಿ ಕೆಲಸ ಕಾರ್ಯಗಳಿಗೆ ಇಂಡೆಂಟ್ ನಂ-GBCMC/ 2022-23/AM/ BOREWELL/1 ಹೊಂದಿರುವ ಕಾಮಗಾರಿಗೆ ದರಗಳನ್ನು ಆಹ್ವಾನಿಸಿದ್ದು ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ಮುಖಾಂತರ ಟೆಂಡರ ಸಲ್ಲಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿಯ ವೆಬ್‌ಸೈಟ್ **www.gadag-betagericity.gov.in** ದಲ್ಲಿ ನೋಡಬಹುದು.

ಇತರೆ ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರಮೆಂಟ್ ಹೆಲ್ಪಲೈನ್ ನಂಬರ್-080-23010900-1 ಗೆ ಸಂಪರ್ಕಿಸಬಹುದು.

ಸಹಿ/-
ಶ್ರೀಮತಿ ಉಷಾ ಮಹೇಶ ದಾಸರ
ಅಧ್ಯಕ್ಷರು
ಗದಗ-ಬೆಟಗೇರಿ ನಗರಸಭೆ

ಸಹಿ/-
ಶ್ರೀ ರಮೇಶ ಎಸ್ ಸುಣಗಾರ ಕೆ.ಎಂ.ಎ.ಎಸ್
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

ವಾಸಾಸಂಇ/ಗದಗ/ಎಂ.ಸಿ.ಎ/246/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು-570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ-ಟೆಂಡರ್ ಪ್ರಕಟಣೆ ಸಂಖ್ಯೆ.18/2022-23 ದಿನಾಂಕ:12.08.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 2ನೇ ಹಾಗೂ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ, **KW-1,KW-2, KW-3 & KW-4** ರೀತ್ಯಾ (ಎಕ ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಂತೆ) ಪಿರಿಯಾಪಟ್ಟಣ ತಾಲ್ಲೂಕಿನ 01 ಕಾಮಗಾರಿ, ಹುಣಸೂರು ತಾಲ್ಲೂಕಿನ 61 ಕಾಮಗಾರಿಗಳಿಗೆ (ಅಂದಾಜು ಮೊತ್ತ ರೂ.48.00 ಲಕ್ಷಗಳಿಂದ ರೂ.250.00ಲಕ್ಷದವರೆಗೆ) ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿ: 23.08.2022 ರಿಂದ 12.09.2022 ರವರೆಗೆ ಮತ್ತು ಪ್ರಿ-ಬಿಡ್ ಮೀಟಿಂಗ್ ದಿ:23.08.2022 ಬೆಳಿಗ್ಗೆ 11.00 ಘಂಟೆಯ ನಂತರ, ಸಾಧ್ಯವಾದರೆ ಟೆಂಡರ್ ತೆರೆಯುವ ದಿ: 13.09.2022 ರ ಸಂಜೆ 5.30 ಘಂಟೆಯ ನಂತರ.** ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821-2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.

DIPR/DDMYS/MCA/375/2021-22

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಲಯ ಸಿಂಧನೂರು.
ಜಿಲ್ಲೆ: ರಾಯಚೂರು -584128
ಇಮೇಲ್: **cdpsnd@gmail.com** **Phone: 08535 - 295108**

ಸಂ/ಶಿ.ಅ.ಯೋ.ಸಿಂ/ಅಂ.ಕೇಂ.ಕೋ.ಮೊಟ್ಟೆ/ಇ-ಟೆಂಡರ್.ಪ್ರ/ಬಗ್ಗೆ/2022-23/295 ದಿನಾಂಕ: 16-08-2022

ಟೆಂಡರ್ ವೇಳಾಪಟ್ಟಿ

1) ಟೆಂಡರ್ ಉಲ್ಲೇಖ ಸಂಖ್ಯೆ: ಟೆಂಡರ್ ಸಂಖ್ಯೆ: cdposnd/wcd/icds/egg/tender/2022-23 Dated:22.07.2022 2) ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭ ದಿನಾಂಕ: 22.07.2022 3) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: ಈ ಕೆಳಗಿನ ಸ್ಥಳದಲ್ಲಿ: ದಿನಾಂಕ: 30.08.2022 ಬೆಳಗ್ಗೆ 11-00 ಘಂಟೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸಿಂಧನೂರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಂಧನೂರು, ಜಿಲ್ಲೆ: ರಾಯಚೂರು -584128. 4) ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ:______ 5) ಇ-ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 08.09.2022 ರಂದು 5:00 PM ಒಳಗೆ. 6) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 12.09.2022, 11:00 AM ಒಳಗೆ. 7) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 19.09.2022. 11:00 AM ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. 8) ಟೆಂಡರ್‌ಗಳನ್ನು ತೆರೆಯುವ ಸ್ಥಳ : ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 9) ಸಂವಹನಕ್ಕಾಗಿ ವಿಳಾಸ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಸಿಂಧನೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಂಧನೂರು ಜಿಲ್ಲೆ ರಾಯಚೂರು -584128 ಇಮೇಲ್: cdpsnd@gmail.com

1. ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರ್‌ದಾರರು ತಮ್ಮ ಬಳಕೆದಾರರ ID ಯನ್ನು ಬಳಸಿಕೊಂಡು ಇ-ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು, ಸೆಕ್ಷನ್ II ಅಡಿಯಲ್ಲಿ ಸೂಚಿಸಲಾದ ರೀತಿಯಲ್ಲಿ - ಟೆಂಡರ್ ಡಾಕ್ಯುಮೆಂಟ್‌ಗಳ ಟೆಂಡರ್‌ದಾರರಿಗೆ ಸೂಚನೆಗಳು ಟೆಂಡರ್ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯದ ಮೊದಲು. 2) ತಾಂತ್ರಿಕ ಬಿಡ್ ತೆರೆಯುವ ನಿರ್ದಿಷ್ಟ ದಿನಾಂಕವನ್ನು ಖರೀದಿದಾರರಿಗೆ ರಜಾದಿನವೆಂದು ಘೋಷಿಸಿದರೆ, ಮುಂದಿನ ಕೆಲಸದ ದಿನದಂದು ತಾಂತ್ರಿಕ ಬಿಡ್ ತೆರೆಯಲಾಗುತ್ತದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು,
ಸಿಂಧನೂರು.

ವಾ.ಸಾ.ಸಂ.ಇ/ರಾಯಚೂರು/252/ಎಂ.ಸಿ.ಎ/2022-23

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
(ಕಾರ್ಮಿಕ ಇಲಾಖೆ)
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ದೂ.: 080-29753350, ಇ-ಮೇಲ್: karbuildworkerswelfare@gmail.com

ಸಂಖ್ಯೆ: **KBOCWWB/NOTIFICATIONS/CR-01/2022-23** **Dated: 16.08.2022**

ಇ-ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಮೂರು ಹಂತದ ಇ-ಟೆಂಡರ್‌ಗಳನ್ನು (ಪೂರ್ವ ಅರ್ಹತಾ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸೇವೆಗಳಿಗೆ ಮತ್ತು ನಿಗದಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಸೇವೆಯ ವಿವರಗಳು	ಅವಧಿ	ಮುಂಗಡ ಠೇವಣಿ ಹಣ (ಇಎಂಡಿ)
1	KBOCWWB/ MHC/CR-38/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪವಿಭಾಗ-02, ಬೆಂಗಳೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
2	KBOCWWB/ MHC/CR-43/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಚಾಮರಾಜನಗರ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
3	KBOCWWB/ MHC/CR-46/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪವಿಭಾಗ-03, ಬೆಂಗಳೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
4	KBOCWWB/ MHC/CR-10/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಯಲ್ಲಾಪುರ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
5	KBOCWWB/ MHC/CR-42/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಚಿಕ್ಕಬಳ್ಳಾಪುರ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
6	KBOCWWB/ MHC/CR-47/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪವಿಭಾಗ-04, ಬೆಂಗಳೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-
7	KBOCWWB/ MHC/CR-35/ 2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ತುಮಕೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಾಯೋಗಿಕವಾಗಿ 02 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 3,56,000/-

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜನ್ಸಿಗಳು ಇ-ಪ್ರೊಕ್ಯೂರ್‌ಮೆಂಟ್ **https://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ-ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.09.2022** ರಂದು **ಸಂಜೆ 5:30 ಗಂಟೆ**ಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ. ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-
ಜಂಟಿ ಕಾರ್ಯದರ್ಶಿಗಳು, ಕ.ಕ.&ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ವಾಪ್ರ/ಎಲ್‌ಸಿ/1829/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ-2:ಟೆಂಡರ್-46:2022-23 ದಿನಾಂಕ: 12.08.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿ ಹೆಸರು: ಇ-ಪ್ರೊಕ್ಯೂರ್‌ಮೆಂಟ್ ಮೂಲಕ- ದ್ವಿ ಲಕೋಟೆ ಪದ್ಧತಿ: (1) ಸಾಮಾನ್ಯ ಪ್ಯಾಕೇಜ್-1 (ವ.ಇಂ. 155079) 1) ಮೊಳಕಾಲ್ಮೂರು ತಾಲ್ಲೂಕು ಚಿಕ್ಕೇರಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ 2) ಮೊಳಕಾಲ್ಮೂರು ತಾಲ್ಲೂಕು ಸೂಲೇನಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಿಂದ ಕಿತ್ತೂರು ರಾಣಿ ಚನ್ನಮ್ಮ ಶಾಲೆವರೆಗೆ (ಮುರಾರ್ಜಿ ಶಾಲೆ) ವರೆಗೆ ಸಿ.ಸಿ. ರಸ್ತೆ ನಿರ್ಮಾಣ 3) ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ 4) ಮೊಳಕಾಲ್ಮೂರು ತಾಲ್ಲೂಕು ದೇವಸಮುದ್ರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 100.00 ಲಕ್ಷಗಳು. (2) ಸಾಮಾನ್ಯ ಪ್ಯಾಕೇಜ್-2 (ವ.ಇಂ. 155338) 1) ಮೊಳಕಾಲ್ಮೂರು ತಾಲ್ಲೂಕು ಬಾಂಡ್ರಾವಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 2) ಮೊಳಕಾಲ್ಮೂರು ತಾಲ್ಲೂಕು ಮೇಲಿನಕಣಿವೆ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 3) ಮೊಳಕಾಲ್ಮೂರು ತಾಲ್ಲೂಕು ಕೋನಾಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 4) ಮೊಳಕಾಲ್ಮೂರು ತಾಲ್ಲೂಕು ಕೆ.ಕೆ.ಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 5) ಮೊಳಕಾಲ್ಮೂರು ತಾಲ್ಲೂಕು ಬೊಮ್ಮದೇವರಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 100.00 ಲಕ್ಷಗಳು. (3) ಸಾಮಾನ್ಯ ಪ್ಯಾಕೇಜ್-3 (ವ.ಇಂ. 155337) 1) ಮೊಳಕಾಲ್ಮೂರು ತಾಲ್ಲೂಕು ರಾಂಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 2) ಮೊಳಕಾಲ್ಮೂರು ತಾಲ್ಲೂಕು ರಾಂಪುರ (ಕುಬೇರನಗರ) ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 3) ಮೊಳಕಾಲ್ಮೂರು ತಾಲ್ಲೂಕು ರಾಂಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 4) ಮೊಳಕಾಲ್ಮೂರು ತಾಲ್ಲೂಕು ಜೆ.ಬಿ.ಹಳ್ಳಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 5) ಮೊಳಕಾಲ್ಮೂರು ತಾಲ್ಲೂಕು ಎನ್.ಆರ್.ಕೆ. ಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 90.00 ಲಕ್ಷಗಳು. **ಇ- ಪ್ರೊಕ್ಯೂರ್‌ಮೆಂಟ್ ಮೂಲಕ- ಏಕ ಲಕೋಟೆ ಪದ್ಧತಿ: ಸಾಮಾನ್ಯ: ಲೆಕ್ಕ ಶೀರ್ಷಿಕೆ : 8443 ಠೇವಣಿ ವಂತಿಕೆ:** (4) ಮೊಳಕಾಲ್ಮೂರು ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ-150ಎ ತುಪ್ಪದಕ್ಕನಹಳ್ಳಿ ಕ್ರಾಸ್‌ನಿಂದ ಹೊಸೂರು ಕ್ರಾಸ್ ಜಿಲ್ಲಾ ಮುಖ್ಯ ರಸ್ತೆ ಬೆಳಗಟ್ಟ - ಮೊಳಕಾಲ್ಮೂರು ರಸ್ತೆಯ ವಯಾ ಲಂಬಾಣಿ ಹಟ್ಟಿ - ಐನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.: 155325). ಅಂದಾಜು ಮೊತ್ತ: ರೂ. 50.00 ಲಕ್ಷಗಳು. (5) ಮೊಳಕಾಲ್ಮೂರು ತಾಲ್ಲೂಕಿನ ಮಾಚೇನಹಳ್ಳಿ ಗ್ರಾಮದ ಎಸ್.ಸಿ.ಕಾಲೋನಿಯಿಂದ ದೇವಸಮುದ್ರದ ಮುಖ್ಯ ರಸ್ತೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:155056). ಅಂದಾಜು ಮೊತ್ತ: ರೂ. 30.00 ಲಕ್ಷಗಳು. (6) ಮೊಳಕಾಲ್ಮೂರು ತಾಲ್ಲೂಕಿನ ಅಶೋಕ ಸಿದ್ದಾಪುರ ಗ್ರಾಮದ ಎಸ್.ಸಿ.ಕಾಲೋನಿಯಿಂದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155010). ಅಂದಾಜು ಮೊತ್ತ: ರೂ. 20.00 ಲಕ್ಷಗಳು. (7) ಮೊಳಕಾಲ್ಮೂರು ತಾಲ್ಲೂಕಿನ ಅಶೋಕ ಸಿದಾಪುರ ಗ್ರಾಮದ ಕೋರಚರ ಕಾಲೋನಿಯಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155027). ಅಂದಾಜು ಮೊತ್ತ: ರೂ. 20.00 ಲಕ್ಷಗಳು. (8) ಮೊಳಕಾಲ್ಮೂರು ತಾಲ್ಲೂಕಿನ ಹೊಸಕೋಟೆ ಗ್ರಾಮದ ಎಸ್.ಸಿ.ಕಾಲೋನಿಯಿಂದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155028). ಅಂದಾಜು ಮೊತ್ತ: ರೂ. 30.00 ಲಕ್ಷಗಳು. (9) ಮೊಳಕಾಲ್ಮೂರು ತಾಲ್ಲೂಕಿನ ಓಬಳಾಪುರ ಗ್ರಾಮದಿಂದ ಕೋನಾಪುರ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:154990). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (10) ಮೊಳಕಾಲ್ಮೂರು ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ-150(ಎ)ಯಿಂದ ಮಲ್ಲೆಹರವು ಗ್ರಾಮದಿಂದ ಓಬಳಾಪುರ, ನಲ್ಲಾರೆಡ್ಡಿ ಕೊಂಡಾಪುರ, ಪಕ್ಕುರ್ತಿ ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.: 155310). ಅಂದಾಜು ಮೊತ್ತ: ರೂ. 40.00 ಲಕ್ಷಗಳು. (11) ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರ - ನೇತ್ರನಹಳ್ಳಿ ಸಂಪರ್ಕಿಸುವ ರಸ್ತೆ ಕಾಮಗಾರಿ (ವ.ಇಂ.:154975). ಅಂದಾಜು ಮೊತ್ತ: ರೂ. 40.00 ಲಕ್ಷಗಳು. (12) ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕೋಬನಹಳ್ಳಿ ಗ್ರಾಮದಿಂದ ಬಿ.ಜಿ.ಕೆರೆ ಗ್ರಾಮಕ್ಕೆ ಸಂಪರ್ಕಿಸುವ ಗ್ರಾಮದ ಎಸ್.ಸಿ.ಕಾಲೋನಿಯಿಂದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.: 155314). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (13) ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕೋಬನಹಳ್ಳಿ ಗ್ರಾಮದ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155014). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (14) ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿ ಗ್ರಾಮದ ಎಸ್.ಸಿ.ಕಾಲೋನಿಯಿಂದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:154977). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (15) ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರ ಗ್ರಾಮದಿಂದ ದಾನಸೂರ ಗ್ರಾಮಕ್ಕೆ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:154989). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (16) ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕುಂತಿ ಗ್ರಾಮದ ಎಸ್.ಸಿ.ಕಾಲೋನಿಯಿಂದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155012). ಅಂದಾಜು ಮೊತ್ತ: ರೂ. 30.00 ಲಕ್ಷಗಳು. (17) ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನಕೋಟೆ ಬೋವಿಕಾಲೋನಿಯ ರಸ್ತೆಯಿಂದ ರಾಜ್ಯ ಹೆದ್ದಾರಿ ರಸ್ತೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:155033). ಅಂದಾಜು ಮೊತ್ತ: ರೂ. 50.00 ಲಕ್ಷಗಳು. (18) ಮೊಳಕಾಲ್ಮೂರು ತಾಲ್ಲೂಕಿನ ಯರ್ರನೇಹಳ್ಳಿ ಹೊಸೂರು ಗ್ರಾಮದ ಎಸ್.ಸಿ.ಕಾಲೋನಿಯಿಂದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155050). ಅಂದಾಜು ಮೊತ್ತ: ರೂ. 20.00 ಲಕ್ಷಗಳು. (19) ಮೊಳಕಾಲ್ಮೂರು ತಾಲ್ಲೂಕಿನ ಮಹಂತೇಶ್ ನಗರದ ಕಾಲೋನಿಯಿಂದ ರುದ್ರಭೂಮಿಯವರೆಗೆ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:155036). ಅಂದಾಜು ಮೊತ್ತ: ರೂ. 30.00 ಲಕ್ಷಗಳು. (20) ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕೇರಹಳ್ಳಿ ಗ್ರಾಮದಿಂದ ಅಮಕುಂದಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:155043). ಅಂದಾಜು ಮೊತ್ತ: ರೂ. 40.00 ಲಕ್ಷಗಳು. (21) ಮೊಳಕಾಲ್ಮೂರು ತಾಲ್ಲೂಕಿನ ಪಕ್ಕುರ್ತಿ ಗ್ರಾಮದ ಎನ್.ಆರ್.ಕೆ.ಪುರಕ್ಕೆ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:155022). ಅಂದಾಜು ಮೊತ್ತ: ರೂ. 40.00 ಲಕ್ಷಗಳು. (22) ಮೊಳಕಾಲ್ಮೂರು ತಾಲ್ಲೂಕಿನ ಹೊಸಕೋಟೆ ಗ್ರಾಮದ ಮುಖ್ಯ ರಸ್ತೆಯಿಂದ ರೊಪ್ಪ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:155030). ಅಂದಾಜು ಮೊತ್ತ: ರೂ. 40.00 ಲಕ್ಷಗಳು. (23) ಮೊಳಕಾಲ್ಮೂರು ತಾಲ್ಲೂಕಿನ ನೇರ್ಲಹಳ್ಳಿ ಗ್ರಾಮದ ರಾಯಾಪುರ ಗ್ರಾಮದ ಮುಖ್ಯ ರಸ್ತೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.:155015). ಅಂದಾಜು ಮೊತ್ತ: ರೂ. 30.00 ಲಕ್ಷಗಳು. (24) ಮೊಳಕಾಲ್ಮೂರು ತಾಲ್ಲೂಕಿನ ನಾಗಸಮುದ್ರ ಗ್ರಾಮದ ಕಾಕಿಪೆನ್ನಯ್ಯ ಕಪಲೆಯಿಂದ ಎ.ಕೆ.ಹನುಮಂತಪ್ಪ ಕಪಲೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.: 155315). ಅಂದಾಜು ಮೊತ್ತ: ರೂ. 50.00 ಲಕ್ಷಗಳು. **ಪರಿಶಿಷ್ಟ ಜಾತಿ: ಲೆಕ್ಕ ಶೀರ್ಷಿಕೆ : 8443 ಠೇವಣಿ ವಂತಿಕೆ:** (25) ಎಸ್.ಸಿ ಪ್ಯಾಕೇಜ್-1 (ವ.ಇಂ. 155336) 1) ಮೊಳಕಾಲ್ಮೂರು ತಾಲ್ಲೂಕು ರಾಮಸಾಗರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ 2) ಮೊಳಕಾಲ್ಮೂರು ತಾಲ್ಲೂಕು ರಾಂಪುರ ಗ್ರಾಮದ (ಶಾಸ್ತ್ರಿನಗರದ) ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 50.00 ಲಕ್ಷಗಳು. (26) ಎಸ್.ಸಿ ಪ್ಯಾಕೇಜ್-2 (ವ.ಇಂ. 155068) 1)ಮೊಳಕಾಲ್ಮೂರು ತಾಲ್ಲೂಕು ಮರ್ಲಹಳ್ಳಿ (ಗುಡ್ಡಹಳ್ಳಿ) ಹಾಗೂ ಅಜ್ಜರಪಾಪಯ್ಯನಹಟ್ಟಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 40.00 ಲಕ್ಷಗಳು. (27) ಮೊಳಕಾಲ್ಮೂರು ತಾಲ್ಲೂಕಿನ ವೆಂಕಟಾಪುರ ಗ್ರಾಮದಿಂದ ತಿಮ್ಮಲಾಪುರ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿ (ವ.ಇಂ.:155020). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (28) ಮೊಳಕಾಲ್ಮೂರು ತಾಲ್ಲೂಕಿನ ಉರ್ಥಾಳ್ ಗ್ರಾಮದಿಂದ ಪೆನ್ನಮ್ಮನಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿ (ವ.ಇಂ.: 155304). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (29) ಮೊಳಕಾಲ್ಮೂರು ತಾಲ್ಲೂಕಿನ ರಾಯಾಪುರ ಗ್ರಾಮದ ಎಸ್.ಸಿ.ಕಾಲೋನಿಯಿಂದ ರಸ್ತೆಯಿಂದ ಮುಖ್ಯ ರಸ್ತೆಗೆ ಸಿ.ಸಿ. ರಸ್ತೆ ನಿರ್ಮಾಣ ಮಾಡುವುದು (ವ.ಇಂ.:155046). ಅಂದಾಜು ಮೊತ್ತ: ರೂ. 20.00 ಲಕ್ಷಗಳು. (30) ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನಕೋಟೆ (ಕಿತ್ತೂರುರಾಣಿ ಚನ್ನಮ್ಮ ಶಾಲೆ) ಗ್ರಾಮದಿಂದ ಸೂಲೇನಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ (ವ.ಇಂ.: 155307). ಅಂದಾಜು ಮೊತ್ತ: ರೂ. 50.00 ಲಕ್ಷಗಳು. (31) ಮೊಳಕಾಲ್ಮೂರು ತಾಲ್ಲೂಕಿನ ಬೊಮ್ಮದೇವರಹಳ್ಳಿ ಗ್ರಾಮದಿಂದ ಮೇಲಿನಕಣಿವೆ ರಸ್ತೆ ಕಾಮಗಾರಿ (ವ.ಇಂ.: 155292). ಅಂದಾಜು ಮೊತ್ತ: ರೂ. 50.00 ಲಕ್ಷಗಳು. (32) ಮೊಳಕಾಲ್ಮೂರು ತಾಲ್ಲೂಕಿನ ಮೇಲಿನಕಣಿವೆ ಮುಖ್ಯ ರಸ್ತೆಯಿಂದ ಬೊಮ್ಮದೇವರಹಳ್ಳಿ ರಸ್ತೆಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.: 155328). ಅಂದಾಜು ಮೊತ್ತ: ರೂ. 50.00 ಲಕ್ಷಗಳು. **ಪರಿಶಿಷ್ಟ ಪಂಗಡ: ಲೆಕ್ಕ ಶೀರ್ಷಿಕೆ : 8443 ಠೇವಣಿ ವಂತಿಕೆ:** (33) ಎಸ್.ಟಿ. ಪ್ಯಾಕೇಜ್-1 (ವ.ಇಂ. 155069) 1) ಮೊಳಕಾಲ್ಮೂರು ತಾಲ್ಲೂಕು ರಾಯಾಪುರ (ಕಾಕಿಪಾಲಯ್ಯನಹಟ್ಟಿ) ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 20.00 ಲಕ್ಷಗಳು. (34) ಮೊಳಕಾಲ್ಮೂರು ತಾಲ್ಲೂಕಿನ ಮಾರಮ್ಮನಹಳ್ಳಿ ಗ್ರಾಮದ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ (ವ.ಇಂ.:154987). ಅಂದಾಜು ಮೊತ್ತ: ರೂ. 25.00 ಲಕ್ಷಗಳು. (35) ಮೊಳಕಾಲ್ಮೂರು ತಾಲ್ಲೂಕಿನ ಕಣಕುಪ್ಪ ಗ್ರಾಮದ ಕ್ರಾಸ್‌ನಿಂದ ಬೊಮ್ಮದೇವರಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.: 155327). ಅಂದಾಜು ಮೊತ್ತ: ರೂ. 40.00 ಲಕ್ಷಗಳು. (36) ಮೊಳಕಾಲ್ಮೂರು ತಾಲ್ಲೂಕಿನ ವೆಂಕಟಾಪುರ ಗ್ರಾಮದಿಂದ ವಿಠಲಾಪುರ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ.: 155326). ಅಂದಾಜು ಮೊತ್ತ: ರೂ. 30.00 ಲಕ್ಷಗಳು.

ಕ್ರಸಂ. 1 ರಿಂದ 3ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 20.08.2022 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 22.08.2022 ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 23.08.2022 ಸಮಯ 16:01. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 25.08.2022 ಸಮಯ 11:00.

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 20.08.2022 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 22.08.2022 ಸಮಯ 16:00. ಆರ್ಥಿಕ ಬಿಡ್ ತೆರೆಯುವ ದಿನಾಂಕ: ಮತ್ತು ವೇಳೆ: 23.08.2022 ಸಮಯ 16:01

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

RO No. 446: DIPR/CTA/MCA/2022-23 ಸಹಿ/- ಕಾರ್ಯಪಾಲಕ ಅಭಿಯಂತರರು

ಆತ್ಮಸಾಕ್ಷಿ ಇದ್ದರೆ ಸಾಬೀತುಪಡಿಸಿ: ಬಿಜೆಪಿಗೆ ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ್ವರ್ ಸವಾಲು

‘ವೈಯಕ್ತಿಕ ದ್ವೇಷದ ಜಗಳಕ್ಕೆ ಕೋಮು ಬಣ್ಣ’

ಪ್ರಜಾವಾಣಿ ವಾರ್ತೆ

ಭದ್ರಾವತಿ: ‘ಮಂಗಳವಾರ ಇಲ್ಲಿ ನಡೆದಿರುವ ಹಲ್ಲೆ ಪ್ರಕರಣಕ್ಕೆ ವೈಯಕ್ತಿಕ ದ್ವೇಷ ಕಾರಣ. ಬಿಜೆಪಿಯವರು ಆತ್ಮಸಾಕ್ಷಿ ಇದ್ದರೆ ಅದನ್ನು ಕೋಮು ಗಲಭೆ ಎಂದು ಸಾಬೀತುಪಡಿಸಿದರೆ ನಾನು ರಾಜಕೀಯ ನಿವೃತ್ತಿ ತೆಗೆದುಕೊಳ್ಳುವೆ’ ಎಂದು ಕಾಂಗ್ರೆಸ್ ಶಾಸಕ ಬಿ.ಕೆ. ಸಂಗಮೇಶ್ವರ್ ಸವಾಲು ಹಾಕಿದರು.

ನಗರದಲ್ಲಿ ಬುಧವಾರ ಸುದ್ದಿಗಾರ-ರೊಂದಿಗೆ ಮಾತನಾಡಿದ ಅವರು, ‘ಹಲ್ಲೆ ನಡೆಸಿದ ಮುಬಾರಕ್ ಹಾಗೂ ಸುನಿಲ್ ಒಟ್ಟಿಗೆ ಕುಳಿತು ಜೂಜು ಆಡುತ್ತಿದ್ದವ-ರು. ವೈಯಕ್ತಿಕ ದ್ವೇಷದಿಂದ ಬಡಿದಾ-ಡಿಕೊಂಡಿದ್ದಾರೆ. ಇದು ಚುನಾವಣೆ ವರ್ಷ ಆಗಿರುವುದರಿಂದ ಬಿಜೆಪಿ ಇದಕ್ಕೆ ಕೋಮು ಬಣ್ಣ ತುಂಬುತ್ತಿದೆ’ ಎಂದು ಟೀಕಿಸಿದರು.

‘ಇದು ಕೋಮು ಗಲಭೆ ಅಲ್ಲ ಎಂದು ಯಾವ ದೇವಸ್ಥಾನಕ್ಕೆ ಬೇಕಾದರೂ ಬಂದು ನಾನು ನನ್ನ ಮಕ್ಕಳ ಮೇಲೆ ಆಣೆ ಮಾಡಿ ಹೇಳುವೆ. ಬಿಜೆಪಿ ನಾಯಕರು ಅವರ ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಬಂದು ಆಣೆ ಮಾಡಲಿ’ ಎಂದು ಆಹ್ವಾನ ನೀಡಿದರು.

‘ವಿಐಎಸ್‌ಎಲ್, ಎಂಪಿಎಂ ನೌಕರರು ತಿಂಗಳಾನುಗಟ್ಟಲೇ ಪ್ರತಿಭಟನೆ ನಡೆಸಿದರೂ ಒಂದು ದಿನವೂ ಈಶ್ವರಪ್ಪ ಭದ್ರಾವತಿಗೆ ಬರಲಿಲ್ಲ. ವೈಯಕ್ತಿಕ ದ್ವೇಷದಿಂದ ಬಡಿದಾಡಿಕೊಂಡ ಸುನಿಲ್ ವಿಚಾರದಲ್ಲಿ ಆಸ್ಪತ್ರೆಗೆ ಭೇಟಿ ನೀಡಿರುವುದಕ್ಕೆ ರಾಜಕೀಯ ಹಿನ್ನೆಲೆ ಇದೆ. ಘಟನೆಗೆ ಕೋಮು ಬಣ್ಣ ಹಚ್ಚಲಾಗಿದೆ. ಭದ್ರಾವತಿ ಜನರು ಇಂಥವರನ್ನು ನಂಬಬಾರದು’ ಎಂದು ಮನವಿ ಮಾಡಿದರು.

‘ನಗರದಲ್ಲಿರುವ ಎರಡು ಕಾರ್ಖಾ-ನೆಗಳನ್ನು ಅಭಿವೃದ್ಧಿಪಡಿಸಬೇಕಿದೆ. ಅದನ್ನು ಬಿಟ್ಟು ಬಿಜೆಪಿ ಕೋಮು ಗಲಭೆ ಸೃಷ್ಟಿಸುತ್ತಿರುವುದು ದುರದೃಷ್ಟಕರ. ಭದ್ರಾವತಿಯಲ್ಲಿ ಅಭಿವೃದ್ಧಿ ಮಾಡಲು ಸಾಕಷ್ಟು ವಿಷಯಗಳು ಇವೆ. ಬಿಜೆಪಿಯವರು ಅದನ್ನು ಮಾಡಲಿ. ಕ್ಷೇತ್ರದಲ್ಲಿ 500 ದೇವಸ್ಥಾನ ಅಭಿವೃದ್ಧಿಗೆ ಅನುದಾನ ಕೇಳಿದ್ದೇನೆ. ಕಾಂಗ್ರೆಸ್ ಶಾಸಕ ಎಂಬ ಕಾರಣಕ್ಕೆ ಅನುದಾನ ಬಿಡುಗಡೆ ಮಾಡಿಲ್ಲ. ಹಿಂದುತ್ವ ಎನ್ನುವ ಬಿಜೆಪಿ ದೇವಸ್ಥಾನಕ್ಕೆ ಅನುದಾನ ನೀಡಬಹುದಿತ್ತು. ರಾಜಕೀಯ ದ್ವೇಷದಿಂದ ಕೊಟ್ಟಿಲ್ಲ’ ಎಂದು ದೂರಿದರು.



ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರೇಮ್ ಸಿಂಗ್ ಅವರನ್ನು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಶಾಸಕ ಕೆ.ಎಸ್.ಈಶ್ವರಪ್ಪ, ಸಂಸದ ಬಿ.ವೈ. ರಾಘವೇಂದ್ರ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಎಸ್.ಶ್ರೀಧರ್ ಇದ್ದರು.

ಸಾವರ್ಕರ್ ಫ್ಲೆಕ್ಸ್ ವಿವಾದ: ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಯತ್ನ

ಉಡುಪಿ: ನಗರದ ಬ್ರಹ್ಮಗಿರಿ ಸರ್ಕಲ್‌ನಲ್ಲಿ ಅಳವಡಿಸಿರುವ ಸಾವರ್ಕರ್ ಫ್ಲೆಕ್ಸ್‌ಗೆ ಕಾಂಗ್ರೆಸ್ ಮುಖಂಡರ ವಿರೋಧ ಖಂಡಿಸಿ ಬುಧವಾರ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಈ ಸಂದರ್ಭ ಮಧ್ಯೆ ಪ್ರವೇಶಿಸಿದ ಪೊಲೀಸರು ಕಾರ್ಯಕರ್ತರನ್ನು ತಡೆದು ಪರಿಸ್ಥಿತಿ ತಿಳಿಗೊಳಿಸಿದರು. ಕಾಂಗ್ರೆಸ್ ಕಚೇರಿ ಎದುರು ಘೋಷಣೆ ಕೂಗಿದ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ.

ಇದಕ್ಕೂ ಮುನ್ನ ಯುವ ಮೋರ್ಚಾದ ನೂರಾರು ಕಾರ್ಯಕರ್ತರು ಬ್ರಹ್ಮಗಿರಿ ವೃತ್ತವನ್ನು ಸ್ವಚ್ಛಗೊಳಿಸಿ ಹೂಗಳಿಂದ ಅಲಂಕರಿಸಿ ಸಾವರ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮುತ್ತಿಗೆ ಘಟನೆ ಸಂಬಂಧ ಪ್ರತಿಕ್ರಿಯೆ ನೀಡಿದ ಕೆಪಿಸಿಸಿ ಉಪಾಧ್ಯಕ್ಷ ವಿನಯ ಕುಮಾರ ಸೊರಕೆ, ‘ಸಾವರ್ಕರ್ ಫ್ಲೆಕ್ಸ್‌ಗೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿಲ್ಲ. ಅನಧಿಕೃತ ಫ್ಲೆಕ್ಸ್‌ಗಳ ತೆರವಿಗೆ ನಗರಸಭೆ ಪೌರಾಯುಕ್ತರಿಗೆ ಮನವಿಯನ್ನಷ್ಟೆ ಮಾಡಲಾಗಿತ್ತು’ ಎಂದು ತಿಳಿಸಿದರು.

ಫ್ಲೆಕ್ಸ್‌ನಲ್ಲಿ ನಾಥೂರಾಮ್ ಗೋಡ್ಸೆ ಚಿತ್ರ!

ಮಧುಗಿರಿ (ತುಮಕೂರು): ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಟ್ಟಣದ ದಂಡಿನ ಮಾರಮ್ಮ ದೇವಸ್ಥಾನದ ಸಮೀಪ ಅಳವಡಿಸಿದ್ದ ಫ್ಲೆಕ್ಸ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳ ಜೊತೆ, ಮಹಾತ್ಮ ಗಾಂಧಿ ಹಂತಕ ನಾಥೂರಾಮ್ ಗೋಡ್ಸೆ ಚಿತ್ರ ಹಾಕಿರುವ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

‘ಭಗತ್‌ಸಿಂಗ್ ಯೂಥ್ ಅಸೋಸಿಯೇಷನ್‌ನ ಡಿ.ಎಂ.ಬಡಾವಣೆ, ಮಧುಗಿರಿ’ ಹೆಸರಿನಲ್ಲಿ ಫ್ಲೆಕ್ಸ್ ಅಳವಡಿಸಲಾಗಿದೆ. ಆದರೆ, ಈ ಹೆಸರಿನ ಯಾವುದೇ ಸಂಘಟನೆ ಪಟ್ಟಣದಲ್ಲಿ ಇಲ್ಲ. ಕಿಡಿಗೇಡಿಗಳು ಈ ರೀತಿ ಮಾಡಿರಬಹುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಗೋಡ್ಸೆ ಚಿತ್ರವಿರುವ ಫ್ಲೆಕ್ಸ್ ಹರಿದಾಡುತ್ತಿದ್ದಂತೆ ಅಧಿಕಾರಿಗಳು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಆದರೆ, ಸ್ಥಳದಿಂದ ಅದಾಗಲೇ ಫ್ಲೆಕ್ಸ್ ತೆರವುಗೊಳಿಸಲಾಗಿತ್ತು.

‘ಸ್ವಾತಂತ್ರ್ಯ ಹೋರಾಟಗಾರರ ವಿಷಯದಲ್ಲಿ ಯಾರೂ ಅಗೌರವದಿಂದ ನಡೆದುಕೊಳ್ಳಬಾರದು. ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ತಹಶೀಲ್ದಾರ್ ಸುರೇಶ್ ಆಚಾರ್ ಹೇಳಿದ್ದಾರೆ.



ಮಧುಗಿರಿಯಲ್ಲಿ ಅಳವಡಿಸಿದ್ದ ಫ್ಲೆಕ್ಸ್‌ನಲ್ಲಿ ಗೋಡ್ಸೆ

‘ಆಸ್ತಿ ಮುಟ್ಟುಗೋಲಿಗೆ ಚಿಂತನೆ’

ಶಿವಮೊಗ್ಗ: ‘ಪ್ರೇಮ್ ಸಿಂಗ್‌ಗೆ ಚಾಕು ಇರಿದವರ ಕಾಲಿಗೆ ಪೊಲೀಸರು ಗುಂಡಿಟ್ಟು ಜೈಲಿನೊಳಗೆ ಕೂರಿಸಿದ್ದಾರೆ. ಇಂತಹ ಕೃತ್ಯ ಎಸಗಿದವರಿಗೆ ಇದು ಕೇವಲ ಸ್ಯಾಂಪಲ್ ಮಾತ್ರ. ಮುಂದೆ ಇನ್ನೂ ಇದೆ’ ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಎಚ್ಚರಿಸಿದರು.

ದುಷ್ಕೃತ್ಯಗಳಲ್ಲಿ ಭಾಗಿಯಾಗುವ ಆರೋಪಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆಯೂ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಬುಧವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಹೆದರಬೇಡಿ, ಧೈರ್ಯವಾಗಿರಿ’

ಶಿವಮೊಗ್ಗ: ‘ಹೆದರಬೇಡಿ. ಧೈರ್ಯವಾಗಿರಿ. ಕೃತ್ಯ ನಡೆಸಿದ ದುಷ್ಕರ್ಮಿಗಳಿಗೆ ಕಾನೂನು ಪ್ರಕಾರ ಶಿಕ್ಷೆ ಕೊಡಿಸಲಿದ್ದೇವೆ’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಇಲ್ಲಿನ ಮೆಗ್ಗಾನ್ ಆಸ್ಪತ್ರೆ-ಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರೇಮ್ ಸಿಂಗ್ ಅವರಿಗೆ ಬುಧವಾರ ಸಾಂತ್ವನ ಹೇಳಿದರು. ನಂತರ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಎಸ್.ಶ್ರೀಧರ್ ಅವರಿಂದ ಪ್ರೇಮ್ ಸಿಂಗ್ ಆರೋಗ್ಯದ ಬಗ್ಗೆ ಮಾಹಿತಿ ಪಡೆದರು.

ಸಿಗರೇಟಿನಿಂದ ರಾಷ್ಟ್ರಧ್ವಜ ಸುಟ್ಟ ಆರೋಪಿ ಬಂಧನ

ಚಿಕ್ಕಮಗಳೂರು: ನಗರದ ಬಾರಲೇನ್‌ನಲ್ಲಿ ಸಿಗರೇಟಿನಿಂದ ರಾಷ್ಟ್ರಧ್ವಜ ಸುಟ್ಟು, ತೂತಾಗಿಸಿರುವ ಕೃತ್ಯದ ವಿಡಿಯೊ ವೈರಲ್ ಆಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅಸ್ಗರ್ (50) ಎಂಬಾತನನ್ನು ಬಂಧಿಸಲಾಗಿದೆ.

‘ಮನೆ ಬಳಿ ಕಟ್ಟಿದ್ದ ಧ್ವಜವನ್ನು ಸಿಗರೇಟಿನಿಂದ ಸುಟ್ಟು ತೂತಾಗಿಸಲಾಗಿದೆ. ಸಿಗರೇಟು ಸೇದಿ ಸುಡುವ ದೃಶ್ಯ ವಿಡಿಯೊದಲ್ಲಿವೆ. ರಾತ್ರಿ ವೇಳೆ ಕೃತ್ಯ ಎಸಗಲಾಗಿದೆ’ ಎಂದು ನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಆರೋಪಿಯು ಬಾರಲೇನ್ ನಿವಾಸಿ. ಬಾಡಿಗೆ ಮನೆಯಲ್ಲಿ ವಾಸ. ಬುಧವಾರ ಬೆಳಿಗ್ಗೆ ನಗರದ ಬಸ್ ನಿಲ್ದಾಣದಲ್ಲಿ ಪತ್ತೆ ಮಾಡಿದ್ದೇವೆ. ಧ್ವಜವನ್ನು ವಶಪಡಿಸಿಕೊಂಡಿದ್ದೇವೆ. ರಾಷ್ಟ್ರ ಗೌರವಕ್ಕೆ ಅಪಮಾನ ಮಾಡಿದ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕ್ರೈಸ್ತ ಧರ್ಮಕ್ಕೆ ಮತಾಂತರ: ಪಟ್ಟಿ ಕೇಳಿದ ಗೂಳಿಹಟ್ಟಿ ಶೇಖರ್

ರಾಯಚೂರು: 'ರಾಯಚೂರು ಜಿಲ್ಲೆಯಲ್ಲಿ ಇಷ್ಟೊಂದು ಚರ್ಚ್‌ಗಳಿವೆ. ಅವುಗಳಲ್ಲಿ ಎಷ್ಟು ನೈಜ ಎಂಬುದನ್ನು ಪರಿಶೀಲಿಸಬೇಕು. ಮೂಲ ಕ್ರೈಸ್ತರು ಮತ್ತು ಮತಾಂತರಗೊಂಡವರು ಎಷ್ಟು ಎಂಬುದು ಗೊತ್ತಾಗಬೇಕು’ ಎಂದು ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸದಸ್ಯ ಹಾಗೂ ಶಾಸಕ ಗೂಳಿಹಟ್ಟಿ ಶೇಖರ್ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಕಲ್ಯಾಣ ಸಮಿತಿಯಿಂದ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಜಿಲ್ಲೆಯ ವಿವಿಧೆಡೆ 145 ಚರ್ಚ್‌ಗಳ ದುರಸ್ತಿಗೆ ಅನುದಾನ ಮಂಜೂರಾದ ಪಟ್ಟಿ ಇದೆ. ಅನುದಾನಕ್ಕೆ ನಿಗದಿಪಡಿಸಿದ ಅರ್ಹತೆಗಳೇನು? ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಯಲ್ಲಿದ್ದು, ಮತಾಂತರಕ್ಕೆ ಅವಕಾಶ ನೀಡಬಾರದು’ ಎಂದರು.

‘ದಾಖಲೆಪತ್ರಗಳಲ್ಲಿ ಒಂದು ಹೆಸರು, ಚರ್ಚ್‌ನಲ್ಲಿ ಇನ್ನೊಂದು ಹೆಸರು ಇರುತ್ತದೆ. ಚರ್ಚ್ ಅಭಿವೃದ್ಧಿ ಸಮಿತಿಗೆ ಹೆಸರು ಕೊಟ್ಟವರು ನೈಜ ಕ್ರೈಸ್ತರು ಹೌದು ಅಥವಾ ಅಲ್ಲ ಎಂಬುದನ್ನೂ ಪರಿಶೀಲಿಸಬೇಕಿದೆ’ ಎಂದರು.



‘ಪ್ರಾರ್ಥನೆಗಾಗಿ ಚರ್ಚ್‌ಗಳ ದುರಸ್ತಿ ನಡೆದರೆ, ಸಮಸ್ಯೆಯಿಲ್ಲ. ಆದರೆ, ಮತಾಂತರ ಪ್ರಕ್ರಿಯೆಗಳು ನಡೆಯಬಾರದು’ ಎಂದು ಕಲ್ಯಾಣ ಸಮಿತಿ ಅಧ್ಯಕ್ಷ ಕುಮಾರ ಬಂಗಾರಪ್ಪ ತಿಳಿಸಿದರು.

ಮುಧೋಳ ತಳಿ ಶ್ವಾನ: ವಿಶೇಷ ಭದ್ರತಾ ಪಡೆಗೆ ಸೇರ್ಪಡೆ

ಬಾಗಲಕೋಟೆ: ಭಾರತೀಯ ಸೇನೆಗೆ ಸೇರ್ಪಡೆಯಾಗಿದ್ದ ಮುಧೋಳ ತಳಿಯ ಶ್ವಾನಗಳು ಈಗ ಪ್ರಧಾನಮಂತ್ರಿಗೆ ಭದ್ರತೆ ನೀಡುವ ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ಸೇರಿವೆ.

ಮುಧೋಳದ ತಿಮ್ಮಾಪುರ ಬಳಿ ಇರುವ ಮುಧೋಳ ಶ್ವಾನ ಸಂವರ್ಧನಾ ಕೇಂದ್ರದಿಂದ ಎಸ್‌ಪಿಜಿ ವೈದ್ಯರ ತಂಡ ನಾಯಿಗಳನ್ನು ಒಯ್ದಿದೆ. ಎರಡು ಗಂಡು ನಾಯಿ ಮರಿಗಳನ್ನು ತೆಗೆದುಕೊಂಡು ಹೋಗಲಾಗಿದೆ.

ಈಗಾಗಲೇ ಕೇರಳ, ಕರ್ನಾಟಕ ಪೊಲೀಸ್ ಪಡೆ, ಬಿಎಸ್‌ಎಫ್ ನವರು ಮುಧೋಳ ತಳಿಯ ನಾಯಿಗಳನ್ನು ತೆಗೆದುಕೊಂಡು ಹೋಗಿದ್ದಾರೆ.

ಫಾಝಿಲ್ ಹತ್ಯೆ: ಮತ್ತೊಬ್ಬ ಆರೋಪಿ ಬಂಧನ

ಮಂಗಳೂರು: ಸುರತ್ಕಲ್‌ನಲ್ಲಿ ನಡೆದ ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಹತ್ಯೆ ಪ್ರಕರಣ ಸಂಬಂಧ ಮತ್ತೊಬ್ಬ ಆರೋಪಿ ಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 8ಕ್ಕೆ ಏರಿದಂತಾಗಿದೆ.



ಹರ್ಷಿತ್

ಬಂಧಿತನನ್ನು ಬಂಟ್ವಾಳದ ಹರ್ಷಿತ್ (28 ವರ್ಷ) ಎಂದು ಗುರುತಿಸಲಾಗಿದೆ. ಫಾಝಿಲ್ ಹತ್ಯೆ ನಡೆದ ನಂತರ ಪ್ರಕರಣದ ಆರೋಪಿಗಳನ್ನು ಹರ್ಷಿತ್ ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋಗಿದ್ದ. ಆರೋಪಿಗಳು ಉಳಿದು ಕೊಳ್ಳಲು ಆಶ್ರಯ ನೀಡಿದ್ದ. ಕೊಲೆ ಆರೋಪಿಗಳು ತಪ್ಪಿಸಿಕೊಳ್ಳಲು ಬಳಸಿದ್ದ ಹರ್ಷಿತ್‌ನ ಕಾರನ್ನು ವಶಪಡಿಸಿಕೊಳ್ಳ-ಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜುಲೈ 27ರ ರಾತ್ರಿ ಕಾರಿನಲ್ಲಿ ಬಂದ ತಂಡ ಫಾಝಿಲ್ ಅವರನ್ನು ಸುರತ್ಕಲ್‌ನಲ್ಲಿ ಹತ್ಯೆ ಮಾಡಿತ್ತು. ಪ್ರಕರಣ ಸಂಬಂಧ ಪೊಲೀಸರು ಸುಹಾಸ್ ಶೆಟ್ಟಿ, ಮೋಹನ್ ಸಿಂಗ್, ಗಿರಿಧರ್, ಅಭಿಷೇಕ್, ಶ್ರೀನಿವಾಸ್ ಹಾಗೂ ದೀಕ್ಷಿತ್, ಅಜಿತ್ ಕ್ರಾಸ್ತಾ ಎಂಬುವವರನ್ನು ಈಗಾಗಲೇ ಬಂಧಿಸಿದ್ದಾರೆ. ಆರೋಪಿಗಳೆಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಕೆಕೆಆರ್‌ಡಿಬಿ ವಿವೇಚನಾ ನಿಧಿ ತಾರತಮ್ಯಕ್ಕೆ ತೇಪೆ

ಬಿಜೆಪಿ ಕ್ಷೇತ್ರಗಳಿಗೆ ತಲಾ ₹ 3 ಕೋಟಿ; ಕಾಂಗ್ರೆಸ್– ಜೆಡಿಎಸ್ ಕ್ಷೇತ್ರಗಳಿಗೆ ತಲಾ ₹ 1 ಕೋಟಿ

● ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2022–23) ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಹಂಚಿಕೆಯಾದ ₹ 3 ಸಾವಿರ ಕೋಟಿ ಅನುದಾನದಲ್ಲಿ ಸರ್ಕಾರದ ‘ವಿವೇಚನಾ ನಿಧಿ’ ₹ 150 ಕೋಟಿಯನ್ನು ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ಮಾತ್ರ ಹಂಚಲಾಗುತ್ತಿದೆ ಎಂಬ ಆರೋಪ ಕೇಳಿಬಂದ ಬೆನ್ನಲ್ಲೆ, ಕಾಂಗ್ರೆಸ್– ಜೆಡಿಎಸ್ ಶಾಸಕರ ಕ್ಷೇತ್ರಗಳಿಗೂ ‘ಪಾಲು’ ನೀಡಲಾಗಿದೆ.

ಬಿಜೆಪಿ ಶಾಸಕರಿರುವ 19 ಕ್ಷೇತ್ರಗಳಿಗೆ ತಲಾ ₹ 3 ಕೋಟಿಯಂತೆ ₹ 57 ಕೋಟಿಯನ್ನು ಜೂನ್ 13ರಂದೇ ಹಂಚಿಕೆ ಮಾಡಲಾಗಿತ್ತು. ಇದಕ್ಕೆ ಅಪಸ್ವರ ವ್ಯಕ್ತವಾದ ಕಾರಣ ಕಾಂಗ್ರೆಸ್ಸಿನ 19, ಜೆಡಿಎಸ್‌ನ 3 (ಒಟ್ಟು 22) ಕ್ಷೇತ್ರಗಳಿಗೆ ತಲಾ ₹ 1 ಕೋಟಿಯಂತೆ ಒಟ್ಟು ₹ 22 ಕೋಟಿಯನ್ನು ಹಂಚಿಕೆ ಮಾಡಿ ಸಮಾಧಾನಪಡಿಸಲಾಗಿದೆ.

ಒಟ್ಟು ಅನುದಾನದಲ್ಲಿ ಸರ್ಕಾರದ ವಿವೇಚನಾ ನಿಧಿ ಶೇ 5ರಷ್ಟನ್ನು (₹ 150 ಕೋಟಿ) ಯೋಜನಾ ಸಚಿವರ (ಮುನಿರತ್ನ) ವಿವೇಚನೆಯಂತೆ ಹಂಚಿಕೆ ಮಾಡಲಾಗುತ್ತದೆ. ಸಚಿವರ ಟಿಪ್ಪಣಿ ಯಂತೆ, ಈ ನಿಧಿಯಿಂದ ಈಗಾಗಲೇ ₹ 9.50 ಕೋಟಿ, ₹ 57 ಕೋಟಿ, ₹ 17 ಕೋಟಿ, ₹ 11 ಕೋಟಿ ಮತ್ತು ₹ 22 ಕೋಟಿ ಹೀಗೆ ಒಟ್ಟು ₹ 116.50 ಕೋಟಿ ಮೊತ್ತದ ಕಾಮಗಾರಿಗಳ ಅನುಷ್ಠಾನಕ್ಕೆ ಸರ್ಕಾರದಿಂದ ಕಾರ್ಯಾದೇಶ ಹೊರಡಿಸಲಾಗಿದೆ.

ಕೆಕೆಆರ್‌ಡಿಬಿ ₹ 3 ಸಾವಿರ ಕೋಟಿಯಲ್ಲಿ ₹ 1,500 ಕೋಟಿಗೆ ಮಾತ್ರ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಡಿ.ಎಂ. ನಂಜುಂಡಪ್ಪ ವರದಿಯಲ್ಲಿ-ರುವ ಸಮಗ್ರ ಅಭಿವೃದ್ಧಿ ಸೂಚಿಯನ್ವಯ (ಸಿಡಿಐ– ಇಂಡೆಕ್ಸ್) ಅನುದಾನ ಹಂಚಿಕೆ ಮಾಡಿ, ಕ್ರಿಯಾ ಯೋಜನೆ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸುತ್ತದೆ. ಇನ್ನುಳಿದ, ₹ 1,500 ಕೋಟಿಯಲ್ಲಿ ವಿವೇಚನಾ ನಿಧಿ ಮತ್ತು ಇತರ ವೆಚ್ಚ ಭರಿಸಲಾಗುತ್ತದೆ.

‘ವಿವೇಚನಾ ನಿಧಿ’ – ಯಾರ ಪಾಲು ಎಷ್ಟು?

ಯಾರಿಗೆ	ಮೊತ್ತ (₹ ಕೋಟಿಗಳಲ್ಲಿ)	ಶೇ (ಒಟ್ಟು ಮೊತ್ತದಲ್ಲಿ)
ಯೋಜನಾ ಸಚಿವರು (ಸರ್ಕಾರದ ವಿವೇಚನೆ)	150	5
ಮುಖ್ಯಮಂತ್ರಿ	60	2
ಕೆಕೆಆರ್‌ಡಿಬಿ ಅಧ್ಯಕ್ಷ	90	3
ಪ್ರಾದೇಶಿಕ ನಿಧಿ (ಆರ್‌ಎಫ್)	150	5
ಆಡಳಿತಾತ್ಮಕ ವೆಚ್ಚ	30	1

ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಈ ಏಳು ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 41 ವಿಧಾನಸಭಾ ಕ್ಷೇತ್ರಗಳಿವೆ. ಈ ಪೈಕಿ, ಬಿಜೆಪಿ ಶಾಸಕರಿರುವ ಸೇಡಂ, ಚಿಂಚೋಳಿ, ಕಲಬುರಗಿ ಗ್ರಾಮಾಂತರ, ಆಳಂದ, ಕಲಬುರಗಿ ದಕ್ಷಿಣ, ಸುರಪುರ, ಯಾದಗಿರಿ, ಬಸವಕಲ್ಯಾಣ, ಔರಾದ್, ರಾಯಚೂರು, ದೇವದುರ್ಗ, ಕನಕಗಿರಿ, ಗಂಗಾವತಿ, ಯಲಬುರ್ಗಾ, ವಿಜಯನಗರ, ಕೂಡ್ಲಿಗಿ, ಹರಪನಹಳ್ಳಿ, ಸಿರಗುಪ್ಪ, ಬಳ್ಳಾರಿ ನಗರ ಈ 19 ಕ್ಷೇ-ತ್ರಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ, ಪದವಿ ಪೂರ್ವ ಕಾಲೇಜು ಮತ್ತು ಪದವಿ ಕಾಲೇಜುಗಳಲ್ಲಿ ಸ್ಮಾರ್ಟ್ ಕ್ಲಾಸ್ ಅಳವಡಿಸಲು ತಲಾ ₹ 1 ಕೋಟಿಯಂತೆ (ಪ್ರತಿ ಕ್ಷೇತ್ರಕ್ಕೆ ₹ 3 ಕೋಟಿ) ವಿವೇಚನಾ ನಿಧಿಯಿಂದ ₹ 57 ಕೋಟಿ ಹಂಚಿಕೆ ಮಾಡಿ ಸರ್ಕಾರ ಜೂನ್‌ನಲ್ಲಿಯೇ ಕಾರ್ಯಾದೇಶ ಹೊರಡಿಸಿತ್ತು.



ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಚೇರಿ

ಆದರೆ, ಕಾಂಗ್ರೆಸ್, ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ವಿವೇಚನಾ ನಿಧಿ ನೀಡದಿರುವುದು ಆಕ್ರೋಶಕ್ಕೆ ಕಾರಣವಾಗಿತ್ತು. ಹಿಂದುಳಿದಿರುವಿಕೆ ಆಧಾರದಲ್ಲಿ ಅನುದಾನ ನೀಡಲು ವಿವೇಚನೆ ಬಳಸಬೇಕೆ ಹೊರತು ಬಿಜೆಪಿ ಕ್ಷೇತ್ರಗಳಿಗೆ ಮಾತ್ರ ಬಳಸಿದರೆ ಹೇಗೆ ಎಂದು ಕೆಲವು ಶಾಸಕರು ಪ್ರಶ್ನಿ-ಸಿದ್ದರು. ಇದೀಗ, ಕಾಂಗ್ರೆಸ್, ಜೆಡಿಎಸ್ ಶಾಸಕರಿರುವ ಕ್ಷೇತ್ರಗಳಲ್ಲಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮಾತ್ರ ಸ್ಮಾರ್ಟ್ ಕ್ಲಾಸ್ ಅಳವಡಿಸಲು ತಲಾ ₹ 1 ಕೋಟಿಯಂತೆ ಒಟ್ಟು ₹ 22 ಕೋಟಿಯ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ.

ಕಲಬುರಗಿ (ಉತ್ತರ), ಚಿತ್ತಾಪುರ, ಅಫಜಲಪುರ, ಜೇವರ್ಗಿ, ಶಹಾಪುರ, ಹುಮನಾಬಾದ್, ಬೀದರ್, ಬಾಲ್ಕಿ, ಸಿಂಧನೂರು, ರಾಯಚೂರು (ಗ್ರಾಮಾಂತರ), ಲಿಂಗಸೂರು, ಮಸ್ಕಿ, ಕುಷ್ಟಗಿ, ಕೊಪ್ಪಳ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಬಳ್ಳಾರಿ, ಸಂಡೂರು ಮತ್ತು ಕಂಪ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್, ಬೀದರ್ (ದಕ್ಷಿಣ), ಮಾನ್ವಿ ಮತ್ತು ಗುರುಮಠಕಲ್ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರಿದ್ದಾರೆ.

ತೋಟಗಾರಿಕಾ ವಿವಿಗಳಿಗೆ ನಿಧಿ: ಅಲ್ಲದೆ, ಸರ್ಕಾರದ ವಿವಾಚನಾ ನಿಧಿಯಿಂದ ಕೆಕೆಆರ್‌ಡಿಬಿ ವ್ಯಾಪ್ತಿಯ ಮುನಿರಾಬಾದ್ (ಕೊಪ್ಪಳ) ಹಾಗೂ ಬೀದರ್‌ನಲ್ಲಿರುವ ಎರಡು ತೋಟಗಾರಿಕಾ ವಿಜ್ಞಾನಗಳ ವಿದ್ಯಾ-ಲಯಗಳಲ್ಲಿ ಸೋಲಾರ್ ಪ್ಯಾನಲ್ ಆಧಾರಿತ ಹೈ ಮಾಸ್ಟ್ ವಿದ್ಯುತ್ ಸೌಲಭ್ಯಗಳು, ಸಿಸಿಟಿವಿ ಕ್ಯಾಮೆರಾ ಮತ್ತು ಸ್ಮಾರ್ಟ್ ಕ್ಲಾಸ್‌ಗಳನ್ನು ಅಳವಡಿಸುವ ಕಾಮಗಾರಿಗೆ ತಲಾ ₹ 4.75 ಕೋಟಿಯಂತೆ ₹ 9.50 ಕೋಟಿಯ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಇದೇ ವ್ಯಾಪ್ತಿಯ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಮತ್ತು ಇತರ ಅಭಿವೃದ್ಧಿಗೆ ಒಟ್ಟು ₹ 17 ಕೋಟಿ ಮೊತ್ತದಲ್ಲಿ ನಾಲ್ಕು ಕಾಮಗಾರಿಗೂ ಕಾರ್ಯಾದೇಶ ನೀಡಲಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE


www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಸರ್ಕಾರ ನಡೀತಾ ಇಲ್ಲ ಮಾಧುಸ್ವಾಮಿ ಹೇಳಿಕೆ ಹಿನ್ನೆಲೆ?

ಸಂವಾದ

ಭಾಗವಹಿಸುವವರು



ಎಲ್. ಗಂಗಾಧರಮೂರ್ತಿ
ರಾಜ್ಯ ವಕ್ತಾರ, ಜೆಡಿಎಸ್



ಅನಿಲ್ ಕುಮಾರ್ ತಡ್ಕಲ್
ರಾಜ್ಯ ವಕ್ತಾರ
ಕಾಂಗ್ರೆಸ್



ಕುಶಲಸ್ವಾಮಿ
ಮಹಿಳಾ ಘಟಕದ ಅಧ್ಯಕ್ಷೆ,
ಬೆಂಗಳೂರು ನಗರ, ಎಎಪಿ

ಮಧ್ಯಾಹ್ನ 12 ರಿಂದ 1

ಮಿಸಳ್ ಹಾಪ್ಚಾ
ಆಹಹಾ... ಅನ್ನಪೂರ್ಣೆಯರ ಊಟ

ಪಾಡ್‌ಕಾಸ್ಟ್: **ಪ್ರಚಲಿತ:** ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.32	14,711	2,298
ಹಾರಂಗಿ	2,859	2,856.26	2,280	1,400
ಕಬಿನಿ	2,284	2,283.33	6,566	4,000
ಹೇಮಾವತಿ	2,922	2,921.85	8,756	5,900
ಲಿಂಗನಮಕ್ಕಿ	1,819	1,812	13,508	7,512
ಸೂಪಾ (ಮೀ)	564	548.18	8,784	2,148
ಮಾಣಿ	594	587	920	575
ತುಂಗಭದ್ರಾ	1,633	1,632.99	65,404	46,914
ಮಲಪ್ರಭಾ	2079.50	2,077	6,428	1,694
ಘಟಪ್ರಭಾ	2,175	2,173.15	7,527	9,115
ಭದ್ರಾ	186	183	8,607	6,234
ಆಲಮಟ್ಟಿ (ಮೀ)	519.60	518.82	203934	1,25,000
ನಾರಾಯಣಪುರ (ಮೀ)	492.25	491.71	1,25,000	1,28,612

* ನೆಲಮಟ್ಟದಿಂದ

178 ಮಠಗಳಿಗೆ ₹108 ಕೋಟಿ ಅನುದಾನ

ಬೆಂಗಳೂರು: ವಿವಿಧ ಸಮುದಾಯಗಳ 178 ಮಠಗಳಿಗೆ ₹ 108.24 ಕೋಟಿ, 59 ದೇವಸ್ಥಾನಗಳಿಗೆ ₹ 21.35 ಕೋಟಿ, 26 ವಿವಿಧ ಸಂಘ-ಸಂಸ್ಥೆಗಳು ಹಾಗೂ ಟ್ರಸ್ಟ್‌ಗಳಿಗೆ ₹ 13 ಕೋಟಿ ಸೇರಿ ಒಟ್ಟು ₹ 142.59 ಕೋಟಿ ಅನುದಾನ ಬಿಡುಗಡೆ ಮಾಡಿ ಮುಜರಾಯಿ ಇಲಾಖೆ ಆದೇಶ ಹೊರಡಿಸಿದೆ.

ಈ ಪೈಕಿ, ಜೋಯಿಡಾ ತಾಲ್ಲೂಕಿನ ಉಳವಿ ಚೆನ್ನಬಸವೇಶ್ವರ ಮಠ, ದಾವಣಗೆರೆಯ ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್‌ಗೆ ತಲಾ ₹ 5 ಕೋಟಿ, ಉಡುಪಿ-ಕುಂಜಾರುಗಿರಿಯ ದುರ್ಗಾ ಬೆಟ್ಟದಲ್ಲಿರುವ ‘ಮಧ್ವವನ’ ಅಭಿವೃದ್ಧಿಗೆ, ಚಿಕ್ಕಮಗಳೂರಿನ ದೊಡ್ಡ ಕುರುಬರಹಳ್ಳಿಯಲ್ಲಿರುವ ಬಸವತತ್ವ ಪೀಠಕ್ಕೆ ತಲಾ ₹3 ಕೋಟಿ, ತಿಪಟೂರಿನ ಷಡಕ್ಷರ ಮಠ, ಹನಗವಾಡಿಯ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠ, ಬೆಂಗಳೂರಿನ ತಿಪ್ಪಶೆಟ್ಟಿ ಮಠ, ಹುಕ್ಕೇರಿ ತಾಲ್ಲೂಕಿನ ಹಾವೇರಿ ಮಠ, ಅಥಣಿಯ ಶಿವಯೋಗಿ ಮುರುಘೇಂದ್ರ ಮಠ, ಶಿವಮೊಗ್ಗದ ಬೆಕ್ಕಿನಕಲ್ಮಠಕ್ಕೆ ತಲಾ ₹ 2 ಕೋಟಿ, ದೇವಸ್ಥಾನಗಳ ಪೈಕಿ ಬನವಾಸಿಯ ಮಧುಕೇಶ್ವರ ದೇಗುಲ ರಥ ನಿರ್ಮಾಣಕ್ಕೆ ₹ 3 ಕೋಟಿ ಒದಗಿಸಲಾಗಿದೆ. ‘ರಾಜ್ಯದ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅತಿ ಹೆಚ್ಚು ಅನುದಾನ ಬಿಡುಗಡೆ ಮಾಡಲಾಗಿದೆ. ಇದೀಗ ಹೆಚ್ಚುವರಿ ಅನುದಾನ ಒದಗಿಸಿ ಆದೇಶಿಸಲಾಗಿದೆ’ ಎಂದು ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

ಶಿಕ್ಷಕರ ಪರೀಕ್ಷೆ: 54,342 ಮಂದಿ ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರ (6ರಿಂದ 8ನೇ ತರಗತಿ) 15 ಸಾವಿರ ಹುದ್ದೆಗಳಿಗೆ ನಡೆದಿದ್ದ ನೇಮಕಾತಿ ಪರೀಕ್ಷೆಯ ಫಲಿತಾಂಶ ಬುಧವಾರ ಪ್ರಕಟವಾಗಿ-ದ್ದು, 54,342 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ.

ನೇಮಕಾತಿ ಬಯಸಿ 1,16,223 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅವರಲ್ಲಿ 74,923 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 20,581 ಅಭ್ಯರ್ಥಿಗಳು ಅರ್ಹತೆ ಪಡೆದಿಲ್ಲ.

ಖಾಲಿ ಹುದ್ದೆಗಿಂತಲೂ ಕಡಿಮೆ ಅಭ್ಯರ್ಥಿಗಳು: ಉರ್ದು, ಮರಾಠಿ, ತೆಲುಗು ಭಾಷಾ ಶಾಲೆಗಳಲ್ಲಿ ಖಾಲಿದ್ದ ಶಿಕ್ಷಕರ ಹುದ್ದೆಗಳಿಗೂ ಪರೀಕ್ಷೆ ನಡೆಸಲಾಗಿತ್ತು. ಆದರೆ, ಖಾಲಿ ಹುದ್ದೆಗೂ ಕಡಿಮೆ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಗಣಿತ–ವಿಜ್ಞಾನದಲ್ಲಿ 74 ಹುದ್ದೆಗಳಿಗೆ 50 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಉರ್ದು ಶಾಲೆಗಳ ಗಣಿತ–ವಿಜ್ಞಾನದಲ್ಲಿ 411 ಹುದ್ದೆಗಳು ಖಾಲಿ ಇದ್ದರೆ 286 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ.

ಪರೀಕ್ಷಾ ಫಲಿತಾಂಶವನ್ನು ಇಲಾಖೆಯ ವೆಬ್‌ಸೈಟ್ https://www.schooleducation.kar.nic.in ವೀಕ್ಷಿಸಬಹುದು.

ಮಾಧುಸ್ವಾಮಿ ಜೊತೆ ಮಾತನಾಡಿದ್ದು ನಾನೇ: ಭಾಸ್ಕರ್

ಪ್ರಜಾವಾಣಿ ವಾರ್ತೆ

ರಾಮನಗರ: ‘ಸಚಿವ ಮಾಧುಸ್ವಾಮಿ ಜೊತೆ ಫೋನಿನಲ್ಲಿ ಮಾತನಾಡಿರುವುದು ನಾನೇ. ಸಹಕಾರ ಬ್ಯಾಂಕ್‌ನಲ್ಲಿನ ಅನ್ಯಾಯದ ಬಗ್ಗೆ ದೂರು ನೀಡಲು ಕರೆ ಮಾಡಿದ್ದೆ’ ಎಂದು ಚನ್ನಪಟ್ಟಣದ ಸಾಮಾಜಿಕ ಹೋರಾಟಗಾರ ಭಾಸ್ಕರ್ ಎಂಬುವರು ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಬುಧವಾರ ಮಾಧ್ಯಮಗಳೊಂದಿ-ಗೆ ಮಾತನಾಡಿದ ಭಾಸ್ಕರ್ ‘ನಾನು ಮುಖ್ಯಮಂತ್ರಿ ಬೊಮ್ಮಾಯಿ, ಸಚಿವ ಸಿ.ಸಿ. ಪಾಟೀಲ್, ಎಸ್.ಟಿ. ಸೋಮಶೇಖರ್, ಪ್ರತಿ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೂ ಕರೆ ಮಾಡಿದ್ದೆ. ಆದರೆ, ಅವರು ಯಾರು ಕರೆ ಸ್ವೀಕರಿಸಲಿಲ್ಲ. ಸಚಿವ ಮಾಧುಸ್ವಾಮಿ ಮಾತ್ರ ಕರೆ ಸ್ವೀಕರಿಸಿದರು’ ಎಂದು ಮಾಹಿತಿ ನೀಡಿದರು.

‘ಸಚಿವರ ಅಸಹಾಯಕತೆ ಕುರಿತು ಆಡಿಯೋ ಹಂಚಿಕೊಂಡಿದ್ದೇನೆ. ಬೇಕಾದರೆ, ಆಡಿಯೊ ವೈರಲ್ ಆಗಿರುವ ಕುರಿತು ನನ್ನ ಮೇಲೆ ಕ್ರಮ ಜರುಗಿಸಲಿ. ಜವಾಬ್ದಾರಿ ನಿರ್ವಹಿಸಲು ಆಗಲಿಲ್ಲವಾದರೆ ರಾಜೀನಾಮೆ ನೀಡಲಿ’ ಎಂದು ಹೇಳಿದರು.

ನಾವು ಬೀದಿಗೆ ಇಳಿದ ನಂತರ ಬದಲಾವಣೆ ಗಾಳಿ: ಬಿಎಸ್‌ವೈ

‘ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2023ರ ವಿಧಾನಸಭಾ ಚುನಾವಣೆಯನ್ನು ಸಾಮೂಹಿಕ ನಾಯ-ಕತ್ವದಲ್ಲಿ ಎದುರಿಸುತ್ತೇವೆ. ನಾವು ಬೀದಿಗೆ ಇಳಿದ ನಂತರ ಬದಲಾವಣೆಯ ಬಿರುಗಾಳಿ ಬೀಸಲಿದೆ’ ಎಂದು ಬಿಜೆಪಿಯ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯರಾಗಿ ನೇಮಕಗೊಂಡ ಶಾಸಕ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಬುಧವಾರ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಅವರು, ‘ನಾನಾಗಲಿ, ಬೊಮ್ಮಾಯಿ ಆಗಲಿ, ಏಕ ನಾಯಕತ್ವದಿಂದ ಕೆಲಸ ಆಗುವುದಿಲ್ಲ. ಸಾಮೂಹಿಕ ಪ್ರಯತ್ನ ಬೇಕೆಬೇಕು’ ಎಂದು ಹೇಳಿದರು.

‘ಸಿದ್ದರಾಮೋತ್ಸವ ಬಗ್ಗೆ ನಾವು ಗಾಬರಿಯಾಗಿಲ್ಲ. ನಮ್ಮ ಸಾಮೂಹಿಕ ನಾಯಕತ್ವ ಬೀದಿಗೆ ಇಳಿದ ಮೇಲೆ ಏನಾಗುತ್ತದೆ ಎಂಬುದನ್ನು ನೀವೇ ನೋಡುತ್ತೀರಿ. ನಮ್ಮ ಸರ್ಕಾರಗಳ ಜನಪರ ಕಾರ್ಯಕ್ರಮವೇ ನಮ್ಮ ಬಂಡವಾಳ. ಚುನಾವಣೆಯಲ್ಲಿ 135 ಸೀಟುಗಳನ್ನು ಗೆಲ್ಲುವುದು ನಮ್ಮ ಗುರಿ’ ಎಂದು ಯಡಿಯೂರಪ್ಪ ಹೇಳಿದರು.

‘ರಾಜಕಾರಣ ಮತ್ತು ಸಾರ್ವಜನಿಕ ಜೀವನವನ್ನು ನಿವೃತ್ತಿಯ ಕ್ಷೇತ್ರವೆಂದು ನಾನು ಭಾವಿಸಿಲ್ಲ. ಇದು ವರಿಷ್ಠರಿಗೂ ಗೊತ್ತು. ಕ್ರಿಯಾಶೀಲ ಕಾರ್ಯ-ಕರ್ತರನ್ನು ಪಕ್ಷ ಕೈಬಿಡುವುದಿಲ್ಲ ಎಂಬುದಕ್ಕೆ ನನ್ನದೇ ಉದಾಹರಣೆ ಇದೆ. ಹೈಕಮಾಂಡ್ ಕೊಟ್ಟಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವುದರ ಜತೆಗೆ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಬೇರೆ ಪಕ್ಷ ಅಧಿಕಾರಕ್ಕೆ ಬರಲು ಬಿಡುವುದಿಲ್ಲ’ ಎಂದರು.

‘ವರಿಷ್ಠರು ನೀಡಿರುವ ದೊಡ್ಡ ಜವಾಬ್ದಾರಿಯನ್ನು ವಿನಮ್ರತೆಯಿಂದ-ಲೇ ಸ್ವೀಕರಿಸಿದ್ದೇನೆ. ಇದನ್ನು ನಿರೀಕ್ಷಿಸಿ-ರಲಿಲ್ಲ. ರಾಜ್ಯದ ಎಲ್ಲ ನಾಯಕರ ಜತೆ ಒಗ್ಗಟ್ಟಿನಿಂದ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರುವುದಷ್ಟೇ ನಮ್ಮ ಏಕೈಕ ಗುರಿ. ಅದನ್ನು ಮಾಡಿಯೇ ತೀರುತ್ತೇವೆ. ಮುಖ್ಯಮಂತ್ರಿ ಆಗುವ ಹಗಲು ಕನಸು ಕಾಣುವವರು ಕಾಣುತ್ತಲೇ ಇರಲಿ, ನಮ್ಮ ಅಭ್ಯಂತರವೇನೂ ಇಲ್ಲ’ ಎಂದು ಅವರು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಕಾಲೆಳೆದರು.

‘ದೂರವಾಣಿ ಮೂಲಕ ಮಾತನಾಡಿದ ಪ್ರಧಾನಿ ಮೋದಿ ಮತ್ತು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ರಾಜ್ಯದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಓಡಾಡಿ ಪಕ್ಷಕ್ಕೆ ಶಕ್ತಿ ತುಂಬಲು ಸಲಹೆ ನೀಡಿದ್ದಾರೆ’ ಎಂದರು.

ಅಭಿನಂದನೆಗೆ ಭಾರಿ ಸಂದಣಿ: ನೇಮಕದ ಆದೇಶ ಹೊರ ಬೀಳುತ್ತಿದ್ದಂತೆ ಪಕ್ಷದ ನಾಯಕರು, ಶಾಸಕರು ಮತ್ತು ಸಚಿವರು ಯಡಿಯೂರಪ್ಪ ಅವರ ಮನೆಗೆ ಧಾವಿಸಿ ಅಭಿನಂದನೆ ಸಲ್ಲಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಇದ್ದರು.



ಬಿಜೆಪಿ ಸಂಸದೀಯ ಮಂಡಳಿ ಹಾಗೂ ಕೇಂದ್ರ ಚುನಾವಣಾ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಬಿ. ಎಸ್. ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ಸಚಿವ ಗೋವಿಂದ ಕಾರಜೋಳ, ಸಂಸದ ಡಿ.ವಿ. ಸದಾನಂದಗೌಡ ಇದ್ದರು.

ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷರಾಗಿ ಹಿ.ಶಿ. ರಾಮಚಂದ್ರೇಗೌಡ ಆಯ್ಕೆ

ಪ್ರಜಾವಾಣಿ ವಾರ್ತೆ

ರಾಮನಗರ: ಕರ್ನಾಟಕ ಜಾನಪದ ಪರಿಷತ್ ಮತ್ತು ಜಾನಪದ ಲೋಕದ ನೂತನ ಅಧ್ಯಕ್ಷರಾಗಿ ಜಾನಪದ ವಿದ್ವಾಂಸ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಆಯ್ಕೆ-ಯಾಗಿದ್ದಾರೆ.



ಹಿಂದಿನ ಅಧ್ಯಕ್ಷ ಟಿ. ತಿಮ್ಮೇಗೌಡರ ರಾಜೀನಾಮೆಯಿಂದ ಈ ಸ್ಥಾನ ತೆರವಾಗಿತ್ತು. ಬುಧವಾರ ನಡೆದ ಪರಿಷತ್ತಿನ 122ನೇ ಆಡಳಿತ ಮಂಡಳಿ ಸಭೆಯಲ್ಲಿ ರಾಮಚಂದ್ರೇಗೌಡ ಅವರನ್ನು ಸರ್ವಾ-ನುಮತದಿಂದ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು ಎಂದು ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ತಿಳಿಸಿದ್ದಾರೆ.

ಇದೇ 22ರಂದು ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮವು ನಡೆಯಲಿದೆ. ರಾಮಚಂದ್ರೇಗೌಡರು ಈ ಹಿಂದೆ ಪರಿಷತ್ತಿನ ಆಡಳಿತ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಜಾನಪದ ಪ್ರಾಧ್ಯಾಪಕರಾಗಿರುವ ರಾಮಚಂದ್ರೇ-ಗೌಡರು 2001ರಿಂದ 2004ರವರೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ಕಾರ್ಯ ನಿರ್ವ-ಹಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕನ್ನಡ ಸಮಗ್ರ ಜನಪದ ಸಾಹಿತ್ಯ ಪ್ರಕಟಣೆ ಸಮಿತಿ ಅಧ್ಯಕ್ಷರಾಗಿ-ಯೂ ದುಡಿದಿದ್ದಾರೆ. 25ಕ್ಕೂ ಹೆಚ್ಚು ಕೃತಿ ರಚಿಸಿದ್ದು, ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪುರಸ್ಕಾರ ಸಂದಿವೆ.

ಸದ್ದು ಮಾಡಿದ್ದ ವಿವಾದ

ಕಳೆದ ಹತ್ತು ವರ್ಷಗಳಿಂದ ಪರಿಷತ್ತಿನ ಅಧ್ಯಕ್ಷರಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡ ಜೂನ್‌ನಲ್ಲಿ ರಾಜೀನಾಮೆ ಸಲ್ಲಿಸಿದ್ದರು. ಅವರ ಸ್ಥಾನದಲ್ಲಿ ಮತ್ತೊಬ್ಬ ನಿವೃತ್ತ ಐಎಎಸ್ ಅಧಿಕಾರಿಯನ್ನೇ ತರುವ ಪ್ರಯತ್ನ ನಡೆದಿತ್ತು. ಆದರೆ ಈ ಬಾರಿ ಅಧಿಕಾರಿಗಳ ಬದಲಿಗೆ ಜಾನಪದದ ಬಗ್ಗೆ ಆಸಕ್ತಿ ಹೊಂದಿರುವ ವಿದ್ವಾಂಸರಿಗೆ ಅವಕಾಶ ನೀಡಬೇಕು ಎನ್ನುವ ಕೂಗು ಜೋರಾಗಿತ್ತು. ಅಂತಿಮವಾಗಿ ಜನಪದ ಕ್ಷೇತ್ರದಲ್ಲಿ ಅನುಭವ ಉಳ್ಳವರಿಗೆ ಪರಿಷತ್‌ನ ಆಡಳಿತ ಮಂಡಳಿ ಅವಕಾಶ ನೀಡಿದೆ.

ಅಕ್ರಮ ವಿದೇಶಿಗರಿಗೆ ಪುನರ್ವಸತಿ ಇಲ್ಲ– ಗೃಹ ಸಚಿವಾಲಯ ಸ್ಪಷ್ಟನೆ

ರೋಹಿಂಗ್ಯಾ ಜನರಿಗೆ ನೆಲೆ: ಮತ್ತೆ ವಿವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ರೋಹಿಂಗ್ಯಾ ಸಮುದಾಯದವರಿಗೆ ದೆಹಲಿಯ ಬಕ್ಕಾರ್‌ವಾಲಾದಲ್ಲಿರುವ ಇಡಬ್ಲ್ಯುಎಸ್ (ಆರ್ಥಿಕವಾಗಿ ದುರ್ಬಲ ವರ್ಗದವರು) ಫ್ಲ್ಯಾಟ್‌ಗಳಲ್ಲಿ ನೆಲೆ ಕಲ್ಪಿಸುವುದಾಗಿ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಬುಧವಾರ ಟ್ವೀಟ್‌ನಲ್ಲಿ ಘೋಷಿಸಿರುವುದು, ಬಿಜೆಪಿಯ ಕೇಂದ್ರ ಸರ್ಕಾರವನ್ನು ಮತ್ತೊಂದು ವಿವಾದಕ್ಕೆ ಸಿಲುಕಿದೆ.

ಸರ್ಕಾರದ ನಡೆಗೆ ಪಕ್ಷದ ಪ್ರಮುಖ ಬೆಂಬಲಿಗರು ಮತ್ತು ಹಿಂದೂ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಸ್ಪಷ್ಟೀಕರಣ ಕೋರಿವೆ.

‘ರೋಹಿಂಗ್ಯಾ ವಲಸಿಗರನ್ನು ಹೊಸ ಸ್ಥಳಕ್ಕೆ ಸ್ಥಳಾಂತರಿಸುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇಲ್ಲ. ಇವರ ಸ್ಥಳಾಂತರ ಪ್ರಸ್ತಾವ ದೆಹಲಿ ಸರ್ಕಾರದ್ದು’ ಎಂದು ಗೃಹ ಸಚಿವಾಲಯ ಸ್ಪಷ್ಟಪಡಿಸಿದೆ.

ಪುರಿ, ಟ್ವೀಟ್‌ನಲ್ಲಿ ‘ರೋಹಿಂಗ್ಯಾ ವಲಸಿಗರಿಗೆ ಮೂಲಸೌಕರ್ಯ, ಗುರುತಿನ ಚೀಟಿ ಹಾಗೂ ಪೊಲೀಸ್ ರಕ್ಷಣೆ ಒದಗಿಸಲಾಗುವುದು’ ಎಂದಿದ್ದಾರೆ.

‘ವಲಸಿಗರು ಇರುವ ಸ್ಥಳವನ್ನು ಗೃಹ ಬಂಧನ ಕೇಂದ್ರವೆಂದು ದೆಹಲಿ ಸರ್ಕಾರ ಘೋಷಿಸಿಲ್ಲ. ಗಡೀಪಾರು ಆಗುವವರೆಗೆ ಅಕ್ರಮ ವಿದೇಶಿಯರನ್ನು ಈಗ ಇರುವ ಸ್ಥಳದಲ್ಲೇ ಇರಿಸಬೇಕು’ ಎಂಬ ಗೃಹ ಸಚಿವಾಲಯದ ಮತ್ತೊಂದು ಟ್ವೀಟ್ ಅನುಮೋದಿಸಿರುವ ಸಚಿವ ಪುರಿ, ‘ಇದು ಸರಿಯಾದ ಮಾಹಿತಿ’ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಬಿಜೆಪಿ ಮತ್ತು ಎಎಪಿ ನಡುವೆ ವಾಕ್ಸಮರವೂ ನಡೆದಿದೆ. ‘ಬಿಜೆಪಿಯ ನೈಜ ಮುಖವು ಕೇಂದ್ರದ ನಿರ್ಧಾರದಿಂದ ಬಹಿರಂಗಗೊಂಡಿದೆ’ ಎಂದು ಎಎಪಿ ಕಿಡಿಕಾರಿದೆ. ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ‘ರೋಹಿಂಗ್ಯಾ ವಲಸಿಗರಿಂದ ದೇಶದ ಆಂತರಿಕ ಭದ್ರತೆಗೆ ಅಪಾಯವಿದೆ. ಇದರಲ್ಲಿ ಯಾವುದೇ ರಾಜೀ ಇಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

ಕೇಂದ್ರದ ವಿರುದ್ಧ ವಿಎಚ್‌ಪಿ ಕಿಡಿ


ರೋಹಿಂಗ್ಯಾ ಸಮುದಾದವರನ್ನು ನಿರಾಶ್ರಿತರೆಂದಿರುವುದಕ್ಕೆ ಬಿಜೆಪಿ ಮತ್ತು ಕೇಂದ್ರದ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿರುವ ವಿಎಚ್‌ಪಿ ಅಧ್ಯಕ್ಷ ಅಲೋಕ್ ಕುಮಾರ್, ‘ರೋಹಿಂಗ್ಯಾ ನುಸುಳುಕೋರರು ನಿರಾಶ್ರಿತರಲ್ಲ. ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಕೇಂದ್ರ ಸರ್ಕಾರ ನುಸುಳುಕೋರರೆಂದು ಪರಿಗಣಿಸಿರುವ ನಿಲುವು ಇದೆ’ ಎಂದು ನೆನಪಿಸಿದರು.

ಪಾಕಿಸ್ತಾನದಿಂದ ವಲಸೆ ಬಂದ ಹಿಂದೂ ನಿರಾಶ್ರಿತರು ಉತ್ತರ ದೆಹಲಿಯ ಮಜ್ನು-ಕಾ-ತಿಲಾದಲ್ಲಿ ಅಮಾನವೀಯ ಪರಿಸ್ಥಿತಿಗಳಲ್ಲಿ ಬದುಕುತ್ತಿರುವಾಗ, ಸಚಿವರ ಇಂತಹ ಘೋಷಣೆ ಶೋಚನೀಯ ಎಂದು ಅವರು ಕಿಡಿಕಾರಿದರು.

ಗುಲಾಂ ನಬಿ ಆಜಾದ್ ರಾಜೀನಾಮೆ

ವಿಕಾರ್ ರಸೂಲ್ ವಾನಿಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ಪಕ್ಷದ ಅಧ್ಯಕ್ಷ ಪಟ್ಟ

ಪ್ರಜಾವಾಣಿವಾರ್ತೆ



ಗುಲಾಂ ನಬಿ ಆಜಾದ್

ಶ್ರೀನಗರ: ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರು ಪಕ್ಷದ ಜಮ್ಮು ಮತ್ತು ಕಾಶ್ಮೀರ ಪ್ರಚಾರ ಸಮಿತಿ ಹಾಗೂ ರಾಜಕೀಯ ವ್ಯವಹಾರಗಳ ಸಮಿತಿ ಅಧ್ಯಕ್ಷರಾಗಿ ನೇಮಕವಾದ ಕೆಲವೇ ಗಂಟೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಪಕ್ಷದ ಪ್ರಮುಖ ನಾಯಕ ವಿಕಾರ್ ರಸೂಲ್ ವಾನಿ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಹೈಕಮಾಂಡ್ ನೇಮಿಸಿದೆ. ಜತೆಗೆ ಪ್ರಚಾರ ಸಮಿತಿ ರಚನೆ, ರಾಜಕೀಯ ವ್ಯವಹಾರಗಳ ಸಮಿತಿ, ಸಮನ್ವಯ ಸಮಿತಿ, ಪ್ರಣಾಳಿಕೆ ರಚನಾ ಸಮಿತಿ, ಪ್ರಚಾರ ಮತ್ತು ಪ್ರಕಟಣೆ ಸಮಿತಿ, ಶಿಸ್ತು ಸಮಿತಿ ಮತ್ತು ಪ್ರದೇಶ ಚುನಾವಣಾ ಸಮಿತಿ ಹೊಣೆಗಾರಿಕೆಯನ್ನು ವಿಕಾರ್ ಅವರಿಗೆ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ವಹಿಸಿದ್ದಾರೆ.

ಈ ಬೆಳವಣಿಗೆಯಿಂದ ಪಕ್ಷದ ಹಿರಿಯ ನಾಯಕರು ಬಂಡಾಯ ಎದ್ದಿದ್ದು, ಮಾಜಿ ಶಾಸಕರಾದ ಮೊಹಮದ್ ಅಮಿನ್ ಭಟ್, ಗುಲ್ಜಾರ್ ಅಹ್ಮದ್ ವಾನಿ, ಅಬ್ದುಲ್ ರಷೀದ್ ದಾರ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

‘ನಾನು 40 ವರ್ಷದಿಂದ ಕಾಂಗ್ರೆಸ್ ಸದಸ್ಯ. ವಿಕಾರ್ ರಸೂಲ್ ನನಗಿಂತ ಕಿರಿಯರು. ಅವರನ್ನು ಪಕ್ಷದ ಮುಖ್ಯಸ್ಥರಾಗಿ ಸ್ವೀಕರಿಸಲಾಗದು’ ಎಂದು ದಾರ್ ಸುದ್ದಿಗಾರರಿಗೆ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆಯನ್ನು ಆಜಾದ್ ಅವರ ನೇತೃತ್ವದಲ್ಲಿ ನಡೆಸಲು ಕಾಂಗ್ರೆಸ್ ಹೈಕಮಾಂಡ್ ಉದ್ದೇಶಿಸಿತ್ತು. ಮಹತ್ವದ ಈ ಹುದ್ದೆಗೆ ನೇಮಕ ಮಾಡಿ ಹೈಕಮಾಂಡ್ ಆದೇಶ ಹೊರಡಿಸಿದ ಕೆಲವೇ ಗಂಟೆಗಳಲ್ಲಿ ಆಜಾದ್ ಅವರು ಆರೋಗ್ಯದ ಕಾರಣ ನೀಡಿ, ಸ್ಥಾನ ತೊರೆದಿದ್ದಾರೆ. ಇದು ಪಕ್ಷಕ್ಕೆ ದೊಡ್ಡ ಹಿನ್ನಡೆ. ರಾಜ್ಯದಲ್ಲಿ ಪಕ್ಷದ ಪುನರ್ ಸಂಘಟನೆಗೆ ಪ್ರಯತ್ನಿಸುತ್ತಿರುವ ಕಾಂಗ್ರೆಸ್‌ಗೆ ಇತ್ತೀಚಿನ ಬೆಳವಣಿಗೆಗಳು ಆಘಾತ ಉಂಟುಮಾಡಿವೆ ಎಂದು ಪಕ್ಷದ ಮೂಲಗಳು ಹೇಳಿವೆ.

ಎಐಸಿಸಿಯ ರಾಜಕೀಯ ವ್ಯವಹಾರಗಳ ಸಮಿತಿ ಸದಸ್ಯರಾಗಿರುವ ಆಜಾದ್ ಅವರು ಜಮ್ಮು ಮತ್ತು ಕಾಶ್ಮೀರದ ರಾಜಕೀಯ ವ್ಯವಹಾರಗಳ ಸಮಿತಿಯ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವುದು ಹಿಂಬಡ್ತಿ. ಹಾಗಾಗಿ ಆಜಾದ್ ಅವರು ಆರೋಗ್ಯ ಕಾರಣಗಳನ್ನು ಉಲ್ಲೇಖಿಸಿ ರಾಜೀನಾಮೆ ಸಲ್ಲಿಸಿದ್ದಾರೆ. ಅವರು ಇದನ್ನು ಸೋನಿಯಾ ಗಾಂಧಿಯವರ ಗಮನಕ್ಕೂ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ಜಿ–23 ನಾಯಕರಲ್ಲಿ ಒಬ್ಬರಾದ ಆಜಾದ್ ಅವರು ಭಿನ್ನಮತೀಯ ನಾಯಕನಾಗಿದ್ದು, ಇತ್ತೀಚೆಗೆ ರಾಜ್ಯಸಭೆ ಸದಸ್ಯರ ಆಯ್ಕೆ ವೇಳೆ ಪಕ್ಷ ಅವರನ್ನು ಕಡೆಗಣಿಸಿತ್ತು.

ಸುನೀಲ್ ಕುಮಾರ್ ಭಟ್ ಹತ್ಯೆ ಪ್ರಕರಣ: ಆರೋಪಿ ಮನೆ ಮುಟ್ಟುಗೋಲು

ಉಗ್ರರ ಗುರುತು ಪತ್ತೆ: ಕಾಶ್ಮೀರ ಡಿಜಿಪಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್‌ನಲ್ಲಿ ಗುಂಡಿನ ದಾಳಿ ನಡೆಸಿ ಕಾಶ್ಮೀರ ಪಂಡಿತ ಸಮುದಾಯದ ವ್ಯಕ್ತಿಯನ್ನು ಹತ್ಯೆಗೈದಿದ್ದ ಉಗ್ರರ ಗುರುತು ಪತ್ತೆ ಮಾಡಲಾಗಿದೆ. ಅವರಿಗೆ ಶಿಕ್ಷೆ ಕಠಿಣ ನೀಡಲಾಗುವುದು ಎಂದು ರಾಜ್ಯದ ಡಿಜಿಪಿ ದಿಲ್‌ಬಾಘ್ ಸಿಂಗ್ ಬುಧವಾರ ಹೇಳಿದ್ದಾರೆ.

ಮೃತವ್ಯಕ್ತಿ ಸನೀಲ್ ಕುಮಾರ್ ಭಟ್ ಅವರ ದಾಯಾದಿ, ಪ್ರಕರಣದ ಪ್ರತ್ಯಕ್ಷದರ್ಶಿ ಪೀತಾಂಬರ್ ಭಟ್ ಅವರು ಉಗ್ರನನ್ನು ಗುರುತಿಸಿದ್ದಾರೆ.

ಗುರುತು ಪತ್ತೆ ಆಗಿರುವ ಇಬ್ಬರು ಉಗ್ರರೂ ನಿಷೇಧಿತ ಉಗ್ರ ಸಂಘಟನೆಯಾದ ‘ಅಲ್–ಬರ್ದಾರ್’ಗೆ ಸೇರಿರುವವರು. ಉಗ್ರರಲ್ಲಿ ಒಬ್ಬನಾದ ಆದಿಲ್ ವಾನಿಯು ಹತ್ಯೆ ನಡೆಸಿದ ಬಳಿಕ ಕುಟ್‌ಪೋರಾದ ತನ್ನ ಮನೆಯಲ್ಲಿ ಆಶ್ರಯ ಪಡೆದಿದ್ದನು. ಆತನನ್ನು ಸೆರೆಹಿಡಿಯಲು ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದ್ದವು. ಆದರೆ, ಪೊಲೀಸರ ಕಡೆ ಗ್ರೆನೇಡ್‌ಗಳನ್ನು ಎಸೆದು ಆತ ಕತ್ತಲಲ್ಲಿ ತಪ್ಪಿಸಿಕೊಂಡ. ಆತನ ಮನೆಯಲ್ಲಿ ಶೋಧಕಾರ್ಯ ನಡೆಸಿದ ವೇಳೆ ಶಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಮನೆಯನ್ನು ಮುಟ್ಟುಗೋಲು ಹಾಕಲಾಗಿದೆ. ಜೊತೆಗೆ, ಉಗ್ರನಿಗೆ ಆಶ್ರಯ ನೀಡಿದ್ದಕ್ಕಾಗಿ ಆತನ ತಂದೆ ಮತ್ತು ಮೂವರು ಸಹೋದರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಸುನೀಲ್ ಮತ್ತು ಪೀತಾಂಬರ್ ಸೇಬು ತೋಟದಲ್ಲಿ ಮಂಗಳವಾರ ಕೆಲಸ ಮಾಡುತ್ತಿದ್ದ ವೇಳೆ ಅವರ ಮೇಲೆ ಗುಂಡಿನ ದಾಳಿ ನಡೆಸಲಾಗಿತ್ತು. ಘಟನೆಯಲ್ಲಿ ಪೀತಾಂಬರ್ ಗಾಯಗೊಂಡಿದ್ದಾರೆ.

ಪ್ರತಿಭಟನಾ ರ‍್ಯಾಲಿ: ಸುನೀಲ್ ಕುಮಾರ್ ಭಟ್ ಹತ್ಯೆ ಖಂಡಿಸಿ ಕಾಶ್ಮೀರಿ ಪಂಡಿತ ಸಮುದಾಯದ ಸದಸ್ಯರು ಬುಧವಾರ ಪ್ರತಿಭಟನಾ ರ‍್ಯಾಲಿ ನಡೆಸಿದರು. ಪ್ರಧಾನ ಮಂತ್ರಿ ಉದ್ಯೋಗ ಯೋಜನೆ ಅಡಿ ಕಾಶ್ಮೀರದಲ್ಲಿ ಉದ್ಯೋಗ ಪಡೆದಿರುವ ಕಾಶ್ಮೀರಿ ಪಂಡಿತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಅವರು ಆಗ್ರಹಿಸಿದರು.

ಸ್ಥಳಾಂತರಕ್ಕೆ ಒತ್ತಾಯಿಸಿ ಇಲ್ಲಿಯ ಪರಿಹಾರ ಆಯುಕ್ತರ ಕಚೇರಿ ಎದುರು ಮೂರು ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿರುವ ಸಮುದಾಯದ ಸದಸ್ಯರು ಈ ಪ್ರತಿಭಟನಾ ರ‍್ಯಾಲಿ ಆಯೋಜಿಸಿದ್ದರು. ಕಾಶ್ಮೀರಿ ಪಂಡಿತರ ಹಲವಾರು ಇತರ ಸಂಘಟನೆಗಳು ಈ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದವು.



ಸುನೀಲ್ ಕುಮಾರ್ ಭಟ್ ಹತ್ಯೆ ಖಂಡಿಸಿ ಕಾಶ್ಮೀರ ಪಂಡಿತರು ಬುಧವಾರ ಜಮ್ಮುವಿನ ತಾವಿ ಸೇತುವೆ ಬಳಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಪಳನಿಸ್ವಾಮಿ ಆಯ್ಕೆ ಅಮಾನ್ಯ

ಎಐಎಡಿಎಂಕೆ ನಾಯಕತ್ವ ವಿವಾದ: ಹೈಕೋರ್ಟ್ ತೀರ್ಪು

ಪ್ರಜಾವಾಣಿ ವಾರ್ತೆ

ಚೆನ್ನೈ: ಎಐಎಡಿಎಂಕೆಯ ಅತ್ಯಂತ ಪ್ರಭಾವಿ ಸಮಿತಿಯಾದ ‘ಜನರಲ್ ಕೌನ್ಸಿಲ್’ (ಜಿ.ಸಿ), ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರನ್ನು ಪಕ್ಷದ ಮಧ್ಯಂತರ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದನ್ನು ಮದ್ರಾಸ್ ಹೈಕೋರ್ಟ್ ಬುಧವಾರ ಅಮಾನ್ಯಗೊಳಿಸಿದೆ. ಜೂನ್ 23ರಲ್ಲಿ ಇದ್ದಂತೆ ಯಥಾ ಸ್ಥಿತಿ ಕಾಪಾಡಿಕೊಳ್ಳುವಂತೆ ನಿರ್ದೇಶಿಸಿದೆ.

ಹೈಕೋರ್ಟ್ ತೀರ್ಪಿನಿಂದಾಗಿ ಪಳನಿಸ್ವಾಮಿ ಬಣಕ್ಕೆ ಭಾರಿ ಹಿನ್ನಡೆ ಉಂಟಾಗಿದೆ. ಅವರ ಪ್ರಮುಖ ಪ್ರತಿಸ್ಪರ್ಧಿ ಒ.ಪನ್ನೀರಸೆಲ್ವಂ ಇದನ್ನು ‘ಐತಿಹಾಸಿಕ ತೀರ್ಪು’ ಎಂದು ಬಣ್ಣಿಸಿದ್ದಾರೆ.

ಪನ್ನೀರಸೆಲ್ವಂ ಹಾಗೂ ಜನರಲ್ ಕೌನ್ಸಿಲ್ ಸದಸ್ಯ ವೈರಮುತ್ತು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಿ.ಜಯಚಂದ್ರನ್ ಅವರಿದ್ದ ಏಕಸದಸ್ಯ ಪೀಠ ಜುಲೈ 11ರ ಜಿ.ಸಿ. ಸಭೆಯನ್ನು ಅಮಾನ್ಯಗೊಳಿಸಿದೆ. ಸಭೆಯ ವೇಳೆ ಸದಸ್ಯರು ಒ.ಪನ್ನೀರಸೆಲ್ವಂ ಹಾಗೂ ಅವರ ಬೆಂಬಲಿಗರನ್ನು ಪಕ್ಷದಿಂದ ಉಚ್ಚಾಟಿಸಿದ್ದು ನ್ಯಾಯಯುತ ಕ್ರಮವಲ್ಲ ಎಂದಿದೆ.

‘ಸಂಯೋಜಕ ಹಾಗೂ ಜಂಟಿ ಸಂಯೋಜಕರ ಅನುಮತಿ ಇಲ್ಲದೆ ಕಾರ್ಯಕಾರಿ ಮಂಡಳಿ ಅಥವಾ ಜನರಲ್ ಕೌನ್ಸಿಲ್ ಸಭೆ ನಡೆಸುವಂತಿಲ್ಲ. ಏಕನಾಯಕತ್ವ ಪುನರ್‌ಸ್ಥಾಪಿಸುವ ಸಲುವಾಗಿ ಪಕ್ಷದ ಸಂವಿಧಾನದಲ್ಲಿ ಬದಲಾವಣೆ ತರುವುದೂ ಸೇರಿದಂತೆ ಇತರೆ ವಿಚಾರಗಳ ಕುರಿತು ಉಭಯ ನಾಯಕರು ಒಮ್ಮತದಿಂದ ಸಭೆ ನಡೆಸಲು ಯಾವುದೇ ಅಭ್ಯಂತರವಿಲ್ಲ’ ಎಂದು ಪೀಠ ಹೇಳಿದೆ.

ಹಿಂದೆ ಉಭಯ ಬಣಗಳ ನಡುವೆ ಸಂಧಾನ ಏರ್ಪಡಿಸಲಾಗಿತ್ತು. ಅದರ ಪ್ರಕಾರ, ಪನ್ನೀರಸೆಲ್ವಂ ಅವರನ್ನು ಸಂಯೋಜಕ ಮತ್ತು ಪಳನಿಸ್ವಾಮಿ ಅವರನ್ನು ಜಂಟಿ ಸಂಯೋಜಕ ಎಂದು ನೇಮಿಸಲಾಗಿತ್ತು.

‘ನಾನು ಧರ್ಮ, ನ್ಯಾಯಾಂಗ ಹಾಗೂ ಪಕ್ಷದ ಕಾರ್ಯಕರ್ತರ ಮೇಲೆ ಅಪಾರ ನಂಬಿಕೆ ಹೊಂದಿರುವವನು. ನ್ಯಾಯಾಲಯದ ತೀರ್ಪು ಐತಿಹಾಸಿಕವಾದುದು. ಇದು ಪಕ್ಷದ 1.5 ಕೋಟಿ ಕಾರ್ಯಕರ್ತರಿಗೆ ಸಿಕ್ಕ ಗೆಲುವು’ ಎಂದು ಪನ್ನೀರಸೆಲ್ವಂ ಪ್ರತಿಕ್ರಿಯಿಸಿದ್ದಾರೆ.

‘ಏಕಸದಸ್ಯ ಪೀಠದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ’ ಪಳನಿಸ್ವಾಮಿ ಬಣ ಹೇಳಿದೆ

ಮನೆಯಲ್ಲಿ 6 ಮೃತದೇಹ ಪತ್ತೆ: ಎಸ್‌ಐಟಿ ರಚನೆ

ಜಮ್ಮು (ಪಿಟಿಐ): ಇಲ್ಲಿನ ಸಿಧ್ರಾ ಪ್ರದೇಶದಲ್ಲಿರುವ ‘ತವಿ ವಿಹಾರ’ದಲ್ಲಿ ಮಂಗಳವಾರ ರಾತ್ರಿ ಒಟ್ಟು ಆರು ಮೃತದೇಹಗಳು ಪತ್ತೆಯಾಗಿವೆ. ‘ಇವರೆಲ್ಲಾ ವಿಷಪ್ರಾಸನದಿಂದ ಅಸುನೀಗಿರಬಹುದು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಪ್ರಕರಣದ ತನಿಖೆಗಾಗಿ ಗ್ರಾಮಾಂತರ ವಿಭಾಗದ ಎಸ್‌ಪಿ ಸಂಜಯ್ ಶರ್ಮಾ ನೇತೃತ್ವದಲ್ಲಿ ನಾಲ್ಕು ಸದಸ್ಯರನ್ನೊಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ’ ಎಂದು ಜಮ್ಮು ಪೊಲೀಸ್ ವರಿಷ್ಠಾಧಿಕಾರಿ ಚಂದನ್ ಕೊಹ್ಲಿ ತಿಳಿಸಿದ್ದಾರೆ.

‘ಮೇಕ್ ಇಂಡಿಯಾ ನಂ.1’ ಕಾರ್ಯಕ್ರಮಕ್ಕೆ ಕೇಜ್ರಿವಾಲ್ ಚಾಲನೆ

ನವದೆಹಲಿ (ಪಿಟಿಐ): 2024ರ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ಆಮ್ ಆದ್ಮಿ ಪಕ್ಷವು (ಆಪ್) ಜನರನ್ನು ತಲುಪುವ ಸಲುವಾಗಿ ‘ಮೇಕ್ ಇಂಡಿಯಾ ನಂ.1’ ಕಾರ್ಯಕ್ರಮ ಹಮ್ಮಿಕೊಂಡಿದೆ. ಆಪ್ ಸ್ಥಾಪಕರೂ ಆಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬುಧವಾರ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ.

‘ವಿಶ್ವದಲ್ಲಿ ಭಾರತವನ್ನು ಅಗ್ರಪಟ್ಟಕ್ಕೇರಿಸುವುದು ಈ ಕಾರ್ಯಕ್ರಮದ ಉದ್ದೇಶ. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ನಾಗರಿಕರು ಈ ಕಾರ್ಯಕ್ಕೆ ಕೈಜೋಡಿಸಬೇಕು’ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ತಾಲಕ್‌ಟೋರಾ ಕ್ರೀಡಾಂಗಣದಲ್ಲಿ ಆಯೋಜನೆಯಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಉತ್ತಮ ಆಡಳಿತದ ಕುರಿತು ತಾವು ಹೊಂದಿರುವ ದೃಷ್ಟಿಕೋನವನ್ನು ಹಂಚಿಕೊಂಡರು.

‘ಇದು ರಾಜಕೀಯ ಪಕ್ಷವೊಂದರ ಕಾರ್ಯಕ್ರಮವಲ್ಲ. ಇದು ರಾಷ್ಟ್ರೀಯ ‘ಮಿಷನ್’. ಸಿಂಗಪುರ ಸೇರಿದಂತೆ ಇತರೆ ಕೆಲ ರಾಷ್ಟ್ರಗಳಿಗೆ ಭಾರತದ ನಂತರ ಸ್ವಾತಂತ್ರ್ಯ ಸಿಕ್ಕಿತ್ತು. ಆದರೆ ಅಭಿವೃದ್ಧಿ ವಿಚಾರದಲ್ಲಿ ಅವು ನಮಗಿಂತಲೂ ಮುಂದಿವೆ’ ಎಂದರು. ‘ಕಾರ್ಯಕ್ರಮದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆ ಉತ್ತೇಜಿಸುವ ಹಾಗೂ ಆ ಮೂಲಕ ನಿಗದಿತ ಗುರಿ ಸಾಧಿಸುವ ಸಲುವಾಗಿ ದೇಶದಾದ್ಯಂತ ಪ್ರವಾಸ ಕೈಗೊಳ್ಳುತ್ತೇನೆ’ ಎಂದೂ ತಿಳಿಸಿದರು.

ಚೀನಾದಲ್ಲಿ ಬರ: ವಿದ್ಯುತ್ ಇಲ್ಲದೆ ಕಾರ್ಖಾನೆಗಳು ಬಂದ್

ಬೀಜಿಂಗ್ (ಎಪಿ): ಚೀನಾದಲ್ಲಿ ತೀವ್ರಗೊಂಡಿರುವ ಬರಗಾಲದಿಂದಾಗಿ ಜಲಾಶಯಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿದೆ. ಇದರಿಂದ ಜಲಶಕ್ತಿಯಿಂದ ವಿದ್ಯುತ್ ಉತ್ಪಾದನೆ ಕುಂಠಿತಗೊಂಡಿದ್ದು, ದೇಶದ ನೈರುತ್ಯ ಭಾಗದ ಬಹುತೇಕ ಕಾರ್ಖಾನೆಗಳು ಕಾರ್ಯವನ್ನು ಸ್ಥಗಿತಗೊಳಿಸಿವೆ.

ಸಿಚುವಾನ್ ಪ್ರಾಂತ್ಯದ ಸೋಲಾರ್ ಪ್ಯಾನಲ್, ಸಿಮೆಂಟ್, ಯೂರಿಯಾ ಕಾರ್ಖಾನೆಗಳು ಕಾರ್ಯ ಸ್ಥಗಿತಗೊಳಿಸಿವೆ ಅಥವಾ ಉತ್ಪಾದನೆಯನ್ನು ಕಡಿಮೆಗೊಳಿಸಿವೆ. ಹವಾನಿಯಂತ್ರಿತ ವ್ಯವಸ್ಥೆ ಹೆಚ್ಚಾಗಿ ಅಗತ್ಯವಿರುವ ಬೇಸಿಗೆಯಲ್ಲಿಯೇ ದೇಶದ ವಿದ್ಯುತ್ ಉತ್ಪಾದನೆ ಕುಸಿತವಾಗಿದೆ.

ದೇಶದ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು, ಕಮ್ಯುನಿಸ್ಟ್ ಪಕ್ಷಕ್ಕೆ ಇದು ಸವಾಲಾಗಿ ಪರಿಣಮಿಸಿದೆ. ದಶಕದಿಂದ ಚೀನಾದ ನಾಯಕತ್ವ ವಹಿಸಿರುವ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರಿಗೂ ಇದು ತಲೆನೋವು ತರಿಸಿದೆ. ಮುಂದಿನ ಐದು ವರ್ಷ ತನ್ನ ನಾಯಕತ್ವವನ್ನೇ ಮುಂದುವರಿಸಲು ಬಯಸಿರುವ ಜಿನ್‌ಪಿಂಗ್‌ಗೆ ವಿದ್ಯುತ್ ಸಮಸ್ಯೆ ಪರಿಹರಿಸುವುದು ದೊಡ್ಡ ಸವಾಲಾಗಿದೆ.

ಮಹಿಳೆಯ ಪ್ರಚೋದನಾಕಾರಿ ಉಡುಗೆ: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ದೂರುದಾರ ಮಹಿಳೆ ಧರಿಸಿದ್ದ ದಿರಿಸಿನ ಆಧಾರದ ಮೇಲೆ ಲೈಂಗಿಕ ಕಿರುಕುಳ ಪ್ರಕರಣವೊಂದರಲ್ಲಿ 74 ವರ್ಷ ವಯಸ್ಸಿನ ಆರೋಪಿಗೆ ಕೇರಳದ ಕೋಯಿಕ್ಕೋಡ್‌ನ ಸೆಷನ್ಸ್ ನ್ಯಾಯಾಲಯವೊಂದು ನಿರೀಕ್ಷಣಾ ಜಾಮೀನು ನೀಡಿದೆ.

ಬರಹಗಾರ, ಸಾಮಾಜಿಕ ಕಾರ್ಯಕರ್ತ ಸಿವಿಕ್ ಚಂದ್ರನ್ ವಿರುದ್ಧ 30 ವರ್ಷ ವಯಸ್ಸಿನ ಮಹಿಳೆಯೊಬ್ಬರು ಲೈಂಗಿಕ ಕಿರುಕುಳ ಮೊಕದ್ದಮೆ ದಾಖಲಿಸಿದ್ದರು. 2020ರ ಫೆಬ್ರುವರಿಯಲ್ಲಿ ಕೋಯಿಕ್ಕೋಡ್ ತೀರದಲ್ಲಿ ಶಿಬಿರ ಹೂಡಿದ್ದ ವೇಳೆ ಚಂದ್ರನ್ ಅವರು ತಮ್ಮನ್ನು ನಿರ್ಜನ ಸ್ಥಳಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡಿದ್ದರು ಎಂದು ದೂರಿನಲ್ಲಿ ಮಹಿಳೆ ಹೇಳಿದ್ದರು.

ಈ ಪ್ರಕರಣದಲ್ಲಿ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡಿರುವ ಸೆಷನ್ಸ್ ನ್ಯಾಯಾಧೀಶ ಎಸ್. ಕೃಷ್ಣ ಕುಮಾರ್, ಜಾಮೀನು ಅರ್ಜಿ ಜೊತೆ ಆರೋಪಿಯ ಚಿತ್ರಗಳನ್ನು ಒದಗಿಸಿದ್ದಾರೆ. ಆ ಚಿತ್ರಗಳನ್ನು ಪರಿಶೀಲಿಸಲಾಯಿತು. ‘ಲೈಂಗಿಕವಾಗಿ ಪ್ರಚೋದನಾಕಾರಿಯಾದ ಉಡುಗೆಗಳನ್ನು ದೂರುದಾರ ಮಹಿಳೆಯು ಧರಿಸಿರುವುದು ಕಂಡುಬಂದಿದೆ. ಹೀಗಾಗಿ, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354ಎ ಅಡಿ ಆರೋಪಿಯ ದೋಷವು ಮೇಲ್ನೋಟಕ್ಕೆ ಸಾಬೀತಾಗಿಲ್ಲ’ ಎಂದಿದ್ದಾರೆ.

ಅಲ್ಲದೇ, ಆರೋಪಿಯು 74 ವರ್ಷ ವಯಸ್ಸಿನವರು. ಜೊತೆಗೆ ದೈಹಿಕವಾಗಿ ಅಸಮರ್ಥರು. ಹಾಗಾಗಿ ಅವರು ಮಹಿಳೆ ಮೇಲೆ ಒತ್ತಾಯವಾಗಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂಬುದನ್ನು ನಂಬಲು ಸಾಧ್ಯವಿಲ್ಲ. ಆರೋಪಿಯು ಸಮಾಜದಲ್ಲಿ ಒಳ್ಳೆಯ ಹೆಸರು ಹೊಂದಿದ್ದಾರೆ ಎಂದಿದ್ದಾರೆ.

ದೌರ್ಜನ್ಯದ ಕುರಿತು ಅರ್ಜಿಯನ್ನು ಮಹಿಳೆ ತಡವಾಗಿ ಸಲ್ಲಿಸಿದ್ದನ್ನು ಪ್ರಶ್ನಿಸಿದ್ದರ ಜೊತೆ, 30 ವರ್ಷದ ಮಹಿಳೆಯು ಸಮಾಜದಲ್ಲಿ ಉತ್ತಮ ಹೆಸರು ಸಂಪಾದಿಸಿರುವ ವ್ಯಕ್ತಿಯ ವಿರುದ್ಧ ದೂರು ನೀಡಿದ್ದು ದುರಾದೃಷ್ಟಕರ ಎಂದಿದ್ದಾರೆ. ಇದು ಚಂದ್ರನ್ ಅವರ ವಿರುದ್ಧದ ಎರಡನೇ ದೌರ್ಜನ್ಯ ಪ್ರಕರಣ. ದಲಿತ ಲೇಖಕಿ ಒಬ್ಬರಿಗೆ ಕಿರುಕುಳ ನೀಡಿದ್ದ ಮೊಕದ್ದಮೆಯಲ್ಲಿ ಅವರು 2022ರ ಏಪ್ರಿಲ್‌ನಲ್ಲಿ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ.

‘ಇತರರೊಂದಿಗೆ ಹೆಂಡತಿ ಹೋಲಿಕೆ: ಮಾನಸಿಕ ಕ್ರೌರ್ಯ’

ತಿರುವನಂತಪುರ (ಪಿಟಿಐ): ಹೆಂಡತಿಯನ್ನು ಇತರ ಮಹಿಳೆಯರೊಂದಿಗೆ ಹೋಲಿಸುವುದು ಮತ್ತು ತನ್ನ ನಿರೀಕ್ಷೆಗೆ ತಕ್ಕಂತೆ ಇಲ್ಲ ಎಂದು ನಿರಂತರವಾಗಿ ನಿಂದಿಸುವುದು ಪತಿ ನೀಡುವ ಮಾನಸಿಕ ಕ್ರೌರ್ಯ ಎನಿಸುತ್ತದೆ. ಹಾಗಾಗಿ, ಮಹಿಳೆ ಅಂತಹ ನಡವಳಿಕೆಯನ್ನು ಸಹಿಸಿಕೊಳ್ಳಬೇಕಾಗಿಲ್ಲ ಎಂದು ಕೇರಳ ಹೈಕೋರ್ಟ್ ಹೇಳಿದೆ.

ಹೆಂಡತಿಯಿಂದ ಸುಮಾರು 13 ವರ್ಷಗಳ ಕಾಲ ದೂರವಿದ್ದ ವ್ಯಕ್ತಿಯೊಬ್ಬ, ತಮ್ಮ ಮದುವೆಯನ್ನು ರದ್ದು ಮಾಡಿದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿ ನೀಡಿದ ತೀರ್ಪಿನಲ್ಲಿ ಹೈಕೋರ್ಟ್ ಇದನ್ನು ಹೇಳಿದೆ.


‘ಪ್ರಸ್ತದ ಕಾರ್ಯ ನಡೆದಿಲ್ಲ. ಹೀಗಾಗಿ ದಂಪತಿಯ ವಿವಾಹ ಪ್ರಕ್ರಿಯೆ ಪೂರ್ಣಗೊಂಡಿಲ್ಲ’ ಎಂಬ ಕಾರಣ ನೀಡಿ ಕೌಟುಂಬಿಕ ನ್ಯಾಯಾಲಯವು ಅವರಿಗೆ ವಿಚ್ಛೇದನ ನೀಡಿ ಆದೇಶಿಸಿತ್ತು.

ನ್ಯಾಯಮೂರ್ತಿಗಳಾದ ಅನಿಲ್ ಕೆ.ನರೇಂದ್ರನ್ ಹಾಗೂ ಸಿ.ಎಸ್.ಸುಧಾ ಅವರಿದ್ದ ನ್ಯಾಯಪೀಠವು ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ಮಾರ್ಪಡಿಸಿತು.

‘ಪತಿಯಿಂದ ನಿರಂತರವಾಗಿ ಮಾನಸಿಕ ಕ್ರೌರ್ಯ ನಡೆದಿರುವುದು ಸ್ಪಷ್ಟವಾಗಿದೆ. ಹೀಗಾಗಿ, ವಿಚ್ಛೇದನ ಕಾಯ್ದೆ –1969ರ ಪ್ರಕಾರ, ವೈವಾಹಿಕ ಸಂಬಂಧ ರದ್ದುಗೊಂಡಂತೆ’ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠವು, ವಿಚ್ಛೇದನ ನೀಡಿ ಆದೇಶಿಸಿದೆ.

ಗಂಡನು, ಹೆಂಡತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ವಿಚಾರಣೆ ಸಂದರ್ಭ ತಿಳಿದುಬಂದಿದೆ. ‘ಪ್ರತಿವಾದಿಯು (ಹೆಂಡತಿ) ದೈಹಿಕವಾಗಿ ಆಕರ್ಷಣೀಯವಾಗಿ ಇಲ್ಲ ಎಂಬ ಕಾರಣಕ್ಕೆ ಆಕೆಯೊಂದಿಗೆ ಅರ್ಜಿದಾರ (ಗಂಡ) ಒಡನಾಟದಲ್ಲಿ ತೊಡಗಿಲ್ಲ ಎಂಬುದೂ ಸಹ ಸ್ಪಷ್ಟವಾಗಿದೆ’ ಎಂದು ಹೈಕೋರ್ಟ್ ಹೇಳಿದೆ.

ಮೊದಲ ರಾತ್ರಿಯೇ ಹೆಂಡತಿಯ ವರಾತ...!



ಬೆಂಗಳೂರು: ‘ಗಂಡ ತನ್ನ ಹೆಂಡತಿಯ ಜೊತೆ ಸಂತಾನಕ್ಕಾಗಿ ಅಪೇಕ್ಷಿಸುವುದು, ಉನ್ನತ ವ್ಯಾಸಂಗಕ್ಕೆ ಉದ್ದೀಪಿಸುವುದು, ಜ್ಞಾನ, ತಿಳಿವಳಿಕೆಯ ವೃದ್ಧಿಗಾಗಿ ಭಾಷೆಯೊಂದನ್ನು ಕಲಿ ಎಂದು ಪ್ರೀತಿಯಿಂದ ಪ್ರೇರೇಪಿಸುವುದು ಕ್ರೌರ್ಯದ ವ್ಯಾಪ್ತಿಗೆ ಒಳಪಡುವುದಿಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಇಂತಹದೊಂದು ದುಬಾರಿ ಭಾವನೆಗಳ ತಾಕಲಾಟದ ಕೌಟುಂಬಿಕ ವ್ಯಾಜ್ಯವೊಂದನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಬಿ. ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ತನ್ನ ಗಂಡನ ವಿರುದ್ಧ ಹೆಂಡತಿ ದಾಖಲಿಸಿದ್ದ ಕ್ರೌರ್ಯದ ಆಪಾದನೆಗಳ ಕುರಿತಾದ ಅರ್ಜಿ ವಿಚಾರಣೆಯನ್ನು ರದ್ದುಗೊಳಿಸಿದೆ.

ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಬೇಕು ಎಂದು ಕೋರಿ ವೈದ್ಯ ಮತ್ತು ಅವರ ತಾಯಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಪೀಠ, ‘ಕುಟುಂಬ ವೃದ್ಧಿಯ ದೃಷ್ಟಿಯಿಂದ ಸ್ಪಷ್ಟ ಯೋಜನೆಯನ್ನು ಹಾಕಿಕೊಂಡು ಯಾವಾಗ ಮಗು ಮಾಡಿಕೊಳ್ಳಬೇಕು ಎಂದು ಗಂಡ ತನ್ನ ಹೆಂಡತಿಯ ಜೊತೆ ಚರ್ಚಿಸುವುದು ಕಿರುಕುಳವಾಗಲು ಹೇಗೆ ತಾನೇ ಸಾಧ್ಯ’ ಎಂದು ಪ್ರಶ್ನಿಸಿದೆ.

ಪ್ರಕರಣವೇನು?: ಗಂಡ–ಹೆಂಡತಿ ಇಬ್ಬರೂ ಅಮೆರಿಕದಲ್ಲಿ ನೆಲೆಸಿರುವ ಭಾರತೀಯರು. ಮದುವೆಯ ನಂತರ ಹೆಂಡತಿ ಗಂಡನ ಕೆಲವು ವರ್ತನೆಗಳ ವಿರುದ್ಧ ವರಾತ ಆರಂಭಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದಳು.

ವಿಚಾರಣಾ ನ್ಯಾಯಾಲಯ 2013ರ ಸೆಪ್ಟೆಂಬರ್ 7ರಂದು ನೀಡಿದ ಆದೇಶದಲ್ಲಿ ಗಂಡ ಮತ್ತು ಆತನ ತಾಯಿಗೆ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 3 ಮತ್ತು 4ರ ಹಾಗೂ ಭಾರತೀಯ ದಂಡ ಸಂಹಿತೆ ಕಲಂ 498 ಎ ಮತ್ತು 34ರ ಅಡಿಯಲ್ಲಿ ಶಿಕ್ಷೆ ವಿಧಿಸಿತ್ತು. ಈ ಶಿಕ್ಷೆಯನ್ನು 2016ರ ಡಿಸೆಂಬರ್ 1ರಂದು ಸೆಷನ್ಸ್ ನ್ಯಾಯಾಲಯ ಎತ್ತಿ ಹಿಡಿದಿತ್ತು. ಇದನ್ನು ಪ್ರಶ್ನಿಸಿ ಗಂಡ ಮತ್ತು ಅವರ ತಾಯಿ ಹೈಕೋರ್ಟ್ ಮೆಟ್ಟಿಲೇರಿದ್ದರು.

‘ಭರವಸೆ ನೀಡದಂತೆ ಪಕ್ಷಗಳನ್ನು ತಡೆಯಲಾಗದು’

ಒಂದನೇ ಪುಟದಿಂದ...

‘ನರೇಗಾದಿಂದ ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ದೊರೆಯುತ್ತದೆ. ಇಂಥ ಅನೇಕ ಯೋಜನೆಗಳಿದ್ದು, ಅವು ಗಳಿಂದ ಜೀವನೋಪಾಯಕ್ಕೆ ಅನುಕೂಲವಾಗುತ್ತಿದೆ. ಹೀಗಾಗಿ, ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಗೆಲ್ಲಲು ಕೇವಲ ಉಚಿತ ಕೊಡುಗೆಗಳೇ ಕಾರಣ ಎಂದು ನನಗೆ ಅನಿಸುತ್ತಿಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ರಮಣ ಹೇಳಿದರು.

‘ಕೆಲವರು ಭಾರಿ ಭರವಸೆಗಳನ್ನು ನೀಡಿಯೂ ಚುನಾವಣೆಯಲ್ಲಿ ಗೆದ್ದಿಲ್ಲ. ಹೀಗಾಗಿ, ಈ ವಿಷಯವಾಗಿ ಎಲ್ಲರೂ ಅಭಿಪ್ರಾಯಗಳನ್ನು ಸಲ್ಲಿಸಲಿ, ವಿಸ್ತೃತ ಚರ್ಚೆಯೂ ನಡೆಯಲಿ. ನಂತರವಷ್ಟೇ ನಾವು ಒಂದು ತೀರ್ಮಾನಕ್ಕೆ ಬರಲು ಸಾಧ್ಯ’ ಎಂದೂ ಅವರು ಹೇಳಿದರು.

ಅರ್ಜಿ ವಿಚಾರಣೆಯನ್ನು ಆಗಸ್ಟ್ 22ಕ್ಕೆ ಮುಂದೂಡಲಾಯಿತು.

ಸಂಕ್ಷಿಪ್ತ ಸುದ್ದಿ

ಆರೋಪ ಪಟ್ಟಿಯಲ್ಲಿ ಜಾಕ್ವೆಲಿನ್ ಹೆಸರು ಸೇರಿಸಿದ ಇ.ಡಿ

ನವದೆಹಲಿ (ಪಿಟಿಐ): ‘ಬಹುಕೋಟಿ ಹಣ ಅಕ್ರಮ ವರ್ಗಾವಣೆ ಹಾಗೂ ವಂಚನೆ ಪ್ರಕರಣ ಸಂಬಂಧ ನ್ಯಾಯಾಲಯಕ್ಕೆ ಹೊಸದಾಗಿ ಆರೋಪ ಪಟ್ಟಿ ಸಲ್ಲಿಸಲು ಮುಂದಾಗಿರುವ ಜಾರಿ ನಿರ್ದೇಶನಾಲಯ (ಇ.ಡಿ) ಅದರಲ್ಲಿ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡೀಸ್ ಹೆಸರು ಸೇರ್ಪಡೆ ಮಾಡಿದೆ’ ಎಂದು ಮೂಲಗಳು ಬುಧವಾರ ಹೇಳಿವೆ.

ಬೆಂಗಳೂರು ಮೂಲದ ಸುಕೇಶ್ ಚಂದ್ರಶೇಖರ್ ಎಂಬಾತ ಉದ್ಯಮಿ ಶಿವಿಂದರ್ ಮೋಹನ್ ಸಿಂಗ್ ಎಂಬುವರ ಪತ್ನಿ ಅದಿತಿ ಸಿಂಗ್‌ಗೆ ಕರೆ ಮಾಡಿ ತಾನು ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ ಎಂದು ಪರಿಚಯಿಸಿಕೊಂಡಿದ್ದ. ಬಳಿಕ ಪಕ್ಷಕ್ಕೆ ದೇಣಿಗೆ ನೀಡುವಂತೆ ಹೇಳಿ ಅವರಿಂದ ₹200 ಕೋಟಿಗೂ ಅಧಿಕ ಹಣ ಪಡೆದು ವಂಚಿಸಿದ್ದ. ಈ ಪೈಕಿ ₹10 ಕೋಟಿ ಮೌಲ್ಯದ ಉಡುಗೊರೆಗಳನ್ನು ಜಾಕ್ವೆಲಿನ್‌ಗೆ ನೀಡಿದ್ದ. ಉಡುಗೊರೆ ಪಡೆದಿರುವುದನ್ನು ಜಾಕ್ವೆಲಿನ್ ಒಪ್ಪಿಕೊಂಡಿದ್ದರು.

ಸಿಯುಇಟಿ: 4ನೇ ಹಂತದಲ್ಲೂ ತಾಂತ್ರಿಕ ಲೋಪ

ನವದೆಹಲಿ (ಪಿಟಿಐ): ದೇಶದ ಹಲವು ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಬುಧವಾರದಿಂದ ಆರಂಭವಾದ ನಾಲ್ಕನೇ ಹಂತದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲೂ (ಸಿಯುಇಟಿ- ಯುಜಿ) ತಾಂತ್ರಿಕ ಲೋಪಗಳು ಮುಂದುವರಿದಿದ್ದು, ಕೆಲ ಕೇಂದ್ರಗಳಲ್ಲಿ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ. ಒಟ್ಟು 13 ಕೇಂದ್ರಗಳಲ್ಲಿ ಪರೀಕ್ಷೆ ರದ್ದಾಗಿದ್ದು, 8,600 ಅಭ್ಯರ್ಥಿಗಳಿಗೆ ಇದರಿಂದ ತೊಂದರೆಯಾಗಿದೆ. ಅವರಿಗೆ ಮರುಪರೀಕ್ಷೆ ನಡೆಸಲಾಗುವುದು ಎಂದು ಯುಜಿಸಿ ತಿಳಿಸಿದೆ.


ಕೋವಿಡ್ ನಿಯಮಗಳ ಕಟ್ಟುನಿಟ್ಟಿನ ಜಾರಿಗೆ ಡಿಜಿಸಿಎ ಸೂಚನೆ

ನವದೆಹಲಿ (ಪಿಟಿಐ): ವಿಮಾನಗಳಲ್ಲಿ ಸಂಚರಿಸುವ ಎಲ್ಲ ಪ್ರಯಾಣಿಕರು ಮಾಸ್ಕ್ ಧರಿಸುವುದೂ ಸೇರಿದಂತೆ ಕೋವಿಡ್–19ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕೋವಿಡ್ ಸಂಬಂಧಿ ನಿಯಮಗಳನ್ನು ಎಲ್ಲ ವಿಮಾನಯಾನ ಸಂಸ್ಥೆಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಸೂಚಿಸಿದೆ.

ರಷ್ಯಾದಿಂದ ತೈಲ ಖರೀದಿ: ಸಮರ್ಥನೆ

ಬ್ಯಾಂಕಾಕ್ (ಪಿಟಿಐ): ‘ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವ ವಿಚಾರದಲ್ಲಿ ಭಾರತದ ಜನರಿಗೆ ಉತ್ತಮ ವ್ಯವಹಾರ ಕುದುರಿಸುವುದೇ ದೇಶದ ನಿಲುವಾಗಿತ್ತು’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಮಂಗಳವಾರ ಪ್ರತಿಪಾದಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸೋಲೆಂಬ ರೋಗವನ್ನು ಕೊಲ್ಲಲು ಆತ್ಮವಿಶ್ವಾಸ ಮತ್ತು ಶ್ರಮವೇ ಮದ್ದು.

–ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

ಎಐಎಫ್‌ಎಫ್ ಅಮಾನತು ಕ್ರೀಡಾ ಆಡಳಿತಗಾರರಿಗೆ ಪಾಠ

ಕ್ರಿಕೆಟ್ ಆಟವನ್ನು ಧರ್ಮದಂತೆ ಆರಾಧಿಸುವ ಭಾರತದಲ್ಲಿಯೂ ತಾರಾವರ್ಚಸ್ಸಿನ ಸುನಿಲ್ ಚೆಟ್ರಿ ನಾಯಕತ್ವದಲ್ಲಿ ದೇಶದ ಫುಟ್‌ಬಾಲ್ ತಂಡವು ಜನಪ್ರಿಯತೆ ಗಳಿಸುತ್ತಿದೆ. ಆದರೆ ಇದೀಗ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ವಿರುದ್ಧ ಫುಟ್‌ಬಾಲ್ ಸಂಸ್ಥೆಗಳ ಅಂತರರಾಷ್ಟ್ರೀಯ ಒಕ್ಕೂಟ (ಫಿಫಾ) ಕೈಗೊಂಡಿರುವ ಅಮಾನತು ಕ್ರಮದಿಂದಾಗಿ ಈ ಕ್ರೀಡೆಗೆ ಹಿನ್ನಡೆಯಾಗುವ ಆತಂಕ ಎದುರಾಗಿದೆ. ಕೇವಲ ಅಧಿಕಾರದಾಹ, ಸ್ವಪ್ರತಿಷ್ಠೆ ಹಾಗೂ ಸ್ವಾರ್ಥ ರಾಜಕೀಯದಿಂದಾಗಿ ಭಾರತದ ಗೌರವಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಧಕ್ಕೆ ಆಗಿದೆ. ಇದೇ ಅಕ್ಟೋಬರ್‌ನಲ್ಲಿ ಭಾರತದಲ್ಲಿ ಆಯೋಜನೆಗೊಳ್ಳಬೇಕಿದ್ದ ಮಹಿಳಾ ವಿಭಾಗದ 17 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ ಮೇಲೂ ಅನಿಶ್ಚಿತತೆಯ ಕಾರ್ಮೋಡ ಕವಿದಿದೆ. ಎಐಎಫ್‌ಎಫ್ ಆಡಳಿತದಲ್ಲಿ ಅನ್ಯರ ಹಸ್ತಕ್ಷೇಪ ಸಲ್ಲದು. ಇದು ಫಿಫಾ ನಿಯಮಗಳ ಸ್ಪಷ್ಟ ಉಲ್ಲಂಘನೆ. ಆದ್ದರಿಂದ ಎಐಎಫ್‌ಎಫ್ ಅನ್ನು ಅಮಾನತುಗೊಳಿಸಿರುವುದಾಗಿ ಫಿಫಾ ಹೇಳಿದೆ. ಈ ಬೆಳವಣಿಗೆ ಅನಿರೀಕ್ಷಿತವೇನೂ ಆಗಿರಲಿಲ್ಲ. ಮೇ 18ರಂದು ಎಐಎಫ್‌ಎಫ್ ಅಧ್ಯಕ್ಷ ಸ್ಥಾನದಿಂದ ಪ್ರಫುಲ್ ಪಟೇಲ್ ಅವರನ್ನು ಸುಪ್ರೀಂ ಕೋರ್ಟ್ ಕಿತ್ತುಹಾಕಿತ್ತು. ಆ ದಿನದಿಂದಲೇ ಫಿಫಾ ಅಮಾನತು ಆದೇಶ ಹೊರಬೀಳುವ ಆತಂಕವಿತ್ತು. ಎನ್‌ಸಿಪಿ ಧುರೀಣರೂ ಆಗಿರುವ ಪಟೇಲ್, ಎಐಎಫ್‌ಎಫ್‌ನಲ್ಲಿ ಸತತ 12 ವರ್ಷ ಅಧಿಕಾರದಲ್ಲಿದ್ದರು. ರಾಷ್ಟ್ರೀಯ ಕ್ರೀಡಾ ನೀತಿಯ ಅನ್ವಯ ಪ್ರಫುಲ್ ಅಧಿಕಾರಾವಧಿಯು 2020ರ ಡಿಸೆಂಬರ್‌ನಲ್ಲಿ ಕೊನೆಗೊಂಡಿತ್ತು. ಆದರೂ ಅವರು ಅಧಿಕಾರ ಬಿಟ್ಟುಕೊಟ್ಟಿರಲಿಲ್ಲ. ಚುನಾವಣೆ ನಡೆಸಲು ಕೂಡ ಅವರು ಅಡ್ಡಗಾಲು ಹಾಕಿದ್ದರು ಎಂಬ ಆರೋಪ ಕೇಳಿಬಂದಿತ್ತು. ಆದ್ದರಿಂದ ಅವರ ವಿರೋಧಿಗಳು ಕೋರ್ಟ್ ಮೆಟ್ಟಿಲೇರಿದ್ದರು. ಪಟೇಲ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ಸುಪ್ರೀಂ ಕೋರ್ಟ್, ನಿವೃತ್ತ ನ್ಯಾಯಮೂರ್ತಿ ಎ.ಆರ್. ದವೆ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಖುರೇಷಿ ಹಾಗೂ ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಭಾಸ್ಕರ್ ಗಂಗೂಲಿ ಅವರಿದ್ದ ಆಡಳಿತ ಸಮಿತಿಯನ್ನು (ಸಿಒಎ) ನೇಮಿಸಿತ್ತು. ಆಡಳಿತದಲ್ಲಿ ಕ್ರೀಡಾಪಟುಗಳನ್ನು ಸಮಗ್ರವಾಗಿ ಸೇರಿಸಿ, ಚುನಾವಣೆ ನಡೆಸಿ ಆಡಳಿತ ಮಂಡಳಿಯನ್ನು ನೇಮಿಸುವಂತೆ ಸೂಚಿಸಿತ್ತು.



ರಾಜಕೀಯ ಹಸ್ತಕ್ಷೇಪ ಮತ್ತು ರಾಜಕಾರಣಿಗಳನ್ನು ಕ್ರೀಡೆಯ ಆಡಳಿತದಿಂದ ದೂರವಿಡಬೇಕು ಎಂಬ ಪಾಠವನ್ನು ಇನ್ನಾದರೂ ಕಲಿಯಬೇಕು

ಸೆಪ್ಟೆಂಬರ್ ಅಂತ್ಯದೊಳಗೆ ಚುನಾಯಿತ ಸಮಿತಿ ಅಸ್ತಿತ್ವಕ್ಕೆ ಬರಲಿದೆ ಎಂದು ಸಿಒಎ ವಾಗ್ದಾನ ಮಾಡಿತ್ತು. ಆ ದಿಸೆಯಲ್ಲಿ ಕಾರ್ಯೋನ್ಮುಖವಾಗಿತ್ತು. ಜೂನ್ ತಿಂಗಳಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಫಿಫಾ ನಿಯೋಗಕ್ಕೂ ಸಿಒಎ ಇದೇ ಮಾತು ಹೇಳಿತ್ತು. ಈ ತಿಂಗಳ ಅಂತ್ಯಕ್ಕೆ ಚುನಾವಣೆ ನಡೆಸುವುದಾಗಿ ಸಿದ್ಧತೆ ನಡೆಸಿತ್ತು. ಆಗ ಸಮಿತಿ ಸೂಚಿಸಿದ್ದ ಫಿಫಾ, ಹೊಸ ವಾರ ಎಐಎಫ್‌ಎಫ್ ಅನ್ನು ಅಮಾನತುಗೊಳಿಸುವುದಾಗಿ ಬೆದರಿಕೆಯೊಡ್ಡಿತ್ತು. ಅದು ಈಗ ನಿಜವಾಗಿದೆ. ಅಮಾನತು ಆದೇಶದ ಹಿಂದೆ ಪ್ರಫುಲ್ ಪ್ರಭಾವ ಕೆಲಸ ಮಾಡಿದೆ ಎಂಬ ಆರೋಪ ಇದೆ. ಪ್ರಫುಲ್, ಫಿಫಾ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರೂ ಹೌದು. ಒಂದೊಮ್ಮೆ ಅವರು ಹುನ್ನಾರ ಮಾಡಿದ್ದರೆ ಅದು ಅಕ್ಷಮ್ಯ. ಏಕೆಂದರೆ, ತಮ್ಮ ಸ್ವಪ್ರತಿಷ್ಠೆಗಾಗಿ ದೇಶದ ಮಾನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಳೆಯುವುದು ಸರಿಯಲ್ಲ. ಇಂತಹ ನಡೆಯಿಂದಾಗಿ ಕ್ರೀಡೆಯ ಆಡಳಿತದಲ್ಲಿ ಪಾರದರ್ಶಕತೆ, ಮಾಜಿ ಕ್ರೀಡಾಪಟುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿರುವ ಸಮಿತಿಯ ರಚನೆಯ ಆಶಯಗಳಿಗೆ ಹಿನ್ನಡೆಯಾಗುತ್ತದೆ. ಕ್ರೀಡಾ ನೀತಿಯನ್ನು ಅಳವಡಿಸಿಕೊಳ್ಳುವಲ್ಲಿ ಕ್ರೀಡಾ ಸಂಸ್ಥೆಗಳು ಹಿಂದೇಟು ಹಾಕುತ್ತಿವೆ. ಕೇಂದ್ರ ಕ್ರೀಡಾ ಸಚಿವಾಲಯವು ತೋರಿದ ವಿಳಂಬ ಧೋರಣೆಯೂ ಇಂತಹ ಪ್ರಮಾದಗಳಿಗೆ ಕಾರಣ. ಎಲ್ಲದಕ್ಕೂ ನ್ಯಾಯಾಲಯದತ್ತ ಮುಖ ಮಾಡುವುದಾದರೆ ಸಚಿವಾಲಯಗಳು ಏಕೆ ಬೇಕು ಎಂಬ ಪ್ರಶ್ನೆ ಮೂಡುತ್ತದೆ. ಇವತ್ತು ದೇಶದಲ್ಲಿ ಫುಟ್‌ಬಾಲ್, ಟೇಬಲ್ ಟೆನಿಸ್ ಹಾಗೂ ಈಗ ಭಾರತ ಒಲಿಂಪಿಕ್ ಸಂಸ್ಥೆಯಲ್ಲಿ ಸಿಒಎ ನೇಮಕವಾಗಿದೆ. ಇದು ಕ್ರೀಡಾ ಆಡಳಿತಗಾರರ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ. ರಾಜಕೀಯ ಹಸ್ತಕ್ಷೇಪ ಮತ್ತು ರಾಜಕಾರಣಿಗಳನ್ನು ಕ್ರೀಡೆಯ ಆಡಳಿತದಿಂದ ದೂರವಿಡಬೇಕು ಎಂಬ ಪಾಠವನ್ನು ಇನ್ನಾದರೂ ಕಲಿಯಬೇಕು. ಒಲಿಂಪಿಕ್ಸ್, ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಭಾರತದ ಕ್ರೀಡಾಪಟುಗಳು ಪದಕಗಳನ್ನು ಗೆದ್ದು ಬೀಗುತ್ತಿರುವ ಕಾಲಘಟ್ಟ ಇದು. ಫುಟ್‌ಬಾಲ್ ತಂಡವು ಫಿಫಾ ವಿಶ್ವಕಪ್, ಒಲಿಂಪಿಕ್ ಕೂಟಗಳಲ್ಲಿ ಮರಳಿ ಪ್ರವೇಶ ಗಿಟ್ಟಿಸಲು ಬಹಳಷ್ಟು ಹಾದಿ ಸವೆಸಬೇಕಾಗಿದೆ, ನಿಜ. ಆದರೆ, ಫ್ರಾಂಚೈಸಿ ಲೀಗ್ ಹಾಗೂ ಕೆಲವು ಉತ್ತಮ ಆಟಗಾರರಿಂದಾಗಿ ಪ್ರಸ್ತುತ ಫುಟ್‌ಬಾಲ್ ತಂಡವು ಏಷ್ಯಾಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದೆ. ಫಿಫಾ ರ‍್ಯಾಂಕಿಂಗ್‌ನಲ್ಲಿ 104ನೇ ಸ್ಥಾನದಲ್ಲಿರುವ ಭಾರತವು ಯುರೋಪಿನ ಬಲಾಢ್ಯ ತಂಡಗಳೊಂದಿಗೆ ಸರಿಸಾಟಿಯಾಗಿ ನಿಲ್ಲಲು ಇನ್ನೂ ಬಹಳಷ್ಟು ಕಾಲ ಬೇಕು. ಅಂತಹ ಸಾಧನೆ ಮಾಡಲು ಪೂರಕವಾದ ವಾತಾವರಣ ಸೃಷ್ಟಿಯಾಗಬೇಕಿದೆ.

ಜಾಹೀರಾತುಗಳಿಂದ ನಾಯಕರಾದವರಿಗೆ ಅರ್ಥವಾಗದು ಜಾಹೀರಾತಿನ ಹಂಗಿಲ್ಲದ ನೆಹರೂ ನಾಯಕತ್ವ

ಆತ್ಮಘಾತಕ ಆತ್ಮವಂಚನೆಯ ಅಧಿಕೃತ ಪ್ರಕರಣ



ಅನುರಣನ

ನಾರಾಯಣ ಎ.

ಆತ್ಮವಂಚನೆ ಎನ್ನುವುದು ಭಾರತದ ರಾಜಕೀಯ ಸಂಸ್ಕೃತಿಯ ಭಾಗ. ಆದರೆ ಆತ್ಮಘಾತಕವಾದ ಆತ್ಮವಂಚನೆಯ ಕೆಲಸಗಳನ್ನು ರಾಜಕಾರಣದಲ್ಲಿ ಇರುವವರೂ ಮಾಡುವುದಿಲ್ಲ. ಕರ್ನಾಟಕದ ರಾಜಕಾರಣ ಇದಕ್ಕೂ ಒಂದು ಅಪವಾದವಾಗಿಬಿಟ್ಟಿದೆ. ಈ ದೇಶದ ಮೊದಲ ಪ್ರಧಾನಿ ಮತ್ತು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಜವಾಹರಲಾಲ್ ನೆಹರೂ ಅವರ ವಿಚಾರದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ತೋರಿದ ಅವಗಣನೆ ಮತ್ತು ಅದನ್ನು ಸಮರ್ಥಿಸಿದ ರೀತಿಯು ಆತ್ಮವಂಚನೆಯ ವಿಚಾರ ಮಾತ್ರವಲ್ಲ, ಆತ್ಮಘಾತಕವೂ ಹೌದು.

ದೇಶಕ್ಕೆ ದೇಶವೇ ಸ್ವಾತಂತ್ರ್ಯ ದಿನಾಚರಣೆಯ ಪುಳಕದಲ್ಲಿದ್ದಾಗ, ಕರ್ನಾಟಕ ಸರ್ಕಾರವು ನೆಹರೂ ಅವರ ವಿಚಾರದಲ್ಲಿ ತೋರಿದ ಅಗಾಧ ಅಲ್ಪತನ ಇಡೀ ಸಂಭ್ರಮದ ಕಳೆ ಕೆಡುವಂತೆ ಮಾಡಿತು. ದೇಶದಲ್ಲಿ ಮನುಷ್ಯತ್ವ ಉಳಿಸಿಕೊಂಡ ಜನರಿಗಾದ ನೋವಿನ ವಿಚಾರ ಹಾಗಿರಲಿ, ಹೀಗೆಲ್ಲಾ ಮಾಡಿದರೆ ಅದು ಸರ್ಕಾರ ತನಗೆ ತಾನೇ ಎಸಗುವ ಅಪಚಾರ ಅಥವಾ ಆತ್ಮಘಾತಕತನವಾಗುತ್ತದೆ ಅಂತ ತಿಳಿಹೇಳುವಷ್ಟು ವಿವೇಚನೆ, ವಿವೇಕ, ಪ್ರಬುದ್ಧತೆ ಇರುವ ಯಾವ ವ್ಯಕ್ತಿಯೂ ಇವರ ಮಧ್ಯೆ ಇಲ್ಲವಾಗಿದ್ದಾದರೂ ಹೇಗೆ?

ಹಾಗಾದರೆ ಇದು ಆತ್ಮಘಾತಕ ನಡೆ ಹೇಗಾಗುತ್ತದೆ? ಮುಂದೆ ಓದಿ.

ಸ್ವಾತಂತ್ರ್ಯದ ಸಂದರ್ಭದಲ್ಲಿ ನೀಡಲಾದ ಜಾಹೀರಾತಿನಲ್ಲಿ ನೆಹರೂ ಅವರ ಭಾವಚಿತ್ರವನ್ನು ಬಳಸಿಕೊಳ್ಳದ್ದಕ್ಕೆ ರಾಜ್ಯದ ಮುಖ್ಯಮಂತ್ರಿ ನೀಡಿದ ಸಮರ್ಥನೆಯಲ್ಲಿ ನೆಹರೂ ಅವರನ್ನು 'ಅವರ ನಾಯಕರು' ಅಂತ ಹೇಳಿದ್ದಾರೆ. ಅಂದರೆ ಕಾಂಗ್ರೆಸ್ಸಿನವರ ನಾಯಕರು ಎನ್ನುವ ಅರ್ಥದಲ್ಲಿ ಅವರು ಹಾಗೆ ಹೇಳಿದ್ದಾರೆ. ಸರ್ಕಾರವು ನೆಹರೂ ಅವರನ್ನು ಕಡೆಗಣಿಸಿದ್ದರಿಂದ ಕೋಪಗೊಂಡದ್ದು ಕಾಂಗ್ರೆಸ್ಸಿಗರು ಮಾತ್ರವಲ್ಲ, ಸಂವಿಧಾನದ ಬಗ್ಗೆ ಮತ್ತು ಪ್ರಜಾತಾಂತ್ರಿಕ ಮೌಲ್ಯಗಳ ಬಗ್ಗೆ ಗೌರವ ಇರುವ ಎಲ್ಲರಿಗೂ ಸರ್ಕಾರದ ನಡೆ ಬೇಸರ ತರಿಸಿದೆ. ಸರ್ಕಾರದ ಅಲ್ಪತನದ ಬಗ್ಗೆ ನಾಚಿಕೆಯಾಗಿದೆ. ಯಾಕೆಂದರೆ, ಯಾವ ಅರ್ಥದಲ್ಲಿ ನೋಡಿದರೂ ನೆಹರೂ ಈ ದೇಶದ ನಾಯಕ, ದೇಶದ ಮೊದಲ ಪ್ರಧಾನಮಂತ್ರಿ. ಅವರನ್ನು ಕಾಂಗ್ರೆಸ್ ನಾಯಕ ಅಂತ ಪರಿಗಣಿಸುವ ಮುಖ್ಯಮಂತ್ರಿಯವರ ತರ್ಕವನ್ನು ಮುಂದುವರಿಸಿದರೆ ಇದೇ ಮುಖ್ಯಮಂತ್ರಿಯವರನ್ನು ಬಿಜೆಪಿಯ ಮುಖ್ಯಮಂತ್ರಿ ಅಂತಲೋ ಸಂಘ ಪರಿವಾರದವರ ಮುಖ್ಯಮಂತ್ರಿ ಅಂತಲೋ ಸೀಮಿತಗೊಳಿಸಬೇಕಾಗುತ್ತದೆ. ಪ್ರಧಾನಮಂತ್ರಿಯವರನ್ನೂ ಬಿಜೆಪಿಯ ಪ್ರಧಾನಮಂತ್ರಿ ಅಂತ ಕರೆಯಬೇಕಾಗುತ್ತದೆ. 'ಬೇಕಾದರೆ ಹಾಗೆ ಕರೆದುಕೊಳ್ಳಿರಿ, ಅಭ್ಯಂತರ ಇಲ್ಲ' ಅಂತ ಅವರು ಹೇಳಿದರೂ ಹೇಳಬಹುದು. ಯಾರೇನೇ ಹೇಳಲಿ, ಇವೆಲ್ಲಾ ಬಹಳ ಅಪಾಯಕಾರಿಯಾದ ನಿಲುವುಗಳು ಮತ್ತು ಸಂದೇಶಗಳು.


ಈ ದೇಶದಲ್ಲಿ ಪ್ರಜಾತಂತ್ರ ಉಳಿದಿರುವುದು, ಚುನಾವಣೆಯಲ್ಲಿ ಯಾರೇ ಗೆದ್ದರೂ ಅವರನ್ನು ಮುಖ್ಯಮಂತ್ರಿ ಎಂದೋ ಪ್ರಧಾನಮಂತ್ರಿ ಎಂದೋ ಈ ದೇಶದ ಜನರು ಪಕ್ಷಾತೀತವಾಗಿ, ಜಾತ್ಯತೀತವಾಗಿ, ಧರ್ಮಾತೀತವಾಗಿ ಸ್ವೀಕರಿಸುವ ಕಾರಣಕ್ಕೆ. ಗೆದ್ದವರೆಲ್ಲಾ ನಾವು ಇಂತಹ ಪಕ್ಷದ ಪ್ರಧಾನಮಂತ್ರಿ ಎಂದೋ ಮುಖ್ಯಮಂತ್ರಿ ಎಂದೋ ಬಿಂಬಿಸಿಕೊಳ್ಳತೊಡಗಿದರೆ, ಜನರು ಕೂಡಾ ಮುಂದೆ 'ನೀವು ಆ ಪಕ್ಷದ ಮುಖ್ಯಮಂತ್ರಿ ಆಗಿರುವುದರಿಂದ, ನೀವು ನಮ್ಮ ಮುಖ್ಯಮಂತ್ರಿ ಅಲ್ಲ' ಅಂತ ಹೇಳತೊಡಗಿದರೆ, 'ನೀವು ಆ ಜಾತಿಗೆ-ಧರ್ಮಕ್ಕೆ ಸೇರಿದವರಾದ ಕಾರಣ, ನೀವು ನಮ್ಮ ಮುಖ್ಯಮಂತ್ರಿ ಅಲ್ಲ' ಎನ್ನತೊಡಗಿದರೆ, ಆಗ ಚುನಾವಣೆ ಆಧಾರಿತ ಇಡೀ ಪ್ರಜಾತಂತ್ರ ವ್ಯವಸ್ಥೆಯೇ ಕುಸಿಯತೊಡಗುತ್ತದೆ. ಎಷ್ಟೋ ದೇಶಗಳಲ್ಲಿ ಹೀಗಾಗಿಯೇ ಪ್ರಜಾತಂತ್ರ ನಾಶವಾಗಿ ಹೋಗಿರುವುದು. ಆದುದರಿಂದ ನೆಹರೂ ಅವರು ಕಾಂಗ್ರೆಸ್ಸಿನವರ ನಾಯಕ ಅಂತ ಯಾರನ್ನೋ ಮೆಚ್ಚಿಸಲು ಹೇಳಿಬಿಡುವುದು ಸುಲಭ. ಹಾಗೆ ಹೇಳುವುದರ ಪರಿಣಾಮ ಹೇಳಿದವರ ಬುಡವನ್ನೇ ಅಲುಗಾಡಿಸಬಹುದು.

ನೆಹರೂ ಜನನಾಯಕರಾಗಿ ಬೆಳೆದದ್ದು ಜಾಹೀರಾತುಗಳ ಮೂಲಕವಲ್ಲ. ಆದಕಾರಣ ಜಾಹೀರಾತುಗಳನ್ನೇ ನೆಚ್ಚಿ ನಾಯಕರಾಗುವವರಿಗೆಲ್ಲಾ ನೆಹರೂ ಅರ್ಥವಾಗಲಾರರು. ಯಾವುದೋ ಜಾಹೀರಾತಿನಲ್ಲಿ ಅವರ ಭಾವಚಿತ್ರ ಇರುವುದರಿಂದ ಅಥವಾ ಇಲ್ಲದೇ ಇರುವುದರಿಂದ ನೆಹರೂ ಅವರಿಗೆ ಏನೂ ಆಗಬೇಕಿಲ್ಲ. ನೆಹರೂ ಬಗ್ಗೆ ಬರಬೇಕಾದ ನಿರ್ಧಾರಕ್ಕೆ ಬರಲು ಮಹಾಕವಿ ಕುವೆಂಪು ಬರೆದದ್ದು ಸಾಕು. ಇನ್ನೂ ಬೇಕು ಎನ್ನುವವರಿಗೆ ಬಿಜೆಪಿಯ ಎ.ಬಿ. ವಾಜಪೇಯಿ ಅವರು ನೆಹರೂ ಕುರಿತಾಗಿ ತಮ್ಮ ಅಂತರಂಗದ ಆಳದಿಂದ ಆಡಿದ ಶ್ರದ್ಧಾಂಜಲಿ ನುಡಿಗಳಲ್ಲಿ ವಿವರಗಳು ಸಿಗುತ್ತವೆ.


ನೆಹರೂ ಅವರು ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ಅವರಿಗೆ ಹೆಗಲೆಣೆಯಾಗಿ ದುಡಿದವರು. ಸಂವಿಧಾನದ ಸಾರ ಎನ್ನಬಹುದಾದ ಧರ್ಮ ನಿರಪೇಕ್ಷತೆ (ಅಂದರೆ ಹೆಮ್ಮೆಯ ಸಾಂವಿಧಾನಿಕ ಮೌಲ್ಯವಾದ ಸೆಕ್ಯುಲರಿಸಂ), ವೈಜ್ಞಾನಿಕ ಮನೋಭಾವ, ಸಮಾನತೆ, ಸಹೋದರತೆ ಇತ್ಯಾದಿಗಳನ್ನು ತಮ್ಮ ಉಸಿರಿನ ಉಸಿರಾಗಿಸಿಕೊಂಡು ಅಧಿಕಾರ ಚಲಾಯಿಸಿದವರು. ಆದಕಾರಣ ಸಂವಿಧಾನದ ಬಗ್ಗೆ ತಿರಸ್ಕಾರಭಾವ ಹೊಂದಿರುವವರಿಗೆ ನೆಹರೂ ಕುರಿತು ವಿನಾಕಾರಣ ದ್ವೇಷ ಇದೆ. ಅದನ್ನು ನೇರವಾಗಿ ತೋರ್ಪಡಿಸುವ ಧೈರ್ಯವಿಲ್ಲದ ಕಾರಣ ನೆಹರೂ ದೇಶ ವಿಭಜನೆಗೆ ಕಾರಣರು ಅಂತ ಸುಳ್ಳು ಹರಡುವ ಪ್ರಯತ್ನ ಬಹಳ ಕಾಲದಿಂದ ನಡೆಯುತ್ತಿದೆ. ಈ ತನಕ ಅದನ್ನು ಮಾಡುತ್ತಿದ್ದದ್ದು ಯಾವುದೋ ಪಕ್ಷದ ಐ.ಟಿ. ಸೆಲ್‌ನಲ್ಲಿ ಕೂಲಿಗಾಗಿ ದುಡಿಯುವ ಟ್ರೋಲ್‌ಗಳು. ಈಗ ಈ ಕೆಲಸಕ್ಕೆ ಚುನಾಯಿತ ಸರ್ಕಾರಗಳೇ ಇನ್ನೊಂದು ರೀತಿಯಲ್ಲಿ ಮುಂದಾಗುತ್ತಿರುವುದು 75 ವರ್ಷಗಳಲ್ಲಿ ದೇಶ ಕಂಡ ರಾಜಕೀಯ ಪತನಕ್ಕೆ ಸಾಕ್ಷಿ. ಇದು, ಚಾರಿತ್ರಿಕ ಸಂದರ್ಭವೊಂದರಲ್ಲಿ ಪ್ರದರ್ಶನಗೊಂಡ ಚಾರಿತ್ರಿಕ ಅಲ್ಪತೆ; ಅಪಾಯಕಾರಿ ಅಪ್ರಬುದ್ಧತೆ.

ಕರ್ನಾಟಕ ಸರ್ಕಾರವು ಇತ್ತೀಚೆಗೆ ತಾನು ಎಲ್ಲರ ಸರ್ಕಾರವಲ್ಲ, ತಾನು ಯಾವುದೋ ಒಂದು ವರ್ಗದ, ಒಂದು ಪಕ್ಷದ, ಕೆಲವೇ ಜಾತಿಗಳ ಸರ್ಕಾರ ಎಂಬಂತಹ ಅಪಾಯಕಾರಿ ಸಂದೇಶಗಳನ್ನು ಬೇರೆ ಬೇರೆ ರೀತಿಯಲ್ಲಿ ನೀಡುತ್ತಲೇ ಇದೆ. ಕೊಲೆಗಳಾದಾಗ ಕೊಲ್ಲಲ್ಪಟ್ಟವರು ಯಾವ ಸಮುದಾಯಕ್ಕೆ ಸೇರಿದವರು ಎನ್ನುವ ಆಧಾರದ ಮೇಲೆ ಕಾನೂನು ಕ್ರಮ ಜರುಗಿಸುವುದು, ಸತ್ತವರು ಯಾವ ಸಮುದಾಯಕ್ಕೆ ಸೇರಿದವರು ಎನ್ನುವ ಆಧಾರದಲ್ಲಿ ಅನುಕಂಪ ತೋರುವುದು ಮತ್ತು ಪರಿಹಾರ ನೀಡುವುದು, ತಮಗೆ ಬೇಕಾದ ಸಮುದಾಯದಲ್ಲಿ ಯಾರದೋ ಒಬ್ಬರ ಕೊಲೆಯಾದರೆ ಅವರ ಹಿನ್ನೆಲೆ ಸರಿಯಿಲ್ಲದಿದ್ದರೂ ದೇಶಭಕ್ತರೊಬ್ಬರ ಕೊಲೆಯಾಯಿತು ಎಂಬಂತೆ ಬಿಂಬಿಸುವುದು, ಇನ್ನೊಂದು ಸಮುದಾಯದಲ್ಲಿ ಅಮಾಯಕನೊಬ್ಬನ ಕೊಲೆಯಾದರೂ ಕೊಲೆಯಾದವನೇ ಅಪರಾಧಿ ಎನ್ನುವ ಅರ್ಥದಲ್ಲಿ ನಡೆದುಕೊಳ್ಳುವುದು... ಇವೆಲ್ಲ ಅಂತಹ ಸಂದೇಶ ನೀಡುವ ನಡೆ. ಸರ್ಕಾರದ ಆಯಕಟ್ಟಿನ ಸ್ಥಾನಗಳಲ್ಲಿ ಇರುವವರು ತೋರುವ ಇಂತಹ ಪ್ರತಿಯೊಂದು ಪಕ್ಷಪಾತಿ ನಡವಳಿಕೆಯೂ ಈ ಸರ್ಕಾರ ಎಲ್ಲರಿಗೂ ಸೇರಿದ್ದಲ್ಲ ಎನ್ನುವ ಸಂದೇಶವನ್ನು ನೀಡುತ್ತಿದೆ. ಜನ ಇದನ್ನು ಗಂಭೀರವಾಗಿ ಪರಿಗಣಿಸಿ 'ಹೌದು, ಇದು ನಮ್ಮ ಸರ್ಕಾರವಲ್ಲ, ಯಾರದ್ದೋ ಸರ್ಕಾರ' ಎಂಬಂತೆ ಬೀದಿಗಿಳಿದು ಅಸಹಕಾರ ತೋರತೊಡಗಿದರೆ ಏನಾದೀತು? ಸೂರ್ಯ ಮುಳುಗದ ಬ್ರಿಟಿಷ್ ಸಾಮ್ರಾಜ್ಯಕ್ಕೇನೇ ಜನರ ಅಸಹಕಾರವನ್ನು ತಾಳಲಾಗಲಿಲ್ಲ. ಇನ್ನು, ಅರ್ಧ ಚುನಾಯಿತ- ಇನ್ನರ್ಧ 'ಖರೀದಿಸಿದ' ಬಹುಮತದಿಂದ ಅಧಿಕಾರಕ್ಕೆ ಬಂದವರಿಗೆ ಇಂತಹದ್ದೊಂದು ಜನಾಕ್ರೋಶ ಸೃಷ್ಟಿಯಾಗಿಬಿಟ್ಟರೆ ಅದನ್ನು ಎದುರಿಸಲು ಸಾಧ್ಯವೇ?

ಅದಕ್ಕೇ ಹೇಳಿದ್ದು, ಕರ್ನಾಟಕದಲ್ಲಿ ಸರ್ಕಾರ ನಡೆಸುವವರು ಆತ್ಮವಂಚನೆಯ ಜತೆಗೆ ಆತ್ಮಘಾತಕ ಹಾದಿ ಹಿಡಿದಿದ್ದಾರೆ ಅಂತ. ಜನರು ಸತ್ಯ ಎಂದು ಸ್ವೀಕರಿಸಲಿ ಅಂತ ರಾಜಕಾರಣದಲ್ಲಿರುವವರು ಸುಳ್ಳುಗಳನ್ನು ಹೇಳುವುದಿದೆ. ಆದರೆ ಈಗೀಗ ಕೆಲ ನಾಯಕರು ತಾವು ಹೇಳುವುದು ಸುಳ್ಳು ಅಂತ ಜನರಿಗೆ ಗೊತ್ತಿದೆ ಅಂತ ಗೊತ್ತಿದ್ದೂ ಸುಳ್ಳುಗಳನ್ನೇ ಹೇಳುತ್ತಾರೆ. ಮಿಥ್ಯೆಗಳನ್ನು ಹರಡುವುದು ಸರ್ಕಾರದ ಅಧಿಕೃತ ಕರ್ತವ್ಯ ಎನ್ನುವಂತೆ ವರ್ತಿಸುತ್ತಿದ್ದಾರೆ. ಒಂದಲ್ಲ ಒಂದು ದಿನ ಇವೆಲ್ಲಾ ತಮಗೆ ಮುಳುವಾಗಬಲ್ಲವು ಎಂಬ ಪರಿವೆಯೇ ಇಲ್ಲದ ಸ್ಥಿತಿಯೊಂದನ್ನು ಅವರು ತಲುಪಿದ ಹಾಗೆ ಕಾಣಿಸುತ್ತದೆ. ಈ ಮನೋವಿಕಾರವನ್ನು ಏನಂತ ಕರೆಯುವುದು? ಇದರ ಅರ್ಥವನ್ನು ಹಿಡಿದಿಡುವ ಒಂದು ಪದವು ಪ್ರಪಂಚದ ಯಾವುದೇ ಭಾಷೆಯಲ್ಲಿ ಸೃಷ್ಟಿಯಾದಂತಿಲ್ಲ. ಅಂದರೆ, ಕೇವಲ ಏಳೂವರೆ ದಶಕಗಳ ಅವಧಿಯಲ್ಲಲ್ಲ, ನಾಗರಿಕತೆ ಹುಟ್ಟಿದ ಕಾಲದಿಂದಲೂ ಕಂಡುಬಾರದ ವಿಕಾರಗಳೆಲ್ಲಾ ನಮ್ಮ ಮುಂದೆ ಸಂಭವಿಸುತ್ತಿವೆ.



ಚುರುಮುರಿ



ಬಿ ರಿಪೋರ್ಟ್ ಬ್ಯೂರೊ!

• ತುರುವೇಕೆರೆ ಪ್ರಸಾದ್

'ಅಂತೂ ಎಸಿಬಿ ಠುಸ್ ಅಂದೋಯ್ತು' ಸಿಬಿರು ಎಬ್ಬಿದ ಕಲ್ಲೇಶಿ. 'ಬುಸ್ ಅಂದಿದ್ದೇ ಕಮ್ಮಿ, ಇನ್ನೇನಾಗುತ್ತೆ?' ಎಂದ ಮೈಲಾರಿ.

'ಬುಸ್ಸು, ಗುರ‍್ರು ಮುಖ್ಯ ಅಲ್ಲ. ಅದು ಎಷ್ಟು ಜನನ್ನ ಕಚ್ಚೈತು ಅನ್ನೋದು ಮುಖ್ಯ ಕಣ್ರಲೇ' ಎಂದ ಈರಭದ್ರ.

'ಅದೆಂಗ್ ಕಚ್ಚಕಾಯ್ತದೆ? ಯೋಳಿ ಕೇಳಿ ಈ ಎಸಿಬಿ ಪುಸ್ಸಿಕ್ಯಾಟು... ಲೋಕಾವುಲಿ ಬಾರಿ ಎಗರಾಡುತ್ತೆ, ನಮ್ ಕಂಟ್ರೋಲ್ಗೆ ಸಿಗಕಿಲ್ಲ ಅಂತ ಕೈನೋರು ಈ ಪುಸಿಕ್ಯಾಟ್‌ಗೆ ಪಟ್ಟೆ ಬಳಿದು ಗುರ್ ಅನ್ನೋಕೆ ಬುಟ್ಟಿದ್ದು ಕಣ್ಲಾ?'

'ಎಂಗೋ ಲೋಕಾವುಲಿ ಇತ್ತಲ್ಲ, ಅದು ತನ್ ಪಾಡಿಗ್ ಬೇಟೆ ಆಡ್ಕಂಡ್ ಓಗಾದು. ಈ ಪುನುಗಿನ ಬೆಕ್ಕು ಯಾಕ್ ಬೇಕಿತ್ತು ಅಂತೀನಿ?'

'ಅಲ್ಲೇ ಕಣ್ಲಾ ಮಸ್ಲತ್ ಇರಾದು... ಆಡಳಿತ, ಅಧಿಕಾರ ಕೈಲಿ ಮಡಿಕ್ಕಂಡು ಈ ಲೋಕಾವುಲಿ ಅನ್ನೋ ಗಳಗಂಟೆ ದಾಸಯ್ಯಂಗೆ ಎದರ್ಕಂಡು ಕೂರಕಾಯ್ತದೇನ್ಲಾ? ಅಂಗಂತ ಲೋಕಾವುಲಿ ಮೇಲೆ ಜಬರ್ದಸ್ತೂ ಮಾಡಂಗಿಲ್ಲ. ಅದಕ್ಕೇ ಆ ವುಲಿ ಮೀಸೆ ಕಿತ್ತು ಬೆಕ್ಕಿಗೆ ಅಂಟ್ಸಿ ಪಿಸ್ ಅನ್ನೋಕೆ ಕಲಿಸಿದ್ರು'.

'ಈ ತಾರಾತಿಕಡಿ ಎಲ್ಲಾ ಬೇಕಿತ್ತಾ?'

'ಅಲ್ಲಲೇ ಮಂಗ್ಯಾ, ಆಡಳಿತ ಅಂದ್‌ಮ್ಯಾಲೆ ಕೊಡಾದು, ತಕಳಾದು ಇದ್ದೇ ಇತ್ತದೆ. ಅದ್ಕೆ ಮಧ್ಯವರ್ತಿಗಳು ಯಾರು? ಆಡಳಿತ ಯಂತ್ರದಲ್ಲಿ ಕೆಲಸ ಮಾಡೋರು. ಅವರನ್ನೆಲ್ಲಾ ಈ ಲೋಕಾವುಲಿ ಅಟ್ಟಾಡಿಸಿ ಪರಪ್ಪನ್ ಜೈಲಿಗೆ ಓಡುಸ್ಬುಟ್ರೆ ಪರ್ಸಂಟೇಜ್ ಕಲೆಕ್ಸನ್ ಮಾಡೋರ್ ಯಾರ‍್ಲ? ಅದ್ಕೇ ಅವರನ್ ಕಾಯಕ್ಕೆ ಈ ಸೆಟಪ್ಪು. ಜನಗಳ ಕಣ್ಣಿಗೆ 'ಓ ಹುಲಿ ಬಂತು ಹುಲಿ' ಅನ್ನೋ ಅಂಗಾಗ್ಬೇಕು, ಇವರು ಪುಸ್ಸಿಕ್ಯಾಟ್‌ನ ಕಂಕಳಲ್ಲಿ ಮಡಿಕ್ಕಂಡು ತಲೆ ಸವರ್ಬೇಕು... ಎಂಗೆ?'

'ಮುಂದೇನು ಕತೆ? ಎಸಿಬಿ ಬೆಕ್ಕು, ಲೋಕಾವುಲಿ ಒಳಗೆ ಲೀನ ಆಯ್ತುದಲ್ಲ?'

'ಅಯ್ಯೋ ಕಾಲ ಇಂಗೇ ಇದ್ದೀತಾ? ಇನ್ನೊಂದ್ಸಾರಿ ಅಧಿಕಾರ ಸಿಕ್ದಾಗ ಮತ್ತೆ ಎಸಿಬಿ ಮಾಡೋದು. ಅಂದ್ರೆ ಆ್ಯಂಟಿ ಚಾರ್ಜ್‌ಶೀಟ್ ಬ್ಯೂರೊ... ಹಾಗಂದ್ರೆ ಚಾರ್ಜ್‌ಶೀಟೇ ಹಾಕ್ದೇ ಇರೋದು. ಅದಕ್ಕೆ ಅವಕಾಶ ಆಗದಿದ್ರೆ ಬಿಆರ್‌ಬಿ, ಅಂದ್ರೆ ಬಿ ರಿಪೋರ್ಟ್ ಬ್ಯೂರೊ ಅಂತ ಮಾಡಿ ಕೈತೊಳ್ಕೊಳೋದು' ಪರ್ಮೇಶಿ ಹುಬ್ಬು ಹಾರಿಸಿ ನಕ್ಕ,

ದಿನದ ಟ್ವೀಟ್

ಅರ್ಥವಾದ ಸತ್ಯ

ಅತ್ಯಂತ ಆಸಕ್ತಿದಾಯಕವಾಗಿದೆ. ಬಿಜೆಪಿಯ ಸಂಸದೀಯ ಮಂಡಳಿಯ ಪುನರ್‌ರಚನೆಯು ದಿಟ್ಟತನದಿಂದ ಕೂಡಿದೆ- ಎಲ್ಲವನ್ನೂ ಹುಷಾರಾಗಿ ಮಾಡುತ್ತಾ ಹೋಗುವುದರಿಂದ ಪ್ರಯೋಜನವಿಲ್ಲ... ಬಿಜೆಪಿಗೆ ಇದು ಅರ್ಥವಾಗುತ್ತದೆ. ಆದರೆ ಕಾಂಗ್ರೆಸ್ ಇನ್ನಷ್ಟೇ ಅರ್ಥಮಾಡಿಕೊಳ್ಳಬೇಕಿದೆ.



ಪಲ್ಲವಿ ಘೋಷ್, ಪತ್ರಕರ್ತೆ

ಕಿಡಿನುಡಿ

ಕೋಟಿ ಕೋಟಿ ರೂಪಾಯಿ ತೆಗೆದಿರಿಸಲಾಗಿದೆ. ಕೋಟಿ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಅಷ್ಟಾದರೂ ಗಂಗಾ ನದಿಯನ್ನು ಸ್ವಚ್ಛಗೊಳಿಸಲು ಅವರಿಗೆ ಸಾಧ್ಯವಾಗಿಲ್ಲ. ಅಥವಾ ಎಲ್ಲೋ ಒಂದೆಡೆ ಯಾರೋ ಒಬ್ಬರು ಹಣವನ್ನು ನುಂಗುತ್ತಿದ್ದಾರೆ...

(ಗಂಗಾ ನದಿಯ ಶುದ್ಧೀಕರಣಕ್ಕೆ ₹ 30,000 ಕೋಟಿ ಮಂಜೂರು ಮಾಡಲಾಗಿದೆ ಎಂಬ ಕೇಂದ್ರ ಜಲಶಕ್ತಿ ಸಚಿವರ ಹೇಳಿಕೆಗೆ ಪ್ರತಿಕ್ರಿಯೆ)



ರಂಜನಾ ಬ್ಯಾನರ್ಜಿ, ಪತ್ರಕರ್ತೆ

25 ವರ್ಷಗಳ ಹಿಂದೆ

ಸೋಮವಾರ, 18-8-1997

• **ವೀರಪ್ಪನ್ ಸವಾಲು ಎದುರಿಸಲು ಸರ್ಕಾರ ಸಜ್ಜು**

ಮೈಸೂರು, ಆಗಸ್ಟ್ 17– ವೀರಪ್ಪನ್ ಕಡೆಯಿಂದ ಬಂದೆರಗಬಹುದಾದ ಯಾವುದೇ ರೀತಿಯ ಸವಾಲುಗಳನ್ನು ಎದುರಿಸಲು ಸರ್ಕಾರ ಸಿದ್ಧವಾಗಿದೆ ಎಂದು ಗೃಹ ಖಾತೆ ರಾಜ್ಯ ಸಚಿವ ಆರ್. ರೋಷನ್ ಬೇಗ್ ಪ್ರಕಟಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡುತ್ತಿದ್ದ ಅವರು, 'ವೀರಪ್ಪನ್ ವಶದಲ್ಲಿರುವ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವಂತೆ ವೀರಪ್ಪನ್ ಮನವೊಲಿಸುವ ಉದ್ದೇಶದಿಂದ ತಮಿಳುನಾಡು ಸರ್ಕಾರದ ಕಡೆಯಿಂದ ಮತ್ತೊಬ್ಬ ಪ್ರತಿನಿಧಿಯನ್ನು ಪತ್ರದೊಂದಿಗೆ ಕಳಿಸಲಾಗಿದೆ' ಎಂದು ಹೇಳಿದರು.

• **'ಅಮೃತಸರ ಭೇಟಿ ಬೇಡ': ಬ್ರಿಟನ್ ರಾಣಿಗೆ ಒತ್ತಾಯ**

ಲಂಡನ್, ಆಗಸ್ಟ್ 17 (ಪಿಟಿಐ): ಸಿಖ್ಖರ ಪವಿತ್ರ ಸ್ಥಳವಾದ ಅಮೃತಸರಕ್ಕೆ ಭೇಟಿ ನೀಡುವ ಉದ್ದೇಶವನ್ನು ಕೈ ಬಿಡಬೇಕೆಂದು ಬ್ರಿಟನ್ನಿನ ರಾಣಿ ಎಲಿಜಬೆತ್ ಅವರನ್ನು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಒತ್ತಾಯಿಸಿದ್ದಾರೆ.

ಅಮೃತಸರದ ಬಳಿಯ ಜಲಿಯನ್ ವಾಲಾಬಾಗ್‌ನಲ್ಲಿ (1919) ಬ್ರಿಟಿಷ್ ಸೈನ್ಯ ಭಾರತೀಯರನ್ನು ಸಾಮೂಹಿಕವಾಗಿ ಮಾರಣಹೋಮ ಮಾಡಿತ್ತು. ಬ್ರಿಟನ್ನಿನ ರಾಣಿ ಇದಕ್ಕಾಗಿ ಕ್ಷಮೆ ಕೋರುವರೆಂದು ಅನೇಕ ಭಾರತೀಯರು ನಿರೀಕ್ಷಿಸಿದ್ದಾರೆಂದು 'ಸಂಡೆ ಅಬ್ಸರ್‌ವರ್' ಪತ್ರಿಕೆ ವರದಿ ಮಾಡಿದೆ.

ಜನರ ಭಾವನೆಗಳನ್ನು ಗಮನದಲ್ಲಿ ಇಟ್ಟುಕೊಂಡು ಅಮೃತಸರಕ್ಕೆ ಆಕೆ ಭೇಟಿ ನೀಡದಿರುವುದು ಒಳ್ಳೆಯದು ಎಂದು ಬ್ರಿಟನ್ ಸರ್ಕಾರಕ್ಕೆ ಗುಜ್ರಾಲ್ ತಿಳಿಸಿರುವುದಾಗಿ ಪತ್ರಿಕೆ ಪ್ರಕಟಿಸಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 18-8-1972

• **ಗಡಿ ವಿವಾದ: ವಿಧಾನಮಂಡಲದ ನಿರ್ಣಯಕ್ಕೆ ಸರ್ಕಾರ ಬದ್ಧ**

ಬೆಂಗಳೂರು, ಆಗಸ್ಟ್ 17– ಮೈಸೂರು- ಮಹಾರಾಷ್ಟ್ರ ಮತ್ತು ಮೈಸೂರು – ಕೇರಳ ಗಡಿ ವಿವಾದದ ಬಗ್ಗೆ ರಾಜ್ಯದ ವಿಧಾನ ಮಂಡಲ ಈಗಾಗಲೇ ತೆಗೆದುಕೊಂಡಿರುವ ನಿರ್ಣಯಕ್ಕೆ ಪ್ರಸಕ್ತ ಸರ್ಕಾರ ಬದ್ಧವಾಗಿದೆ ಎಂದು ಕೃಷಿ ಸಚಿವ ಕೆ.ಎಚ್. ಪಾಟೀಲರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಡಿ.ಬಿ. ಕಲಮಣಕರ್ (ಕಾಂ) ಪ್ರಶ್ನೆಗೆ ಉತ್ತರ ನೀಡಿದ ಅವರು, ಮಹಾಜನ ವರದಿ ಜಾರಿಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ತಿಳಿವಳಿಕೆಯೇನೂ ಬಂದಿಲ್ಲವೆಂದರು. ಅಲ್ಲದೆ ಯಥಾಸ್ಥಿತಿ ಉಳಿಸಿಕೊಂಡು ಬರುವಂತೆ ರಾಜ್ಯ ಸರ್ಕಾರ ಸಲಹೆಯನ್ನೇನೂ ಮಾಡಿಲ್ಲವೆಂದರು.

• **ಮಜುಂದಾರ್ ಸಾವು: ನ್ಯಾಯಾಂಗ ತನಿಖೆಗೆ ಕೇಂದ್ರದ ನಕಾರ**

ನವದೆಹಲಿ, ಆಗಸ್ಟ್ 17– ನಕ್ಸಲೀಯ ಚಳವಳಿಯ ಸಂಸ್ಥಾಪಕ ಚಾರು ಮಜುಂದಾರ್ ಅವರು ಇತ್ತೀಚೆಗೆ ಪೊಲೀಸರ ಕಸ್ಟಡಿಯಲ್ಲಿ ಸಾವಿಗೀಡಾದುದಕ್ಕೆ ಕಾರಣವಾದ ಪರಿಸ್ಥಿತಿಯ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂಬ ಬೇಡಿಕೆಯನ್ನು ಸರ್ಕಾರ ಇಂದು ಲೋಕಸಭೆಯಲ್ಲಿ ತಿರಸ್ಕರಿಸಿತು.

ಗೃಹ ವ್ಯವಹಾರಗಳ ರಾಜ್ಯ ಸಚಿವ ಕೆ.ಸಿ. ಪಂತ್, ಮ್ಯಾಜಿಸ್ಟ್ರೇಟ್ ಮಟ್ಟದ ತನಿಖೆಯೊಂದು ನಡೆಯುತ್ತಿದೆ ಎಂದು ತಿಳಿಸಿದರು.

ಸಂಗತ

ವೈಜ್ಞಾನಿಕ ಮನೋವೃತ್ತಿ: ಸಿಗಲಿ ಒತ್ತು

ಮೌಢ್ಯಾಚರಣೆಗೆ ಬಲಿಯಾಗದೆ ವೈಜ್ಞಾನಿಕ ಮನೋಭಾವ ರೂಢಿಸಿಕೊಳ್ಳಬೇಕಿದೆ

• ಈ.ಬಸವರಾಜು

ವೈಜ್ಞಾನಿಕ ಮನೋವೃತ್ತಿಗೆ ಒತ್ತು ನೀಡುವ ಕಾರ್ಯಕ್ರಮಗಳು, ಪ್ರದರ್ಶನಗಳು ಸೇರಿದಂತೆ ವೈವಿಧ್ಯಮಯ ಚಟುವಟಿಕೆಗಳನ್ನು ರೂಪಿಸಲು ಉದ್ದೇಶಿಸಿ, ಅದಕ್ಕಾಗಿ ಒಂದು ದಿನವನ್ನು ನಿಗದಿಪಡಿಸಲು 2017ರಲ್ಲಿ ಒಡಿಶಾದ ರಾಷ್ಟ್ರೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ನೈಸರ್) ನಡೆದ 16ನೇ ಅಖಿಲ ಭಾರತ ಜನ ವಿಜ್ಞಾನ ಅಧಿವೇಶನದಲ್ಲಿ ಚರ್ಚಿಸಲಾಯಿತು. ಬಹಳಷ್ಟು ಚರ್ಚೆಯ ನಂತರ ಪ್ರತಿವರ್ಷ ಆಗಸ್ಟ್ 20ರಂದು ರಾಷ್ಟ್ರೀಯ ವೈಜ್ಞಾನಿಕ ಮನೋವೃತ್ತಿ ದಿನವನ್ನು ಆಚರಿಸಲು ನಿರ್ಧರಿಸಲಾಯಿತು. ಅಖಿಲ ಭಾರತ ಜನವಿಜ್ಞಾನ ಸಂಘಟನೆಗಳ ಜಾಲ (ಎಐಪಿಎಸ್‌ಎನ್) ಮತ್ತು ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಂಸ್ಥೆಗಳ (ಎಂಎಎನ್‌ಎಸ್) ಸಂಯುಕ್ತ ಆಶ್ರಯದಲ್ಲಿ ದೇಶದಾದ್ಯಂತ ಈ ದಿನಾಚರಣೆಯನ್ನು ಸಂಘಟಿಸಲು ತೀರ್ಮಾನಿಸಲಾಯಿತು.

ವೈಜ್ಞಾನಿಕ ಮನೋವೃತ್ತಿ ಬೆಳೆಸುವುದಕ್ಕಾಗಿಯೇ ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಜೀವನಪರ್ಯಂತ ದುಡಿದವರು ಡಾ. ನರೇಂದ್ರ ದಾಭೋಲ್ಕರ್. ವೃತ್ತಿಯಲ್ಲಿ ವೈದ್ಯರಾಗಿದ್ದ ಅವರು, ಪುಣೆ ಮೂಲದವರು. ಮಹಾರಾಷ್ಟ್ರದ ಗ್ರಾಮ ಗ್ರಾಮಗಳಲ್ಲಿ ಸಂಚರಿಸುತ್ತಾ ಜನರಲ್ಲಿ ವೈಜ್ಞಾನಿಕ ಜಾಗೃತಿ ಮೂಡಿಸಲು ಶ್ರಮಿಸಿದವರು. ಇದಕ್ಕೆ ಪೂರಕವಾಗಿ ಅನೇಕ ಕಿರುಪುಸ್ತಕಗಳು, ಕಿರುಚಿತ್ರಗಳು, ನಾಟಕಗಳನ್ನು ರಚಿಸಿ, ಜನಜಾಗೃತಿಗಾಗಿ ಅದನ್ನು ಬಳಕೆ ಮಾಡಿದರು. ಹಂತ ಹಂತವಾಗಿ ಜನರಲ್ಲಿ ಜಾಗೃತಿ ಮೂಡಲಾರಂಭಿಸಿತು.

ಮಹಾರಾಷ್ಟ್ರ ಸರ್ಕಾರವು ಮೌಢ್ಯಾಚರಣೆ ಪ್ರತಿಬಂಧಕ ಕಾನೂನು ತರುವಂತೆ ದಾಭೋಲ್ಕರ್ ಒತ್ತಾಯಿಸಿದರು. ಈ ಕಾರ್ಯ ಪ್ರಗತಿಯಲ್ಲಿರುವಾಗಲೇ 2013ರ ಆಗಸ್ಟ್ 20ರ ಮುಂಜಾನೆ ವಾಯುವಿಹಾರಕ್ಕೆ ತೆರಳಿದ್ದಾಗ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಯಿತು. ಅದಾದ ಕೆಲವೇ ದಿನಗಳಲ್ಲಿ ಮಹಾರಾಷ್ಟ್ರ ಸರ್ಕಾರವು ಸುಗ್ರೀವಾಜ್ಞೆ ಮೂಲಕ ಮೌಢ್ಯಾಚರಣೆ ಪ್ರತಿಬಂಧಕ ಕಾನೂನನ್ನು ಜಾರಿಗೆ ತಂದಿತು. ಪ್ರಸ್ತುತ ಅದರ ಅಡಿಯಲ್ಲಿ ನೂರಾರು ಪ್ರಕರಣಗಳು ದಾಖಲಾಗಿವೆ.

ಮಹಾರಾಷ್ಟ್ರ ಮಾದರಿಯಲ್ಲಿ ಕಾಯ್ದೆ ತರುವಂತೆ ಕರ್ನಾಟಕದಲ್ಲಿಯೂ ಆಗ್ರಹ- ಒತ್ತಾಯ ಕೇಳಿಬಂತು. ಈ ಸಂಬಂಧ ದೊಡ್ಡ ಮಟ್ಟದಲ್ಲಿ ವಾದ-ವಿವಾದಗಳೂ ನಡೆದವು. ಮೌಢ್ಯ ನಿಷೇಧ ಕಾಯ್ದೆಯು ಈಗ ಇಲ್ಲೂ ಜಾರಿಗೆ ಬಂದಿದೆ. ಆದರೆ ಅನುಷ್ಠಾನ ಮಾತ್ರ ಪರಿಣಾಮಕಾರಿಯಾಗಿ ಆಗುತ್ತಿಲ್ಲ.

ಇದೇನೇ ಇರಲಿ, ಮೌಢ್ಯ ನಿಷೇಧಕ್ಕೆ ಸಂಬಂಧಿಸಿ ದೇಶದಾದ್ಯಂತ ಕಾನೂನು ಜಾರಿಯಾಗಬೇಕು ಎಂದು ಒತ್ತಾಯಿಸುತ್ತಲೇ ಮತ್ತೊಂದೆಡೆ, ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ರಾಷ್ಟ್ರೀಯ ವೈಜ್ಞಾನಿಕ ಮನೋವೃತ್ತಿ ದಿನವನ್ನು ಆಚರಿಸಲು ನಿರ್ಧರಿಸಲಾಯಿತು. ಪ್ರಸ್ತುತ ಈ ದಿನಾಚರಣೆ ಐದನೇ ವರ್ಷಕ್ಕೆ ಕಾಲಿಟ್ಟಿರುವುದು ಗಮನಿಸಬೇಕಾದ ಅಂಶ.

ಈ ದಿನಾಚರಣೆಯ ಭಾಗವಾಗಿ, ಪವಾಡಗಳ ರಹಸ್ಯ ಬಯಲು ಪ್ರದರ್ಶನ, ನಾಟಕಗಳ ಪ್ರದರ್ಶನ, ಪೋಸ್ಟರ್‌ಗಳ ಪ್ರದರ್ಶನ, ಪಾದಯಾತ್ರೆ, ಚರ್ಚೆ, ಸಂವಾದ, ಉಪನ್ಯಾಸದಂತಹ ಕಾರ್ಯಕ್ರಮಗಳನ್ನು ದೇಶದಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ.

ಪರಿಶಿಷ್ಟ ಸಮುದಾಯದ ಬಾಲಕನೊಬ್ಬ, ಶಾಲೆಯಲ್ಲಿ ಕುಡಿಯುವ ನೀರಿನ ಮಡಕೆಯನ್ನು ಮುಟ್ಟಿದ ಕಾರಣಕ್ಕಾಗಿ ಅವನನ್ನು ಹೊಡೆದು ಕೊಂದ ಹೃದಯ ವಿದ್ರಾವಕ ಘಟನೆಯು ರಾಜಸ್ಥಾನದಲ್ಲಿ ಜರುಗಿದೆ. ಇಂಥ ಅನೇಕ ಅಮಾನವೀಯ ಆಚರಣೆಗಳು, ಪ್ರಕರಣಗಳು ಬೇರೆ ಬೇರೆ ರಾಜ್ಯಗಳಲ್ಲೂ ನಡೆದಿವೆ. ತಮ್ಮ ಮಕ್ಕಳು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಕಲಿಯಬೇಕು ಎಂದು ಪೋಷಕರೆಲ್ಲರೂ ಬಯಸುತ್ತಾರೆ. ಆದರೆ, ವೈಜ್ಞಾನಿಕ ಮನೋಭಾವದ ವಿಚಾರಕ್ಕೆ ಬಂದಾಗ ಮಾತ್ರ ಮೌನ ವಹಿಸುತ್ತಾರೆ.



ಅನಾರೋಗ್ಯದಿಂದ ಬಳಲುತ್ತಿರುವವರಿಗೆ ವಾಸ್ತು ದೋಷ ಪರಿಹಾರವನ್ನು ಸೂಚಿಸುವುದು, ಪರೀಕ್ಷೆಯಲ್ಲಿ ವಿದ್ಯಾರ್ಥಿ ಅನುತ್ತೀರ್ಣನಾದರೆ, ಸಕಾಲದಲ್ಲಿ ಮದುವೆಯಾಗದಿದ್ದರೆ, ಆ ಮನೆಯ ವಾಸ್ತು ಬದಲಿಸಲು ಸೂಚಿಸುವುದು, ಮಕ್ಕಳಾಗುತ್ತವೆ ಎಂದು ಹೇಳಿ ಮಹಿಳೆಯರನ್ನು ಶೋಷಣೆ ಮಾಡುವುದು, ಪರಿಶಿಷ್ಟರ ಪ್ರವೇಶ ನಿರ್ಬಂಧ, ಚಿನ್ನದ ಲೇಹ್ಯದ ಮೂಲಕ ಕ್ಯಾನ್ಸರ್ ಗುಣಪಡಿಸುತ್ತೇವೆ ಎಂದು ಹೇಳಿ ಮೋಸ ಮಾಡುವುದು, ಒಡವೆಯನ್ನು ದ್ವಿಗುಣ ಮಾಡುತ್ತೇವೆ, ಹಣವನ್ನು ದ್ವಿಗುಣ ಮಾಡುತ್ತೇವೆ ಎಂದೆಲ್ಲ ವಂಚಿಸಿ ಹಣ ಕೀಳುವಂತಹ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಲೇ ಇವೆ.

ಮೋಸ ಹೋಗುವವರು ಇರುವ ತನಕ ಮೋಸ ಮಾಡುವವರು ಇರುತ್ತಾರೆ ಎಂಬ ಮಾತಿದೆ. ಒಂದು ಮೌಢ್ಯಾಚರಣೆಯನ್ನು ಬಯಲು ಮಾಡಿದರೆ ಮತ್ತೊಂದನ್ನು ಸೃಷ್ಟಿಸಿ ಜನರನ್ನು ಸುಲಿಗೆ ಮಾಡುವುದು, ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುವುದು, ನಿಧಿಯ ಆಸೆಗಾಗಿ ಮಕ್ಕಳನ್ನು ಬಲಿ ಕೊಡುವುದು, ಬಾನಾಮತಿ ಮಾಡುತ್ತಾರೆಂದು ಆರೋಪಿಸಿ ಮಹಿಳೆಯರ ಶೋಷಣೆ ಮಾಡುವಂತಹ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಲೇ ಇವೆ. ಪುನರ್ಜನ್ಮದ ನಂಬಿಕೆಯಿಂದ ಸಹೋದರಿಯನ್ನೇ ಕೊಂದಿರುವ ಉದಾಹರಣೆ ಇದೆ. ಅವಿದ್ಯಾವಂತರಷ್ಟೇ ಮೌಢ್ಯಕ್ಕೆ ಬಲಿಯಾಗುವುದಿಲ್ಲ, ಕಲಿತವರೂ ಇದರಲ್ಲಿ ಹಿಂದೆ ಬಿದ್ದಿಲ್ಲ.

'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?...', 'ಹಳೆ ಮತದ ಕೊಳೆಯೆಲ್ಲ ಹೊಸ ಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ, ಬರಲಿ ವಿಜ್ಞಾನ ಬುದ್ಧಿ...' ಎಂದು ಹೇಳಿದ ಕುವೆಂಪು ಅವರ ಮಾತುಗಳು ಜನರನ್ನು ಎಚ್ಚರಿಸಬೇಕಾಗಿದೆ.

ವಾಚಕರ ವಾಣಿ

ಏನು ಸಂದೇಶ ನೀಡುತ್ತೀರಿ?

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ ಸಂದರ್ಭದಲ್ಲಿ, ಐದು ಪ್ರತಿಜ್ಞೆಗಳನ್ನು ಕೈಗೊಳ್ಳುವಂತೆ ಜನರಿಗೆ ಪ್ರಧಾನಿ ಕರೆ ನೀಡಿದ್ದರಲ್ಲಿ, ನಾರಿ ಶಕ್ತಿಗೆ ಬಲ ಹಾಗೂ ಲಿಂಗ ಸಮಾನತೆಗೆ ಒತ್ತು ನೀಡುವುದೂ ಸೇರಿವೆ. ಆದರೆ ಮನುಕುಲದ ಅತ್ಯಂತ ಅನಾಗರಿಕ ಕೃತ್ಯವಾದ, ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಅಪರಾಧಿಗಳನ್ನು ಗುಜರಾತ್ ಸರ್ಕಾರವು ಕ್ಷಮಾಪಣಾ ನೀತಿ ಅನ್ವಯ ಬಿಡುಗಡೆ ಮಾಡಿರುವುದು ವಿಪರ್ಯಾಸ. ಇದೇ ಏನು ನಾರಿ ಶಕ್ತಿಗೆ ನೀಡುವ ಪುರಸ್ಕಾರ?

ಸ್ವಾತಂತ್ರ್ಯ ದಿನಾಚರಣೆಯ ಸಮಯದಲ್ಲಿ ಕೆಲವು ಅಪರಾಧಿಗಳನ್ನು ಜೈಲಿನಿಂದ ಬಿಡುಗಡೆ ಮಾಡುವುದು ಸಹಜ. ಅದಕ್ಕೆ ಅನಿರೀಕ್ಷಿತ, ಆಕಸ್ಮಿಕ, ಕ್ಷುಲ್ಲಕ ಕಾರಣ, ಕೋಪ, ಆವೇಶದಿಂದ ಮಾಡಿದ ಅಥವಾ ಮಾಡಿಲ್ಲದ ತಪ್ಪಿಗಾಗಿ ಶಿಕ್ಷೆ ಅನುಭವಿಸುತ್ತಿರುವ, ಸನ್ನಡತೆಯುಳ್ಳ ಯಾರೂ ಇರಲಿಲ್ಲವೇ? ಅತ್ಯಾಚಾರ ಎಂಬುದು, ತಪ್ಪು ಎಂದು ಗೊತ್ತಿದ್ದೂ ಮಾಡುವ ಪುರುಷ ಅಹಂಕಾರದ ಅತಿಹೀನ ಹಾಗೂ ಪೈಶಾಚಿಕ ಕೃತ್ಯವಾಗಿದೆ. ಇಂತಹ ಅಪರಾಧಿಗಳನ್ನು ಹೇಗೆ ಬಿಡುಗಡೆಗೊಳಿಸಿದಿರಿ? ಇದರಿಂದ ಸಮಾಜಕ್ಕೆ ಏನು ಸಂದೇಶ ನೀಡುತ್ತೀರಿ?

ಸುವರ್ಣ ಸಿ.ಡಿ., ತರೀಕೆರೆ

ಆರ್ಥಿಕ ಬುನಾದಿ ಬಲವಾಗಲಿ

ರಾಜ್ಯ ಸರ್ಕಾರವು ಎಲ್ಲಾ ಇಲಾಖೆಗಳ ಹುದ್ದೆಗಳಲ್ಲಿ ಕ್ರೀಡಾಪಟುಗಳಿಗೆ ಶೇಕಡ 2ರಷ್ಟು ಮೀಸಲಾತಿ ಕಲ್ಪಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ಪ್ರತಿಷ್ಠಿತ ಕ್ರೀಡಾಕೂಟಗಳಲ್ಲಿ ಪದಕ ಗೆದ್ದ ನಂತರ ಬಹುಮಾನ, ನೌಕರಿ ನೀಡುವುದು ರೂಢಿಯಾಗಿದೆ. ಅದರ ಬದಲು, ತರಬೇತಿ ಹಂತದಲ್ಲಿರುವಾಗಲೇ ನೌಕರಿಯಲ್ಲಿ ಮೀಸಲಾತಿ ನೀಡಿದರೆ ಕ್ರೀಡಾಪಟುಗಳಿಗೆ ಆರ್ಥಿಕವಾಗಿ ಭದ್ರ ಬುನಾದಿ ದೊರಕುತ್ತದೆ. ಇದರಿಂದ ಅವರು ಕ್ರೀಡೆಯ ಬಗ್ಗೆ ಹೆಚ್ಚು ಗಮನಹರಿಸಲು ಸಹಕಾರಿಯಾಗುತ್ತದೆ.

ರಾಸುಮ ಭಟ್, ಚಿಕ್ಕಮಗಳೂರು

ಸಾಮಾಜಿಕ ನೆಮ್ಮದಿಗೆ ಭಂಗ ತರುವ ನಡೆ

ಶಿವಮೊಗ್ಗದಲ್ಲಿ ಸಾಮಾಜಿಕ ಶಾಂತಿ ಮತ್ತು ನೆಮ್ಮದಿಗೆ ಮತ್ತೆ ಮತ್ತೆ ಭಂಗ ಉಂಟಾಗುತ್ತಿದೆ. ಪರಿಣಾಮವಾಗಿ, ಅಂದಂದೇ ದುಡಿದು ಉಣ್ಣುವ ಅಲ್ಲಿನ ಬಡಜೀವಗಳ ದೈನಂದಿನ ಬದುಕು ಮತ್ತಷ್ಟು ದುರ್ಭರವಾಗುತ್ತಿದೆ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಒಂದೆರಡು ಒಳ್ಳೆಯ ಮಾತನಾಡಿ, ಶಾಂತಿ ಕಾಪಾಡುವಲ್ಲಿ ಜನಪ್ರತಿನಿಧಿಗಳ ಪಾತ್ರ ತುಂಬ ದೊಡ್ಡದು. ಆದರೆ ಕೆಲವು ರಾಜಕಾರಣಿಗಳು ಅಂಥ ಹೊಣೆ ಹೊರುವ ಬದಲು, ಪ್ರಚೋದನಕಾರಿ ಮಾತುಗಳನ್ನು ಆಡುತ್ತಿರುವುದು ಅವರ ಹೊಣೆಗೇಡಿತನವಲ್ಲವೇ? ನಮ್ಮ ದೇಶ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆಯು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದ ಹೊತ್ತಿನಲ್ಲಿ ನಮ್ಮನ್ನು ತುಂಬ ಗಂಭೀರವಾಗಿ ಕಾಡುತ್ತಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸಾವರ್ಕರ್ ಮತ್ತು ಕರಿನೀರಿನ ಶಿಕ್ಷೆ

ಸ್ವಾತಂತ್ರ್ಯ ಹೋರಾಟಗಾರನಲ್ಲವಾದರೆ ಸಾವರ್ಕರ್‌ಗೆ ಕರಿನೀರಿನ ಶಿಕ್ಷೆ ಆದುದು ಯಾಕೆ ಎಂದು ಅನೇಕರು ಕೇಳುತ್ತಿದ್ದಾರೆ. ಸಾವರ್ಕರ್‌ಗೆ ಶಿಕ್ಷೆಯಾಗಲು ಕಾರಣ 1909ರಲ್ಲಿ ನಾಸಿಕ್‌ನಲ್ಲಿ ನಡೆದ ಒಂದು ಹತ್ಯಾ ಪ್ರಕರಣ. ಅಲ್ಲಿ ಜಾಕ್ಸನ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಈ ಕೊಲೆಗೆ ಬಳಸಿದ್ದು ಸಾವರ್ಕರ್ ಅವರು ಬ್ರಿಟನ್ನಿನಿಂದ ಕಳಿಸಿದ್ದ ಪಿಸ್ತೂಲ್ ಎಂಬ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಿ ಭಾರತದಲ್ಲಿ ವಿಚಾರಣೆ ನಡೆಸಿ, ಜೀವಾವಧಿ ಶಿಕ್ಷೆ ವಿಧಿಸಿ ಅಂಡಮಾನ್ ಜೈಲಿಗೆ ಕಳಿಸಲಾಗಿತ್ತು.

ಶ್ರೀನಿವಾಸ ಕಾರ್ಕಳ, ಮಂಗಳೂರು

ಕಾಶ್ಮೀರದಲ್ಲಿ ಪಂಡಿತರ ಜೀವಕ್ಕೆ ರಕ್ಷಣೆ ನೀಡಿ

ಜಮ್ಮು- ಕಾಶ್ಮೀರದಲ್ಲಿ ಉಗ್ರರ ಗುಂಡಿನ ದಾಳಿಯಿಂದ ಕಾಶ್ಮೀರಿ ಪಂಡಿತರೊಬ್ಬರು ಸಾವಿಗೀಡಾಗಿರುವುದು ಕಳವಳಕಾರಿ. ಈಚೆಗಷ್ಟೇ ಲಾಹೋರ್‌ನಲ್ಲಿ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡಿದ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಭಾರತದ ವಿದೇಶಾಂಗ ನೀತಿಯನ್ನು ಕೊಂಡಾಡುವುದರೊಂದಿಗೆ, 'ಭಾರತ ಸರ್ಕಾರವು ವಿದೇಶಿ ಒತ್ತಡಗಳಿಗೆ ಬಗ್ಗದೆ ತನ್ನ ಜನರ ಅಗತ್ಯಕ್ಕೆ ತಕ್ಕಂತೆ ಒಂದಿಷ್ಟು ಸದೃಢ ವಿದೇಶಾಂಗ ನೀತಿಯನ್ನು ರೂಪಿಸಿಕೊಂಡಿದೆ. ಭಾರತಕ್ಕೆ ಇದು ಸಾಧ್ಯವಾಗುವುದಾದರೆ ಪಾಕಿಸ್ತಾನಕ್ಕೆ ಏಕೆ ಸಾಧ್ಯವಿಲ್ಲ?' ಎಂದಿರುವುದು ಗಮನಾರ್ಹವಾಗಿದೆ. ಪಾಕಿಸ್ತಾನಕ್ಕೂ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ತನ್ನ ಪಾಪದ ಕೂಸಾಗಿ ಬೆಳೆಸಿದ ಭಯೋತ್ಪಾದಕತೆ ಎನ್ನುವ ಭಸ್ಮಾಸುರನಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲಾರದ ಹಂತಕ್ಕೆ ಬಂದು ನಿಂತಿದೆ. ಪಾಕ್ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ ಅಂತರರಾಷ್ಟ್ರೀಯ ಸಮುದಾಯ ಇನ್ನಷ್ಟು ಗಟ್ಟಿಯಾಗಿ ಸೆಟೆದು ನಿಲ್ಲುವಂತೆ ಭಾರತ ನೋಡಿಕೊಳ್ಳಬೇಕು.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ನಾಟಾ ಪರೀಕ್ಷೆ: ಆತಂಕ ನಿವಾರಣೆಯಾಗಲಿ

ಕರ್ನಾಟಕದ ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಬಿ.ಆರ್ಕ್ ಕೋರ್ಸುಗಳಿಗೆ ನಾಟಾ (NATA) ಪ್ರವೇಶ ಪರೀಕ್ಷೆಯ ಅಂಕಗಳನ್ನು ಪಿಯು ಅಂಕಗಳೊಂದಿಗೆ ಪರಿಗಣಿಸಲಾಗುತ್ತದೆ. ನಾಟಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತನ್ನ ಜಾಲತಾಣದಲ್ಲಿ ನೀಡಿರುವ ಲಿಂಕ್‌ನಲ್ಲಿ ವಿದ್ಯಾರ್ಥಿಗಳು ಅಪ್‌ಲೋಡ್ ಮಾಡಬೇಕಿರುತ್ತದೆ. ಇತ್ತೀಚೆಗೆ ನಾಟಾ ಪರೀಕ್ಷೆಯ ಅಂತಿಮ ಹಂತದ ಫಲಿತಾಂಶ ಪ್ರಕಟವಾಗಿದ್ದು, ಅಂಕಗಳನ್ನು ಅಪ್‌ಲೋಡ್ ಮಾಡಲು ಹೋದರೆ, ಪ್ರಾಧಿಕಾರದ ಲಿಂಕ್ ಕೆಲಸ ಮಾಡುತ್ತಿಲ್ಲ. ಪ್ರಾಧಿಕಾರದ ಕಚೇರಿಗೆ ಕರೆ ಮಾಡಿ ಕೇಳಿದರೆ ಸ್ಪಷ್ಟವಾಗಿ ಏನನ್ನೂ ಹೇಳುತ್ತಿಲ್ಲ. ಇದರಿಂದ ಮಕ್ಕಳು ಆತಂಕಕ್ಕೆ ಒಳಗಾಗುತ್ತಿದ್ದಾರೆ. ದಯಮಾಡಿ ಪ್ರಾಧಿಕಾರವು ಲಿಂಕ್ ಅನ್ನು ಆದಷ್ಟು ಬೇಗ ಸರಿಪಡಿಸಲಿ ಅಥವಾ ಲಿಂಕ್ ಅನ್ನು ಯಾವಾಗ ತೆರೆಯಲಾಗುತ್ತದೆ ಎಂಬುದನ್ನು ಅಧಿಕೃತ ಸುತ್ತೋಲೆ ಮೂಲಕ ತಿಳಿಸಿ, ಮಕ್ಕಳ ಆತಂಕವನ್ನು ನಿವಾರಣೆ ಮಾಡಲಿ.

ಡಾ. ಬಿ.ಆರ್. ಸತ್ಯನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಲಂಕಾ ತಟದಲ್ಲಿ ಚೀನಾ ಸೇನಾ ಹಡಗು



ಪ್ರಜಾವಾಣಿ ವಾರ್ತೆ

ಚೀನಾ ನೌಕಾಪಡೆಯ ಹಡಗು, 'ಯುವಾನ್ ವಾಂಗ್‌-5' ಶ್ರೀಲಂಕಾದ ಹಂಬಂಟೋಟ ಬಂದರಿನಲ್ಲಿ ಲಂಗರು ಹಾಕಿದೆ. ಇದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಚೀನಾದ ಹಡಗು ಲಂಗರು ಹಾಕಲು ತನ್ನ ಜಾಗದಲ್ಲಿ ಅವಕಾಶ ಮಾಡಿಕೊಟ್ಟ ಶ್ರೀಲಂಕಾದ ಎದುರು ಭಾರತವು ಪ್ರತಿಭಟನೆ ದಾಖಲಿಸಿದೆ. 'ಭಾರತದ ಭದ್ರತೆಗೆ ಈ ಬೆಳವಣಿಗೆಯಿಂದ ಧಕ್ಕೆಯಾಗಲಿದೆ' ಎಂದು ವಿದೇಶಾಂಗ ಸಚಿವಾಲಯವು ಹೇಳಿದೆ. ಆದರೆ, ಅದನ್ನು ಎದುರಿಸಲೂ ಭಾರತ ಸಿದ್ಧವಿದೆ ಎಂದು ಹೇಳಿದೆ. ಈ ಬೆಳವಣಿಗೆಯು ಮೂರೂ ದೇಶಗಳ ನಡುವೆ ವಾಗ್ವಾದಕ್ಕೆ ಕಾರಣವಾಗಿದೆ ಮತ್ತು ವಾತಾವರಣವನ್ನು ಬಿಸಿಯಾಗಿಸಿದೆ.



ಯುವಾನ್ ವಾಂಗ್‌–5ನ ರೇಡಾರ್

'ಯುವಾನ್ ವಾಂಗ್‌-5' ಹಡಗು ಅತ್ಯಾಧುನಿಕ ಆ್ಯಂಟೆನಾಗಳು ಮತ್ತು ರೇಡಾರ್‌ಗಳನ್ನು ಹೊಂದಿರುವ ಪ್ರಬಲ ಸಂಶೋಧನಾ ಹಡಗು. 'ಇದನ್ನು ಸಮುದ್ರ ಮಾರ್ಗ, ಸಮುದ್ರದ ಸರ್ವೇಕ್ಷಣೆ ಮತ್ತು ಸಂಶೋಧನೆಗೆ ಬಳಸುತ್ತೇವೆ' ಎಂದು ಚೀನಾ ವಿದೇಶಾಂಗ ಸಚಿವಾಲಯ ಹೇಳಿದೆ. ಆದರೆ, ಇದು ಬಹು ಬಳಕೆಯ ನೌಕೆಯಾಗಿದ್ದು, ಶತ್ರುದೇಶಗಳ ಕ್ಷಿಪಣಿ ಪರೀಕ್ಷೆಗಳು ಮತ್ತು ರಾಕೆಟ್‌ಗಳ ಉಡಾವಣೆಯ ಮೇಲೆ ಗೂಢಚರ್ಯೆ ನಡೆಸಲು ಬಳಸಲಾಗುತ್ತಿದೆ ಎಂದು ಭಾರತವು ಆರೋಪಿಸಿದೆ.


ಯುವಾನ್ ವಾಂಗ್‌-5 ಹಡಗು ತಾನು ಇರುವಲ್ಲಿಂದ 750 ಕಿ.ಮೀ. ವ್ಯಾಪ್ತಿಯ ವೃತ್ತದಲ್ಲಿನ ಎಲ್ಲಾ ವಿದ್ಯಮಾನಗಳ ಮೇಲೂ ಗೂಢಚರ್ಯೆ ನಡೆಸುವ ಸಾಮರ್ಥ್ಯ ಹೊಂದಿದೆ ಎನ್ನಲಾಗಿದೆ. ಈ ಹಡಗು ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದ ಪ್ರಮುಖ ಬಂದರುಗಳ ಮೇಲೆ ಗೂಢಚರ್ಯೆ ನಡೆಸಲು ಸಾಧ್ಯವಾಗುವಂತಹ ಸ್ಥಳದಲ್ಲಿ ಲಂಗರು ಹಾಕಿದೆ. ಚೀನಾದ ಈ ಹಡಗು ಗೂಢಚರ್ಯೆ ನಡೆಸಿದ್ದೇ ಆದಲ್ಲಿ, ದಕ್ಷಿಣ ಭಾರತದ ಕರಾವಳಿಯಲ್ಲಿ ನಡೆಯುವ ಸೇನೆಯ ಎಲ್ಲಾ ಚಟುವಟಿಕೆಗಳ ವಿವರ ಚೀನಾಗೆ ಲಭ್ಯವಾಗುತ್ತದೆ ಎಂಬ ಆತಂಕ ವ್ಯಕ್ತವಾಗಿದೆ. ಈ ಕಾರಣದಿಂದಲೇ ಭಾರತವು ಈ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು. ಅಮೆರಿಕವೂ ಈ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

'ಮುತ್ತಿನ ಮಾಲೆ'

ಮಧ್ಯಪ್ರಾಚ್ಯ, ಆಫ್ರಿಕಾ ದೇಶಗಳಿಂದ ಆಗ್ನೇಯ ಏಷ್ಯಾದತ್ತ ಸಾಗುವ ಬಹುತೇಕ ಹಡಗುಗಳು ಮಲಕ್ಕಾ ಜಲಸಂಧಿಯನ್ನು ಬಳಸುತ್ತವೆ. ಇದು ವಿಶ್ವದ ಅತ್ಯಂತ ದಟ್ಟಣೆಯ ಸಮುದ್ರಮಾರ್ಗವಾಗಿದೆ. ವಿಶ್ವದಲ್ಲಿ ವರ್ಷವೊಂದರಲ್ಲಿ ಸಾಗುವ ಒಟ್ಟು ಹಡಗುಗಳಲ್ಲಿ, ಶೇ 40ರಷ್ಟು ಹಡಗುಗಳು ಈ ಮಾರ್ಗವನ್ನೇ ಬಳಸುತ್ತವೆ.

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ದೇಶಗಳಿಗೆ ಕಚ್ಚಾತೈಲ ಪೂರೈಕೆಯಾಗುವ ಅತ್ಯಂತ ಮಹತ್ವದ ಹಾಗೂ ಏಕೈಕ ಸಮುದ್ರಮಾರ್ಗವಿದು. ಅದೇ ರೀತಿ ಮಧ್ಯಪ್ರಾಚ್ಯ, ಆಫ್ರಿಕಾ ಮತ್ತು ಯೂರೋಪ್‌ನ ದೇಶಗಳಿಗೆ ಆಗ್ನೇಯ ಏಷ್ಯಾದಿಂದ ಮಸಾಲೆ ಪದಾರ್ಥಗಳು, ಜವಳಿ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಹೊತ್ತ ಹಡಗುಗಳು ಸಾಗುವುದು ಇದೇ ಮಾರ್ಗದಲ್ಲಿ. ಚೀನಾವು ಪ್ರಾಬಲ್ಯ ಸಾಧಿಸಿರುವ 'ದಕ್ಷಿಣ ಚೀನಾ ಸಮುದ್ರ'ವೂ ಇದೇ ಮಾರ್ಗದಲ್ಲಿ ಬರುತ್ತದೆ. ಈ ಮಾರ್ಗದಲ್ಲಿ ಇರುವ ಪ್ರಮುಖ ಬಂದರುಗಳಲ್ಲಿ ಚೀನಾವು ತನ್ನ ಸೇನಾ ನೆಲೆಗಳನ್ನು ಸ್ಥಾಪಿಸುವ ಯೋಜನೆಗೆ 'ಸ್ಟ್ರಿಂಗ್ ಆಫ್ ಪರ್ಲ್ಸ್' (ಮುತ್ತಿನ ಮಾಲೆ) ಎಂದು ಹೆಸರಿಟ್ಟಿತ್ತು. ಈ ಬಂದರುಗಳಲ್ಲಿ ಸೇನಾ ನೆಲೆ ಸ್ಥಾಪನೆಯಾದ ಬಂದರುಗಳನ್ನು 'ಪರ್ಲ್' ಎಂದು ಪರಿಗಣಿಸಲಾಗುತ್ತದೆ. ಈ ಬಂದರುಗಳ ಮಧ್ಯ ಸಂಪರ್ಕ ಕಲ್ಪಿಸುವ ಸಮುದ್ರ ಮಾರ್ಗವನ್ನು 'ಸ್ಟ್ರಿಂಗ್' ಎಂದು ಕರೆಯಲಾಗುತ್ತದೆ.

'ಚೀನಾದ ಮುತ್ತಿನ ಮಾಲೆ ಅಸ್ತಿತ್ವಕ್ಕೆ ಬರುವುದರಿಂದ ಮುಕ್ತ ಮತ್ತು ಸ್ವತಂತ್ರ ಸಮುದ್ರಯಾನಕ್ಕೆ ಧಕ್ಕೆಯಾಗಲಿದೆ. ಇದರಿಂದ ಜಾಗತಿಕ ವಾಣಿಜ್ಯ ವಹಿವಾಟಿಗೆ ಅಡಚಣೆಯಾಗುತ್ತದೆ' ಎಂಬ ಕಳವಳ ವ್ಯಕ್ತವಾಗಿದೆ. ಈ ಮಾರ್ಗದ ಅತ್ಯಂತ ಪ್ರಮುಖ ಜಲಸಂಧಿಯಾದ ಮಲಕ್ಕಾವನ್ನು ಚೀನಾ ತನ್ನ ನಿಯಂತ್ರಣಕ್ಕೆ ಪಡೆದರೆ, ವಿಶ್ವದ ಶೇ 40ಕ್ಕಿಂತಲೂ ಹೆಚ್ಚು ವಾಣಿಜ್ಯ ವಹಿವಾಟು ಅದರ ನಿಯಂತ್ರಣಕ್ಕೆ ಬರುತ್ತದೆ. ಹೀಗಾಗಿಯೇ ಚೀನಾದ ಈ ಯತ್ನವನ್ನು ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯ ಪ್ರಬಲವಾಗಿ ವಿರೋಧಿಸುತ್ತಿವೆ. ಜತೆಗೆ ಚೀನಾದ ಪ್ರಾಬಲ್ಯವನ್ನು ನಿಯಂತ್ರಿಸುವ ಸಲುವಾಗಿ ಕ್ವಾಡ್ ಒಕ್ಕೂಟವನ್ನು ರಚಿಸಿಕೊಂಡಿವೆ.



ತಂತ್ರಕ್ಕೆ ಸಿಲುಕಿತೇ ಲಂಕಾ...

'ಶ್ರೀಲಂಕಾವು ಮೊದಲಿನಿಂದಲೂ ಚೀನಾದ ಸ್ಟ್ರಿಂಗ್ ಆಫ್ ಪರ್ಲ್ಸ್ ಯೋಜನೆಯ ಭಾಗವಾಗಿಯೇ ಇತ್ತು. ಭಾರತದ ಆಕ್ಷೇಪದ ಆತಂಕವಿದ್ದ ಕಾರಣ, ಚೀನಾವು ಈ ವಿಷಯವನ್ನು ಬಹಿರಂಗಪಡಿಸಿರಲಿಲ್ಲ. ಆದರೆ, ಶ್ರೀಲಂಕಾದಲ್ಲಿ ತನ್ನ ಸೇನಾ ನೆಲೆಯನ್ನು ಸ್ಥಾಪಿಸುವ ಕಾರ್ಯಸೂಚಿಯನ್ನು ರಹಸ್ಯವಾಗಿ ಅನುಷ್ಠಾನಕ್ಕೆ ತರಲು ಕಾರ್ಯಪ್ರವೃತ್ತವಾಗಿತ್ತು' ಎಂದು ಅಮೆರಿಕದ ಸೇನೆಯ 'ಸ್ಟ್ರಿಂಗ್ ಆಫ್ ಪರ್ಲ್ಸ್' ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ. 2006ರಲ್ಲೇ ಸಿದ್ಧಪಡಿಸಿದ್ದ ಈ ವರದಿಯ ಪರಿಷ್ಕೃತ ಆವೃತ್ತಿಯನ್ನು ಅಮೆರಿಕವು ಈಚೆಗೆ ಬಿಡುಗಡೆ ಮಾಡಿತ್ತು.

'ಬಾಂಗ್ಲಾದೇಶದ ಢಾಕಾ ಬಂದರು ಮತ್ತು ಪಾಕಿಸ್ತಾನದ ಗ್ವಾಡಾರ್ ಬಂದರುಗಳನ್ನು ಅಭಿವೃದ್ಧಿಪಡಿಸುವ ಸಂಬಂಧ, 90ಕ್ಕೂ ಹೆಚ್ಚು ವರ್ಷಗಳ ಅವಧಿಗೆ ಅವುಗಳನ್ನು ಚೀನಾ ಭೋಗ್ಯಕ್ಕೆ ಪಡೆದಿದೆ. ಈ ಬಂದರುಗಳನ್ನು ಅಭಿವೃದ್ಧಿಪಡಿಸಿ, ಅಲ್ಲಿ ತನ್ನ ಎಲ್ಲಾ ಸ್ವರೂಪದ ಹಡಗುಗಳನ್ನು ಇರಿಸುವ ಮತ್ತು ತುರ್ತು ಸಂದರ್ಭದಲ್ಲಿ ಸೈನಿಕರನ್ನು ನಿಯೋಜನೆ ಮಾಡುವ ಹಕ್ಕನ್ನು ಚೀನಾ ಪಡೆದುಕೊಂಡಿದೆ. ಇಲ್ಲಿ ಭದ್ರತೆ ನೆಪದಲ್ಲಿ ಸೈನಿಕರನ್ನು ನಿಯೋಜನೆ ಮಾಡಲಾಗಿದೆ. ಇದೇ ತಂತ್ರವನ್ನು ಶ್ರೀಲಂಕಾದಲ್ಲೂ ಬಳಸಲಾಗುತ್ತದೆ' ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಶ್ರೀಲಂಕಾಕ್ಕೆ ಚೀನಾವು ಅಪಾರ ಪ್ರಮಾಣದ ಸಾಲ ನೀಡಿದೆ. ಸಾಲ ತೀರಿಸಲಾಗದ ಶ್ರೀಲಂಕಾ ಸರ್ಕಾರವು ಬದಲಿಯಾಗಿ, ತನ್ನ ಹಂಬಂಟೋಟ ಬಂದರನ್ನು 99 ವರ್ಷಗಳ ಅವಧಿಗೆ ಚೀನಾದ ಸುಪರ್ದಿಗೆ ನೀಡಿದೆ. ಹಂಬಂಟೋಟ ಬಂದರು ಈಗ ಚೀನಾದ ಖಾಸಗಿ ಕಂಪನಿಯ ನಿಯಂತ್ರಣದಲ್ಲಿ ಇದೆ. ಹಾಗಾಗಿ ಈ ಬಂದರಿನಲ್ಲಿ ನಡೆಯುವ ಚಟುವಟಿಕೆಗಳ ಮೇಲೂ ಶ್ರೀಲಂಕಾಕ್ಕೆ ಸಂಪೂರ್ಣ ನಿಯಂತ್ರಣ ಇರುವುದಿಲ್ಲ.

ನಿಲುವು ಬದಲು

ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ದ್ವೀಪರಾಷ್ಟ್ರ ಶ್ರೀಲಂಕಾ, ಅನುಕೂಲಗಳನ್ನು ಲೆಕ್ಕಾಚಾರ ಹಾಕಿಯೇ ತನ್ನ ನಿಲುವನ್ನು ಬದಲಿಸಿಕೊಂಡಿದೆ. ಮೊದಲಿಗೆ, ಭಾರತದಿಂದ ಆಕ್ಷೇಪ ಎದುರಾಗುತ್ತಿದ್ದಂತೆಯೇ ಎಚ್ಚೆತ್ತಿದ್ದ ಶ್ರೀಲಂಕಾ, ಹಂಬಂಟೋಟ ಬಂದರಿಗೆ ಚೀನಾ ನೌಕೆ ಬರುವುದನ್ನು ತಡೆದಿತ್ತು. ಇದಕ್ಕೆ ಚೀನಾದಿಂದ ಆಕ್ಷೇಪ ವ್ಯಕ್ತವಾಯಿತು. ಹೀಗಾಗಿ, ಚೀನಾ ಜೊತೆ ಆಂತರಿಕ ಮಾತುಕತೆಗೆ ಲಂಕಾ ಮುಂದಾಯಿತು. ಕೊನೆಗೆ, ಚೀನಾದ ನೌಕೆ ಲಂಗರು ಹಾಕಲು ಅನುಮತಿ ನೀಡುವುದಾಗಿ ಪ್ರಕಟಿಸಿತು. ಕೆಲವು ದಿನಗಳ ಬಳಿಕ ಅಂದರೆ, ಆಗಸ್ಟ್ 11ರ ಬದಲು ಆಗಸ್ಟ್ 16ರಂದು ಲಂಗರು ಹಾಕುವಲ್ಲಿ ಯುವಾನ್ ವಾಂಗ್ ನೌಕೆ ಯಶಸ್ವಿಯಾಯಿತು. ನೆರೆಯ ಭಾರತವೊಂದೇ ಮುಖ್ಯವಲ್ಲ, ಎಲ್ಲ ದೇಶಗಳ ನೆರವೂ ತನಗೆ ಬೇಕು ಎಂಬ ಉದ್ದೇಶ ಲಂಕಾದ ನಿರ್ಧಾರದಲ್ಲಿ ಎದ್ದು ಕಾಣುತ್ತಿದೆ. 'ಹಂಬಂಟೋಟ ಬಂದರಿನಲ್ಲಿ ಲಂಗರು ಹಾಕಲು ಅಮೆರಿಕ, ಜಪಾನ್ ದೇಶಗಳ ನೌಕೆಗಳಿಗೂ ನಾವು ಅನುಮತಿ ನೀಡಿದ್ದೇವೆ' ಎಂದು ಲಂಕಾ ಹೇಳಿದೆ. ಈ ಹೇಳಿಕೆಯ ಮೂಲಕ, ಚೀನಾ ನೌಕೆಗೆ ಅನುಮತಿ ನೀಡಿದ್ದರಲ್ಲಿ ತಪ್ಪಿಲ್ಲ ಎಂದು ಶ್ರೀಲಂಕಾ ತನ್ನ ನಿಲುವನ್ನು ಬಲವಾಗಿ ಸಮರ್ಥಿಸಿಕೊಂಡಿದೆ.

ಎಲ್ಲ ದೇಶಗಳ ಜೊತೆ ಸಹಕಾರ ಹಾಗೂ ಸ್ನೇಹ ಕಾಯ್ದುಕೊಳ್ಳುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಶ್ರೀಲಂಕಾ ಸ್ಪಷ್ಟಪಡಿಸಿದೆ. ದೇಶ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದ ಸಂದರ್ಭದಲ್ಲಿ ನೆರವು ನೀಡಿದ ಎಲ್ಲ ದೇಶಗಳನ್ನು ಸ್ಮರಿಸುತ್ತೇವೆ ಎಂದು ಶ್ರೀಲಂಕಾದ ವಿದೇಶಾಂಗ ಸಚಿವಾಲಯ ತಿಳಿಸಿದೆ. ಚೀನಾದಿಂದ ಭಾರಿ ಪ್ರಮಾಣದ ಸಾಲ ಪಡೆದಿರುವ ಶ್ರೀಲಂಕಾ, ಚೀನಾ ಒತ್ತಡಕ್ಕೆ ಮಣಿದು ಭಾರತದ ಆಕ್ಷೇಪವನ್ನು ಗಾಳಿಗೆ ತೂರಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ವರಸೆ ಬದಲಿಸಿದ ಚೀನಾ

ಒಂದಿಷ್ಟು ದಿನದ ವಿಳಂಬದ ಬಳಿಕ ಹಂಬಂಟೋಟ ಬಂದರಿನಲ್ಲಿ ಲಂಗರು ಹಾಕಲು ಶ್ರೀಲಂಕಾದ ಅನುಮತಿ ಸಿಗುತ್ತಿದ್ದಂತೆಯೇ ಚೀನಾದ ವರಸೆಯೇ ಬದಲಾಗಿದೆ. ಯುವಾನ್ ವಾಂಗ್ ನೌಕೆಯು ಹಂಬಂಟೋಟ ಬಂದರಿನಲ್ಲಿ ಇಂಧನ ಹಾಗೂ ಅಗತ್ಯವಸ್ತುಗಳ ಮರುಪೂರಣ ಮಾಡಲಿದೆ ಎಂದು ಚೀನಾ ಆರಂಭದಲ್ಲಿ ಪ್ರತಿಪಾದಿಸಿತ್ತು. ಆದರೆ, ಆಗಸ್ಟ್ 16ರಂದು ಬಂದರು ತಲುಪಿರುವ ನೌಕೆಯು, ಆಗಸ್ಟ್ 22ರವರೆಗೆ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಲಿದೆ ಎಂದು ಚೀನಾ ಹೇಳಿದೆ.

ಅಂತರರಾಷ್ಟ್ರೀಯ ಮಾನದಂಡಗಳ ಪ್ರಕಾರವೇ ಯುವಾನ್ ವಾಂಗ್ ನೌಕೆಯಲ್ಲಿ ವೈಜ್ಞಾನಿಕ ಸಂಶೋಧನೆಗಳು ನಡೆಯಲಿವೆ ಎಂದು ಚೀನಾ ವಿದೇಶಾಂಗ ಸಚಿವಾಲಯ ಹೇಳಿದ್ದು, ತನ್ನ ನೈಜ ಕಾರ್ಯಸೂಚಿಯನ್ನು ಬಹಿರಂಗಪಡಿಸಿದೆ. ಚೀನಾ ಗೂಢಚರ್ಯೆ ನಡೆಸುವ ಸಾಧ್ಯತೆಯಿದೆ ಎಂದು ಭಾರತದ ಮಾಧ್ಯಮಗಳು ಆತಂಕ ವ್ಯಕ್ತಪಡಿಸಿದ್ದವು. ಇಂಧನ ಹಾಗೂ ಅಗತ್ಯವಸ್ತುಗಳ ಮರುಪೂರಣ ಉದ್ದೇಶಕ್ಕಾಗಿ ಶ್ರೀಲಂಕಾದ ಹಂಬಂಟೋಟ ಬಂದರಿನಲ್ಲಿ ಕೆಲವು ದಿನ ಉಳಿಯಲು ಚೀನಾ ಅನುಮತಿ ಕೇಳಿತ್ತು. ಆದರೆ, ಲಂಗರು ಹಾಕುತ್ತಿದ್ದಂತೆಯೇ ಚೀನಾ ನಿಲುವು ಬದಲಾಗಿದೆ.

ಉನ್ನತ ತಂತ್ರಜ್ಞಾನ ಸವಲತ್ತುಗಳನ್ನು ಹೊಂದಿರುವ ಯುವಾನ್ ವಾಂಗ್ ನೌಕೆಯಿಂದ ಯಾವ ದೇಶದ ಭದ್ರತೆಗೂ ಅಪಾಯ ಎದುರಾಗುವುದಿಲ್ಲ ಎಂದು ಚೀನಾ ಭರವಸೆ ನೀಡಿದೆ. ಆದರೆ, ಮೂರನೇ ದೇಶದಿಂದ ಅಡ್ಡಿ ಎದುರಾಗುವುದನ್ನು ತಾನು ಒಪ್ಪುವುದಿಲ್ಲ ಎಂದು ಭಾರತ ಹಾಗೂ ಅಮೆರಿಕಕ್ಕೆ ಪರೋಕ್ಷ ಎಚ್ಚರಿಕೆ ನೀಡಿದೆ.


ಆರಂಭದಲ್ಲಿ, ನೌಕೆ ಲಂಗರು ಹಾಕಲು ಅನುಮತಿ ನೀಡುವುದನ್ನು ಶ್ರೀಲಂಕಾ ವಿಳಂಬ ಮಾಡಿತ್ತು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದ ಚೀನಾ, 'ಇದು ಸಂಪೂರ್ಣ ಅನ್ಯಾಯದಿಂದ ಕೂಡಿದೆ' ಎಂದು ಹೇಳಿತ್ತು. ಶ್ರೀಲಂಕಾ ಮೇಲೆ ಒತ್ತಡ ಹೇರಿ, ದ್ವೀಪರಾಷ್ಟ್ರದ ಆಂತರಿಕ ವಿಚಾರಗಳಲ್ಲಿ ಮಧ್ಯಪ್ರವೇಶಿಸುವ ದೇಶಗಳನ್ನು ಚೀನಾ ಟೀಕಿಸಿತ್ತು.

ಆಧಾರ: ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್, ಬಿಬಿಸಿ, ಪಿಟಿಐ, ಎಎಫ್‌ಪಿ, ಅಮೆರಿಕದ ಸೇನೆಯ 'ಸ್ಟ್ರಿಂಗ್ ಆಫ್ ಪರ್ಲ್ಸ್' ಅಧ್ಯಯನ ವರದಿ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಚೀನಾದ ಕಣ್ಗಾವಲು ನೌಕೆ ಯುವಾನ್ ವಾಂಗ್ ಶ್ರೀಲಂಕಾದ ಬಂದರಿನಲ್ಲಿ ನೆಲೆಗೊಂಡಿರುವುದನ್ನು ಭಾರತ ಗಂಭೀರವಾಗಿ ಪರಿಗಣಿಸಬೇಕೆ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 202

ಹಿಮವಂತನ ಒಪ್ಪಿಸಿದ ನಾರದ

'ಎಲೈ ಪರ್ವತರಾಜ, ನಿನ್ನ ಮಗಳು ಪಾರ್ವತಿಯನ್ನು ವರಿಸುವ ಹರನು ಅರ್ಧನಾರೀಶ್ವರನಾಗುವನು. ಇವಳು ತಪಸ್ಸಿನಿಂದ ಪರಮೇಶ್ವರನನ್ನು ಸಂತೋಷಗೊಳಿಸಿ ಅವನ ಅರ್ಧಶರೀರವನ್ನು ಪಡೆಯುವಳು. ಪಾರ್ವತಿಯು ತನ್ನ ತಪಸ್ಸಿನಿಂದ ಶಂಕರನನ್ನು ಪ್ರಸನ್ನಗೊಳಿಸಿ, ಚಿನ್ನದ ವರ್ಣದಂತೆ, ವಿದ್ಯುತ್ತಿನ ಬೆಳಕಿನಂತೆ ಹೊಳೆಯುವಳು. ಆಗ ಇವಳಿಗೆ ಗೌರೀ ಎಂಬ ಹೆಸರು ಬರುವುದು. ಎಲ್ಲಾ ದೇವತೆಗಳಿಗೂ ಇವಳು ಪೂಜ್ಯಳಾಗುವಳು. ನಿನ್ನ ಪುತ್ರಿಯನ್ನು ಹರನಿಗೆ ಹೊರತು ಇನ್ನಾರಿಗೂ ಕೊಡಕೂಡದು. ಇದು ಅತಿ ರಹಸ್ಯವಾದ ವಿಷಯ' ಎಂದು ನಾರದ ಎಚ್ಚರಿಸಿದ.

ನಾರದನ ಮಾತನ್ನು ಕೇಳಿದ ಹಿಮವಂತ 'ನಾರದಮುನಿಯೆ, ಮಹಾದೇವನು ವಿರಕ್ತನಾಗಿ ತಪಸ್ಸನ್ನಾಚರಿಸುತ್ತಿದ್ದಾನೆ. ದೇವತೆಗಳಿಗೂ ಅವನು ಗೋಚರಿಸುತ್ತಿಲ್ಲ ಎಂದು ಕೇಳಿದ್ದೇನೆ. ಹೀಗಿರುವಾಗ ಶಿವನನ್ನು ಹೇಗೆ ಸಂಸಾರಮಾರ್ಗಕ್ಕೆ ತಿರುಗಿಸುವುದು? ಪರಬ್ರಹ್ಮ ವಸ್ತುವಿನಲ್ಲಿ ನೆಟ್ಟ ಮನಸ್ಸುಳ್ಳ ಶಿವನನ್ನು ಒಲಿಸಿಕೊಳ್ಳುವ ವಿಷಯದಲ್ಲಿ ನನಗೆ ತುಂಬಾ ಸಂಶಯವಿದೆ. ಬ್ರಹ್ಮವಸ್ತುವನ್ನೇ ಶಿವನು ಧ್ಯಾನಮಾರ್ಗದಲ್ಲಿ ಎಲ್ಲೆಲ್ಲಿಯೂ ನೋಡುವನು. ಹೊರಗಿನ ಮಿಕ್ಕ ಯಾವ ವಸ್ತುವನ್ನು ಸಹ ಅವನು ನೋಡುವುದಿಲ್ಲ. ಹೀಗೆಂದು ಕಿನ್ನರರಿಂದ ಕೇಳಿರುವೆ. ಇನ್ನೂ ಒಂದು ವಿಷಯವಿರುವುದು. ಶಿವನು ತನ್ನ ಮೇಲೆ ಆಣೆಯಿಟ್ಟುಕೊಂಡು ಸತಿದೇವಿಯ ಮುಂದೆ 'ದಾಕ್ಷಾಯಣಿ, ನಿನ್ನ ಹೊರತು ಇನ್ನಾರನ್ನೂ ನಾನು ಮದುವೆಯಾಗುವುದಿಲ್ಲ' ಎಂದು ಪ್ರತಿಜ್ಞೆ ಮಾಡಿದ್ದಾನೆ. ಹೀಗಾಗಿ ಸತೀದೇವಿಯು ದಕ್ಷಯಾಗದಲ್ಲಿ ಮೃತಳಾದ ಮೇಲೆ ಶಿವನು ಬೇರೆ ಸ್ತ್ರೀಯನ್ನು ಮದುವೆಯಾಗುವನೇನು?' ಎಂದು ಪ್ರಶ್ನಿಸಿದ.

ಆಗ ನಾರದ 'ಎಲೈ ಗಿರಿರಾಜ, ಈ ವಿಷಯದಲ್ಲಿ ನೀನು ಚಿಂತಿಸಬೇಕಾದುದಿಲ್ಲ' ನಿನ್ನ ಮಗಳು ಪಾರ್ವತಿಯೇ ಹಿಂದಿನ ಜನ್ಮದಲ್ಲಿ ದಕ್ಷಪುತ್ರಿಯಾದ ಸತೀದೇವೀ ಆಗಿದ್ದಳು. ಅವಳು ತಂದೆ ದಕ್ಷನಿಂದ ಯಜ್ಞದ ಸಂದರ್ಭದಲ್ಲಿ ಅವಮಾನವಾಗಿ, ಕೋಪದಿಂದ ಅಲ್ಲಿಯೇ ಶರೀರವನ್ನು ತ್ಯಜಿಸಿದಳು. ಆ ಸತೀದೇವಿಯೇ ಮತ್ತೆ ನಿಮ್ಮ ಮನೆಯಲ್ಲಿ ಪಾರ್ವತಿಯಾಗಿ ಜನಿಸಿದ್ದಾಳೆ. ಇವಳು ಶಿವನ ಮಡದಿಯಾಗುವಳು. ಇದರಲ್ಲಿ ಸಂಶಯವಿಲ್ಲ' ಎಂದು ಹಿಮವಂತನಿಗೆ ಪಾರ್ವತಿಯ ಪೂರ್ವಜನ್ಮದ ಚರಿತ್ರೆಯನ್ನು ಹಿಮವಂತನಿಗೆ ವಿಸ್ತಾರವಾಗಿ ಹೇಳಿದ. ಪಾರ್ವತೀ ಪೂರ್ವ ವೃತ್ತಾಂತವನ್ನು ಕೇಳಿ ಹಿಮವಂತನಿಗೆ ಸಮಾಧಾನವಾಯಿತು. ಆಗ ಯಾವ ಸಂಶಯವೂ ಇಲ್ಲದೆ, ಮಗಳು ಪಾರ್ವತಿಯನ್ನು ಶಿವನಿಗೆ ವಿವಾಹ ಮಾಡಿಕೊಡಲು ಒಪ್ಪಿಕೊಂಡ.


ತಂದೆ ಹಿಮವಂತ ಮತ್ತು ನಾರದರ ಸಂಭಾಷಣೆಯನ್ನು ಕೇಳಿಸಿಕೊಂಡ ಪಾರ್ವತಿಯು ಶಿವನನ್ನು ಪತಿಯಾಗಿ ಪಡೆಯುವ ತನ್ನ ಸೌಭಾಗ್ಯ ನೆನೆದು ಹರ್ಷಿತಳಾದಳು. ಜೊತೆಗೆ ಸ್ತ್ರೀಸಹಜ ಲಜ್ಜೆಯಿಂದ ತಲೆಬಗ್ಗಿಸಿ ನಿಂತಳು. ಮುಗ್ಧಮುಗುಳು ನಗೆಯೊಂದಿಗೆ ನಿಂತಿದ್ದ ಪಾರ್ವತಿಯ ಮುಂದಲೆಯನ್ನು ನೇವರಿಸಿದ ಹಿಮವಂತ, ಪ್ರೀತಿಯಿಂದ ತನ್ನ ಸಿಂಹಾಸನದಲ್ಲಿ ಅವಳನ್ನು ಕುಳ್ಳಿರಿಸಿಕೊಂಡ. ಆಗ ನಾರದ ಪಾರ್ವತಿಯತ್ತ ಮಂದಹಾಸ ಬೀರಿ, ಮೇನಾದೇವಿ ಮತ್ತು ಹಿಮವಂತ ದಂಪತಿಗೆ ಹೇಳಿದ, 'ಎಲೈ ಗಿರಿರಾಜ ದಂಪತಿಗಳೇ, ಈ ಸಿಂಹಾಸನದ ಅಪೇಕ್ಷೆಯು ಪಾರ್ವತಿಗಿಲ್ಲ' ಎಂದ.

ನಾರದನ ಉದಾರವಾದ ಮಾತುಗಳನ್ನು ಕೇಳಿ ಹಿಮವಂತ ಮತ್ತು ಮೇನಾದೇವಿಗೆ ಬಹಳ ಸಂತೋಷವಾಯಿತು. ಅಲ್ಲಿಂದ ಬೀಳ್ಕೊಂಡ ನಾರದ ಸ್ವರ್ಗಕ್ಕೆ ತೆರಳಿದರೆ, ಹಿಮವಂತ ಸಕಲ ಸಂಪತ್ತಿನಿಂದ ಕೂಡಿರುವ ತನ್ನ ಅಂತರ್ಗೃಹಕ್ಕೆ ತೆರಳಿದ ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯದಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದಲ್ಲಿ ಎಂಟನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಂಡಿತ್ ಜವಾಹರಲಾಲ್ ನೆಹರೂ ಅವರ ಕುರಿತಾಗಿ ಮೊಮ್ಮಗಳು ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಹೆಸರಿನಲ್ಲಿ ಮಾಡಲಾಗಿರುವ ಟ್ವೀಟ್‌ನ ಸ್ಕ್ರೀನ್‌ಶಾಟ್ ವೈರಲ್ ಆಗಿದೆ. 'ನನ್ನ ತಾತನ ಬಗ್ಗೆ ಒಂದು ಮೆಚ್ಚಿನ ಸಂಗತಿಯಿದೆ. ಪ್ರಧಾನಿಯಾಗಿದ್ದಾಗ ಒಮ್ಮೆ ಅವರು ಕೆಲಸ ಮುಗಿಸಿ ಮಧ್ಯರಾತ್ರಿ 3 ಗಂಟೆಗೆ ಮನೆಗೆ ಬಂದರು. ಆಗ ಅವರ ಕಾವಲುಗಾರ ಸುಸ್ತಾಗಿ ನಿದ್ರೆಗೆ ಜಾರಿದ್ದ. ಅವನ ಮೇಲೆ ಹೊದಿಕೆ ಹೊದಿಸಿದರು ಮತ್ತು ಅವನ ಹೆಂಡತಿ ಇದ್ದ ಕೋಣೆಗೆ ಹೋದರು' ಎಂಬ ವಿವರ ವೈರಲ್ ಆಗಿರುವ ಸ್ಕ್ರೀನ್‌ಶಾಟ್‌ನಲ್ಲಿದೆ.




Priyanka Gandhi Vadra
@priyankagandhi · Follow

My favourite story about my great-grandfather is the one about when as PM, he returned from work at 3 am to find his bodyguard exhausted and asleep on his bed. He covered him with a blanket and slept on an adjacent chair.

#JawaharlalNehru

ಇದು ಟ್ವೀಟ್‌ನ ತಿರುಚಲಾದ ಸ್ಕ್ರೀನ್‌ಶಾಟ್ ಎಂದು ಇಂಡಿಯಾ ಟುಡೇ ಮತ್ತು ದಿ ಕ್ವಿಂಟ್ ವೆಬ್‌ಸೈಟ್‌ಗಳು ವರದಿ ಮಾಡಿವೆ. 2021ರ ನವೆಂಬರ್ 14ರಂದು ಪ್ರಿಯಾಂಕಾ ಅವರು ನೆಹರೂ ಕುರಿತು ಟ್ವೀಟ್ ಮಾಡಿದ್ದರು. ಮೂಲ ಟ್ವೀಟ್‌ನಲ್ಲಿ, 'ಪ್ರಧಾನಿಯಾಗಿದ್ದಾಗ ಒಮ್ಮೆ ಅವರು ಕೆಲಸ ಮುಗಿಸಿ ಮಧ್ಯರಾತ್ರಿ 3 ಗಂಟೆಗೆ ಮನೆಗೆ ಬಂದರು. ಆಗ ಅವರ ಕಾವಲುಗಾರ ಸುಸ್ತಾಗಿ ನಿದ್ರೆಗೆ ಜಾರಿದ್ದ. ಅವನ ಮೇಲೆ ಹೊದಿಕೆ ಹೊದಿಸಿದರು. ಅವನ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಒರಗಿಕೊಂಡರು' ಎಂದಷ್ಟೇ ಇದೆ. ಕೊನೆಯ ಸಾಲನ್ನು 'ಅವನ ಹೆಂಡತಿ ಇದ್ದ ಕೋಣೆಗೆ ಹೋದರು' ಎಂಬುದಾಗಿ ತಿರುಚಿ, ಟ್ವೀಟ್‌ನ ಸ್ಕ್ರೀನ್‌ಶಾಟ್ ಸೃಷ್ಟಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ನಿರಹಂತೆ-ಮೋಕ್ಷ

ಶರಧಿಯನೀಜುವನು, ಸಮರದಲಿ ಕಾದುವನು |
ಗುರಿಯೊಂದನುಳಿದು ಪೆರತೊಂದ ನೋಡುವನೆ
? ||
ಮರೆಯುವನು ತಾನೆಂಬುದನೆ ಮಹಾವೇಶದಲಿ |
ನಿರಹಂತೆಯದು ಮೋಕ್ಷ – ಮಂಕುತಿಮ್ಮ || 696 ||

ಪದ-ಅರ್ಥ: ಶರಧಿಯನೀಜುವನು = ಶರಧಿಯನು-(ಸಮುದ್ರವನ್ನು) + ಈಜು ವನು, ಗುರಿಯೊಂದನು-ಳಿದು = ಗುರಿ + ಒಂದನು + ಉಳಿದು, ಪೆರತೊಂದ = ಬೇರೆಯದನ್ನು, ತಾನೆಂಬುದನೆ = ತಾನು + ಎಂಬುದನೆ, ಮಹಾವೇಶದಲಿ = ಮಹಾ + ಆವೇಶದಲ್ಲಿ, ನಿರಹಂತೆಯದು = ನಿರಹಂತೆ(ತಾನು ಎನ್ನುವ ಅಹಂಕಾರವಿಲ್ಲದ್ದು) + ಅದು.

ವಾಚ್ಯಾರ್ಥ: ಸಮುದ್ರವನ್ನು ಈಜುವವನು, ಯುದ್ಧದಲ್ಲಿ ಹೋರಾಡುವವನು ತನ್ನ ಮುಂದಿದ್ದ ಗುರಿಯೊಂದನ್ನು ಬಿಟ್ಟು ಬೇರೆ ಏನನ್ನಾದರೂ ಗಮನಿಸುವನೆ? ತಾನು ಎನ್ನುವುದನ್ನೇ ಆವೇಶದಲ್ಲಿ ಮರೆಯುತ್ತಾನೆ. ತಾನು ಎನ್ನುವ ಅಹಂಕಾರವನ್ನು ಕಳೆದದ್ದೇ ಮುಕ್ತಿ.

ವಿವರಣೆ: ಕಳೆದವಾರ ಅಂತರರಾಷ್ಟ್ರೀಯ ಪಂದ್ಯಾವಳಿಯಲ್ಲಿ ಭಾರತದ ಆಟಗಾರ್ತಿ ಫೈನಲ್ ಆಟ ಆಡಲು ಬಂದಾಗ ಕಾಲಿಗೆ ಪಟ್ಟಿ ಕಟ್ಟಿಕೊಂ-ಡಿದ್ದಳು. ಅದೊಂದು ತುರುಸಿನ ಆಟ. ಹೋರಾಟ ಬಂಗಾರದ ಪದಕಕ್ಕಲ್ಲವೆ? ಜಿದ್ದಾ ಜಿದ್ದಿ ಆಟ ನಡೆಯಿತು. ಮೊದಮೊದಲು ಸ್ವಲ್ಪ ನಿಧಾನವಾಗಿ, ಕಷ್ಟದಿಂದ ಆಡಿದಂತೆ ಕಂಡ ಆಟಗಾರ್ತಿ, ಆಟ ಮುಂದುವರೆದಂತೆ ತುಂಬ ಚುರುಕಾದಳು. ವೇಗದಿಂದ ದುಂಬಿಯಂತೆ, ಇಲ್ಲಿಂದಲ್ಲಿಗೆ, ಅಲ್ಲಿಂದಿಲ್ಲಿಗೆ ಹಾರಾಡುತ್ತ, ಎದುರಾಳಿಗೆ ಬೆವರಿಳಿಸಿದಳು. ಒಂದು ತಾಸಿನ ಮೇಲೆ ನಡೆದ ಹೋರಾಟದಲ್ಲಿ ಭಾರತದ ಹುಡುಗಿಗೆ ಬಂಗಾರದ ಪದಕ ಒಲಿಯಿತು. ಎಲ್ಲೆಲ್ಲೂ ನಗು, ಉತ್ಸಾಹ.

ಮುಂದೆ ಮೂರು ದಿನಗಳು ನಂತರ ವಾರ್ತೆ ಬಂದಿತು. ಈ ಹುಡುಗಿಗೆ ಪಾದದ ಒಂದು ಮೂಳೆ ಮುರಿದಿದೆ. ಆಕೆ ಮುಂದೆ ಎರಡು ತಿಂಗಳು ಯಾವ ಪಂದ್ಯಾವಳಿಯಲ್ಲೂ ಭಾಗವಹಿಸುವುದು ಸಾಧ್ಯವಿಲ್ಲ. ಆಕೆಯ ಕೋಚ್ ಹೇಳಿದರು, "ಆಕೆಗೆ ಪಂದ್ಯದ ಮೊದಲೇ ಈ ಪೆಟ್ಟಾಗಿತ್ತು. ಆಕೆ ಹೇಗೆ ಆಡುತ್ತಾಳೆ ಎಂಬುದು ನಮಗೂ ಚಿಂತೆಯಾಗಿತ್ತು". ಪಾದದಲ್ಲಿ ಮೂಳೆ ಮುರಿದಿದ್ದರೆ ಆಕೆ ಹೇಗೆ ಅಷ್ಟು ಚುರುಕಾಗಿ ಓಡಾಡಿದಳು? ಆಟಗಾರ್ತಿಯನ್ನೇ ಆ ಪ್ರಶ್ನೆ ಕೇಳಿದಾಗ ಆಕೆ,

"ನನಗೆ ಗೊತ್ತಿತ್ತು, ಕಾಲಿನಲ್ಲಿ ತೊಂದರೆ ಇದೆ ಎಂದು. ಆದರೆ ಇದು ಫೈನಲ್ ಹಣಾಹಣಿ. ಮುಂದೆ ಏನಾದರೂ ಆಗಲಿ, ಇಂದು ನಾನು ರಾಷ್ಟ್ರಕ್ಕೆ ಬಂಗಾರದ ಪದಕವನ್ನು ಗೆಲ್ಲಲೇಬೇಕು. ಮೊದಮೊದಲು ಕಾಲಿನಲ್ಲಿ ನೋವು ತುಂಬ ಇತ್ತು. ಆದರೆ ಯಾವಾಗ ಕಣ್ಣಮುಂದೆ ಗೆಲ್ಲಲೇಬೇಕು ಎಂಬ ಹಟ ಬಂತೋ, ನೋವೇ ಮರೆತುಹೋಯಿತು. ಅದು ನನ್ನ ಕಾಲೇ ಎನ್ನುವುದೂ ತಿಳಿಯದಾಯಿತು". ಇದನ್ನೇ ಕಗ್ಗ ಹೇಳುತ್ತದೆ.

ಬಹುದೊಡ್ಡ ಸಾಧನೆ ಮಾಡುವಾಗ, ಗುರಿ ಮುಂದೆ ಇದ್ದಾಗ, ವ್ಯಕ್ತಿ ಗುರಿಯೊಂದನ್ನು ಬಿಟ್ಟು ಬೇರೆ ಏನನ್ನೂ ಯೋಚಿಸಲಾರ. ಸಮುದ್ರ ಈಜುವವನಿಗೆ, ಯುದ್ಧದಲ್ಲಿ ಹೋರಾಡುವವನಿಗೆ ಬೇರೆ ವಿಚಾರಗಳು ಸುಳಿದರೆ ಉಳಿಯುವುದು ಸಾಧ್ಯವೇ? ಆಗ ತಾನು, ತನ್ನದು, ತನ್ನವರು ಎಂಬ ಯಾವ ಯೋಚನೆಯೂ ಉಳಿಯದೆ ಗುರಿ ಮಾತ್ರ ತೋರುತ್ತದೆ. ಹೀಗೆ ತಾನು, ತನ್ನದು ಎನ್ನುವುದನ್ನು ಮರೆಯುವ ಸ್ಥಿತಿಯೇ ಮೋಕ್ಷ ಎನ್ನುತ್ತದೆ ಕಗ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಸಪ್ತಮಿ ಗಂ. 21-22 ನಕ್ಷತ್ರ: ಭರಣಿ ಗಂ. 23-35 ಯೋಗ: ವೃದ್ಧಿ ಗಂ. 20-41, ಕರಣ: ವಿಷ್ಟಿ ಗಂ. 08-48, ಸಿಂಹ ಮಾಸದ 01 ನೇ ದಿನ. ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-22 ಸೂರ್ಯಾಸ್ತ : 06-47, ಮುಸ್ಲಿಂ ದಿನಾಂಕ : 19 ಮೊಹರಮ್ ದಿನ ವಿಶೇಷ : ಜನ್ಮಾಷ್ಟಮಿ, ಶ್ರೀ ಕೃಷ್ಣ ಜಯಂತಿ , (ತಮಿಳುನಾಡು, ಕೇರಳ ಮತ್ತು ಅಸ್ಸಾಂ), ವಾದಿತಾದ್ರಿ (ಸಿಂಧಿ)
ಅದೃಷ್ಟ ಸಂಖ್ಯೆ : 2, 7

ಮೇಷ: ನಿಮ್ಮೆಲ್ಲಾ ನೂತನ ಯೋಚನೆಗಳನ್ನು ಜನರು ಇಷ್ಟ ಪಡುತ್ತಾರೆ. ನ್ಯಾಯ-ವಾದಿಗಳಿಗೆ ಸೋಲಾಗಬಹುದು. ಹಾಸ್ಯಗಾರರಿಗೆ ಅಥವಾ ಕಥೆ ಬರಹಗಾರರಿಗೆ ಶುಭ ದಿನ. ಜ್ವರ ಅಥವಾ ಅಲರ್ಜಿಯಂತಹ ವ್ಯತ್ಯಾಸಗಳಾಗಬಹುದು.

ವೃಷಭ: ನಿಮ್ಮ ಸಿಟ್ಟು ಅಥವಾ ಯೋಚನಾರಹಿತವಾದ ನಿರ್ಧಾರಗಳು ನಿಮ್ಮ ಏಕಾಂಗಿತನಕ್ಕೆ ಕಾರಣವಾಗುವುದು. ಮದುವೆಯ ವಿಷಯಕ್ಕೆ ಸಂಬಂಧ ಪಟ್ಟಂತೆ ತಾಯಿಯ ಮತ್ತು ಅಣ್ಣಂದಿರ ಮನವೊಲಿಸುವಲ್ಲಿ ಯಶಸ್ವಿಯಾಗುವಿರಿ.

ಮಿಥುನ: ತಾಂತ್ರಿಕ ಕ್ಷೇತ್ರದವರಿಗೆ ಮೇಲಧಿಕಾರಿಗಳಿಂದ ಒತ್ತಡಗಳು ಉಂಟಾಗಬಹುದು. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಕಾರ್ಯ ಸಾಧನೆಯು ಅನುಕೂಲ ರೀತಿಯಲ್ಲಿ ಮುನ್ನಡೆಯಲಿದೆ.

ಕರ್ಕಾಟಕ: ನಿಮ್ಮ ಸಹೋದ್ಯೋಗಿಗಳೊಂದಿಗಿನ ಬಾಂಧವ್ಯ ಇನ್ನಷ್ಟು ಉತ್ತಮಗೊಳ್ಳಲಿದೆ. ವೃತ್ತಿ ಬದಲಾಯಿಸುವ ಅಥವಾ ಆಸ್ತಿ ಖರೀದಿಯ ಯೋಚನೆಯನ್ನು ಮುಂದೂಡುವುದು ಉತ್ತಮ.

ಸಿಂಹ: ನಿಮ್ಮ ಜವಾಬ್ದಾರಿಗಳತ್ತ ಹೆಚ್ಚಿನ ಗಮನ ಹರಿಸಿ, ಆತಂಕವಿಲ್ಲದೆ ಕೆಲಸ-ಕಾರ್ಯಗಳು ಸುಸೂತ್ರವಾಗಿ ನಡೆಯುವವು ಇಂದಿನ ಹೆಚ್ಚಿನ ಸಮಯವೆಲ್ಲವನ್ನು ನಿಶ್ಚಿತ ಗುರಿ ತಲುಪಲು ಮೀಸಲಾಗಿಡುವುದು ಒಳ್ಳೆಯದು.

ಕನ್ಯಾ: ಸದ್ಯದ ಪರಿಸ್ಥಿತಿಯಲ್ಲಿ ಹಣದ ಬಗ್ಗೆ ಯೋಚಿಸಬೇಕಾಗಿಲ್ಲ. ಜಾಹೀರಾತು ಕ್ಷೇತ್ರದ ಕೆಲಸಗಳಿಂದ ಉತ್ತಮ ಅವಕಾಶಗಳು ಸಿಗಲಿವೆ. ಗೃಹಿಣಿಯರಿಗೆ ವಿಶೇಷ ದಿನವಾಗಿದ್ದು ಆಕಸ್ಮಿಕ ಧನಲಾಭವಾಗಲಿದೆ. ಶುಭ ಸುದ್ದಿ ಬರಲಿದೆ.

ತುಲಾ: ನಿಗದಿತ ಸಮಯದಲ್ಲಿ ಕೆಲಸ ಮುಗಿಸುವ ಪ್ರಯತ್ನವಿರಲಿ. ನಿರ್ಧಾರಗಳನ್ನು ಆತುರವಾಗಿ ತೆಗೆದುಕೊಳ್ಳುವ ಸನ್ನಿವೇಶಕ್ಕೆ ಸಿಕ್ಕಿಕೊಂಡಂತಾ-ಗಬಹುದು. ಮಹಾ ಗಣಪತಿಗೆ ಹರಕೆ ಹೇಳಿಕೊಳ್ಳಿ.

ವೃಶ್ಚಿಕ: ಇಂದಿನ ನಿಮ್ಮ ದಿನಚರಿ ಹಾಗೂ ಇಂದು ನೀವು ಕೈಗೊಳ್ಳಲಿರುವ ನಿರ್ಧಾರಗಳು ಮನೆಯವರಿಗೆ ತಿಳಿದಿರಲಿ. ಮದುವೆಯ ಸಂಬಂಧ ಮಾತ ನಾಡಲು ಯಾರ ಮಧ್ಯಸ್ತಿಕೆಯೂ ಬೇಡ. ಸಾಧನೆಗೆ ಅಭಿನಂದನೆ ಸಿಗಲಿದೆ.

ಧನು: ಇಂದು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿಕೊಂಡು ನಿಮ್ಮ ಕನಸುಗಳನ್ನು ಸಾಕಾರಗೊಳಿಸುವುದಕ್ಕಾಗಿ ಅವಿಶ್ರಾಂತವಾಗಿ ದುಡಿಯುವಿರಿ.

ಮಕರ: ನಿಮ್ಮಲ್ಲಿರುವ ಹಿಂಜರಿಕೆಯ ಮತ್ತು ಭಯದ ಸ್ವಭಾವ ಹಿನ್ನೆಡೆಗೆ ಕಾರಣವಾಗಿದೆ. ಭವಿಷ್ಯದ ಭದ್ರತೆ ಕುರಿತಾದ ನಿಮ್ಮ ಕಾಳಜಿ ಸಂತೃಪ್ತಿ ತಂದುಕೊಡುವುದು. ಔಷಧ ಪದಾರ್ಥಗಳ ಮಾರಾಟದಿಂದ ಲಾಭ.

ಕುಂಭ: ಅವಿವಾಹಿತರಿಗೆ ವಿವಾಹ ಯೋಗವಿದೆ. ವೈಯಕ್ತಿಕ ಪ್ರಗತಿಯಿಂದ ಮನಸ್ಸಿಗೆ ನೆಮ್ಮದಿ ಇರುವುದು. ಇಂದು ವೃತ್ತಿ ಪರವಾಗಿ ನಡೆಯುವ ಎಲ್ಲ ವಿಷಯಗಳನ್ನೂ ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ.

ಮೀನ: ನೀವಂದುಕೊಂಡಷ್ಟು ನಿಮ್ಮ ಪರಿಸ್ಥಿತಿ ಕೆಟ್ಟದಾಗಿ ಇಲ್ಲ. ಹೆಚ್ಚಿನ ಲಾಭಗಳಿಸುವ ಉದ್ದೇಶವಿದ್ದಲ್ಲಿ ಸ್ವಲ್ಪ ಸಮಯ ಕಾಯಬೇಕಾಗುವುದು. ಷೇರು ಮಾರುಕಟ್ಟೆ ವ್ಯವಹಾರಗಳು ಹೆಚ್ಚಿನ ವರಮಾನ ತರಲಿದೆ.

ಪದಬಂಧ 5053


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರವನ್ನೂ ಕೊಚ್ಚಿಕೊಂಡು ಹೋದ ದೊಡ್ಡ ಪ್ರವಾಹ (4)
3.ಈತ ಅನುಭವವುಳ್ಳವನು (4)
5.ಕೊನೆಗೆ ಬೆಲೆಯನ್ನಿಟ್ಟು ನೀಡಿದ ಸಲುಗೆ(3)
6.ಭ್ರೂಣವನ್ನು ಆವರಿಸಿರುವ ಪೊರೆ (3)
8.ಸಂಗನ ಬದುಕಿನಲ್ಲಾದ ಘಟನೆ (3)
10.ಆಶ್ರಯವನ್ನು ಹೀಗೆನ್ನಿ (3)
11.ಪಾಯಸ ನೆಕ್ಕುತ್ತಿರುವ ಕಾಗೆ (3)
13.ಅಳುವಿನೊಂದಿಗೆ ಹೆದರಿಕೆ ಬಂದಿದೆಯಲ್ಲಾ! (3)
15.ಪೂರ್ವದ ಸ್ಥಿತಿಯಿದು (4)
16.ಯುದ್ಧದ ನಗಾರಿಯಿದು(4)

ಮೇಲಿಂದ ಕೆಳಕ್ಕೆ

1.ಮಜವಾಗಿ ಆಳ್ವಿಕೆ ನಡೆಸಿದ ಚಕ್ರವರ್ತಿ! (4)
2.ರಸದಲ್ಲಿನ ಜೋರು (3)
3.ಸುರನ ಹತ್ತಿರವಿರುವ ರಾಕ್ಷಸ (3)
4.ಕೊನೆಗೆ ಯೋಗವಿದ್ದದ್ದಕ್ಕೇ ಈ ಹಂಚಿಕೆ! (4)
7.ಇದು ರಜೋಗುಣಕ್ಕೆ ಸಂಬಂಧಪಟ್ಟದ್ದು(3)
9.ದಾಯಾದಿ ಮಾಡಿರುವ ಪಾವತಿ (3)
10.ಖರ್ಚು ಮತ್ತು ವೆಚ್ಚ (4)
12.ಒಳ್ಳೆಯ ಆಚಾರವುಳ್ಳವನು (4)
13.ದೇವತೆಗಳ ಜನನಿ (3)
14.ಅಷ್ಟ ದಿಕ್ಪಾಲಕರೊಲ್ಲಬ್ಬನಾಗಿರುವ ಅತೀ ಶ್ರೀಮಂತ (3)



5052ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಹರವಿ
5.ವಲೀಮುಖ
7.ವಿನ್ಯಾಸ 8.ಅಂತರ್‌ದೇಶೀಯ
11.ಬಲಿಷ್ಠ 12.ರಸಭಂಗ
14.ರಿಕಾಪು 15.ಉಪಯೋಗ

ಮೇಲಿಂದ ಕೆಳಕ್ಕೆ:
1.ಗೊತ್ತುವಳಿ 2.ಗುದಾಮು
4.ವಿರಸ 6.ಖಚಿತ
7.ವಿಜಯ 8.ಅಂಗುಷ್ಠ
9.ಶೀಕರ 10.ಅಂಗರಾಗ
11.ಬತೇರಿ 13.ಸಮೀಪ

ಸುಡೊಕು 5439

8				1				
		9		5		7		3
	1				3		2	
	4					8		
3			8		1			2
1	9			2				7
	8						7	
2		4	9		7	1		6
	5			3				


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5438 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಷೇರುಪೇಟೆ ವಹಿವಾಟು 417



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17825
ಇಂದಿನ ಅಂತ್ಯ	17,153
▲	119
ದಿನದ ಗರಿಷ್ಠ	17965

ವಿನಿಮಯ ದರ

$ ಡಾಲರ್	79.45
£ ಪೌಂಡ್	96.1
€ ಯುರೊ	80.68
¥ ಯೆನ್ (100ಕ್ಕೆ)	58.71

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660(1650)
ಸೋಯಾ (ರಿಫೈನ್ಡ್)	₹1262(1270)
ಸೂರ್ಯಕಾಂತಿ (ರಿಫೈನ್ಡ್)	₹1560(1580)
ಪಾಮೋಲಿನ್	₹1235(1245))

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹160
ಆರ್‌ಎಸ್‌ಎಸ್-5	₹151
ಗುಡ್ ಲಾಟ್	₹143

ಕೊಬ್ಬರಿ ಧಾರಣೆ

ಮಂಗಳೂರು	₹8308-8350
ಪುತ್ತೂರು	₹4000-8500
ತುರುವೇಕೆರೆ	₹12800-14700

ಕೃಷಿ ಸಾಲ: ನೆರವಿಗೆ ₹ 34 ಸಾವಿರ ಕೋಟಿ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಹೆಚ್ಚಳ ಮಾಡುತ್ತಿರುವ ಕಾರಣ, ₹ 3 ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲಕ್ಕೆ ಶೇಕಡ 1.5ರಷ್ಟು ಬಡ್ಡಿ ವಿನಾಯಿತಿ ನೀಡಲು ₹ 34,856 ಕೋಟಿ ಮೀಸಲಿರಿಸಲು ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ.



ಕೇಂದ್ರ ಸರ್ಕಾರದ ನೆರವಿನೊಂದಿಗೆ ಹಣಕಾಸು ಸಂಸ್ಥೆಗಳು ಶೇ 7ರ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲ ನೀಡುತ್ತವೆ. ಸಂಪುಟದ ತೀರ್ಮಾನವನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಸಿಂಗ್ ಠಾಕೂರ್ ತಿಳಿಸಿದರು.

ಹಣಕಾಸು ಸಂಸ್ಥೆಗಳು ಹೊರಗಿನ ನೆರವು ಇಲ್ಲದೆಯೇ ಶೇ 7ರ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲ ನೀಡುವ ಸ್ಥಿತಿಯಲ್ಲಿದ್ದ ಕಾರಣ ಕೇಂದ್ರವು 2020ರ ಮೇ ತಿಂಗಳಲ್ಲಿ ಬಡ್ಡಿ ವಿನಾಯಿತಿಯ ಈ ಯೋಜನೆಯನ್ನು ಸ್ಥಗಿತಗೊಳಿಸಿತ್ತು ಎಂದು ಠಾಕೂರ್ ಅವರು ಹೇಳಿದರು.

ಆದರೆ ಆರ್‌ಬಿಐ ರೆಪೊ ದರವನ್ನು ಹೆಚ್ಚಿಸುತ್ತಿರುವ ಕಾರಣ, ಬ್ಯಾಂಕ್‌ಗಳು ಶೇ 7ರ ಬಡ್ಡಿ ದರದಲ್ಲಿ ಕೃಷಿ ಸಾಲ ಒದಗಿಸಬೇಕು ಎಂದಾದರೆ ಅವುಗಳಿಗೆ ನೆರವು ಒದಗಿಸಬೇಕು ಎಂಬ ಸ್ಥಿತಿ ಎದುರಾಗಿದೆ.

ಯಾವ ಹಣಕಾಸು ಸಂಸ್ಥೆಗಳಿಗೆ ನೆರವು?

- ಸರ್ಕಾರಿ ಹಾಗೂ ಖಾಸಗಿ ಬ್ಯಾಂಕ್‌ಗಳಿಗೆ
- ಕಿರು ಹಣಕಾಸು ಬ್ಯಾಂಕ್‌ಗಳಿಗೆ
- ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ
- ಸಹಕಾರ ಬ್ಯಾಂಕ್‌ಗಳಿಗೆ
- ಕಂಪ್ಯೂಟರೀಕೃತ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ

ಪ್ರಸಕ್ತ ಹಣಕಾಸು ವರ್ಷದಲ್ಲಿ ರಸಗೊಬ್ಬರಗಳಿಗೆ ನೀಡುವ ಸಬ್ಸಿಡಿ ಮೊತ್ತವು ₹ 2 ಲಕ್ಷ ಕೋಟಿಯನ್ನು ಮೀರುವ ಸಾಧ್ಯತೆ ಇದೆ ಎಂದು ಠಾಕೂರ್ ತಿಳಿಸಿದರು.

ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಳವಾಗಿದ್ದರೂ ದೇಶಿ ಮಾರುಕಟ್ಟೆಯಲ್ಲಿ ರಸಗೊಬ್ಬರ ಬೆಲೆ ಏರಿಕೆಗೆ ಕೇಂದ್ರವು ಅವಕಾಶ ಕೊಟ್ಟಿಲ್ಲ ಎಂದು ಹೇಳಿದರು.

ರೆಪೊ ದರದಲ್ಲಿನ ಏರಿಕೆಯಿಂದ ಆಗುವ ವೆಚ್ಚ ಹೆಚ್ಚಳ ನಿಭಾಯಿಸಲು ಹಣಕಾಸು ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ನೀಡುವ ನೆರವಿನಿಂದ ಸಾಧ್ಯವಾಗುತ್ತದೆ ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-46500
ಹಳತು	46000-56000
ಹೊಳಲ್ಕೆರೆ	
ರಾಶಿ	49199-50999
ಕಾರ್ಕಳ	
ಹೊಸತು	40000-46500
ಕುಮಟಾ	
ಚಿಪ್ಪು	28699-33689
ಕೋಕ	20509-33099
ಫ್ಯಾಕ್ಟರಿ	13089-22179
ಹಳೆಚಾಲಿ	46809-48219
ಹೊಸಚಾಲಿ	38569-42349
ಪುತ್ತೂರು	
ಕೋಕ	11000-26000
ಹೊಸತು	33500-46500
ಶಿಕಾರಿಪುರ	
ಕೆಂಪು	47600-50745
ಶಿವಮೊಗ್ಗ	
ಗೊರಬಲು	18559-38669
ಸಿದ್ದಾಪುರ	
ಬಿಳಿಗೋಟು	25099-34100
ಚಾಲಿ	38399-43099
ಕೋಕ	26699-34699
ಕೆಂಪುಗೋಟು	32590-34191
ರಾಶಿ	48299-50699
ತಟ್ಟಿಬೆಟ್ಟೆ	40590-48599
ಶಿರಸಿ	
ಬೆಟ್ಟೆ	30199-47899
ಬಿಳಿಗೋಟು	23899-37310
ಚಾಲಿ	38413-43799
ರಾಶಿ	46266-51609

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,500	16000	16050	225.50ಸೆಂಟ್ಸ್
ಎಸಿ	9,100	8400	8950	
ಆರ್‌ಪಿ	9,900	9500	9800	ಲಂಡನ್
ಆರ್‌ಸಿ	4,900	4500	4700	2256 ಡಾಲರ್ಸ್

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹152-660
ದ್ವಿತಳಿ (ಬಿ.ವಿ) ₹212-801

ಮುಂಬೈ ಧಾರಣೆ

ಶೇಂಗಾ

17-8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670(1660)
ಒಂದು ವಾರದ ಡೆಲಿವರಿ	1665(1655)
ಸೋಯಾ ಕಚ್ಚಾ	1232(1250)
ಪಾಮ್ ವಾರದ ಡೆಲಿವರಿ	1233(1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490(1500)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51700(51800)
ಬೆಳ್ಳಿ ಕೆ.ಜಿ 57700(57650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಒಂದೇ ಬಗೆಯ ಚಾರ್ಜರ್: ಸಮಿತಿ ರಚಿಸಲಿರುವ ಕೇಂದ್ರ

ನವದೆಹಲಿ (ಪಿಟಿಐ): ಮೊಬೈಲ್ ಫೋನ್‌ಗಳು ಹಾಗೂ ಒಂದೆಡೆಯಿಂದ ಇನ್ನೊಂದೆಡೆ ಸುಲಭವಾಗಿ ಸಾಗಿಸುವ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಒಂದೇ ಬಗೆಯ ಚಾರ್ಜರ್ ಬಳಕೆ ಸಾಧ್ಯತೆಯ ಕುರಿತು ಪರಿಶೀಲಿಸಲು ಕೇಂದ್ರ ಸರ್ಕಾರವು ತಜ್ಞರ ಸಮಿತಿಯೊಂದನ್ನು ರಚಿಸಲಿದೆ.

ಈ ಸಮಿತಿಯು ವಿಸ್ತೃತ ವರದಿಯನ್ನು ಎರಡು ತಿಂಗಳುಗಳಲ್ಲಿ ಸಲ್ಲಿಸಲಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಬುಧವಾರ ಹೇಳಿದ್ದಾರೆ.

ಆರಂಭಿಕ ಹಂತದಲ್ಲಿ ದೇಶದಲ್ಲಿ ಸಿ-ಟೈಪ್ ಸೇರಿದಂತೆ ಎರಡು ಬಗೆಯ ಚಾರ್ಜಿಂಗ್ ಪೋರ್ಟ್‌ಗಳ ಬಳಕೆಯನ್ನು ವ್ಯಾಪಕಗೊಳಿಸುವ ಸಾಧ್ಯತೆಯನ್ನು ಪರಿಶೀಲಿಸಬಹುದು ಎಂದು ಅವರು ಉದ್ಯಮದ ಪ್ರತಿನಿಧಿಗಳ ಜೊತೆ ಮಾತುಕತೆಯ ನಂತರ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಇದೊಂದು ಸಂಕೀರ್ಣ ವಿಚಾರ. ಅಂತಿಮ ತೀರ್ಮಾನ ಕೈಗೊಳ್ಳುವ ಮೊದಲು ಉದ್ಯಮ ವಲಯ, ಬಳಕೆದಾರರು ಮತ್ತು ಪರಿಸರದ ಬಗ್ಗೆ ನಾವು ಆಲೋಚಿಸಬೇಕು’ ಎಂದು ಅವರು ಹೇಳಿದ್ದಾರೆ.

ಸ್ಮಾರ್ಟ್‌ಫೋನ್‌ಗಳು ಮತ್ತು ಫೀಚರ್ ಫೋನ್‌ಗಳು, ಲ್ಯಾಪ್‌ಟಾಪ್ ಮತ್ತು ಐಪ್ಯಾಡ್‌ಗಳು, ಸ್ಮಾರ್ಟ್‌ವಾಚ್‌ನಂತಹ ಧರಿಸಬಹುದಾದ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಯಾವ ಬಗೆಯ ಚಾರ್ಜಿಂಗ್ ಪೋರ್ಟ್‌ಗಳು ಇರಬೇಕು ಎಂಬ ಬಗ್ಗೆ ತಜ್ಞರ ಪ್ರತ್ಯೇಕ ಸಮಿತಿಗಳು ಪರಿಶೀಲನೆ ನಡೆಸಲಿವೆ. ಇವು ಎರಡು ತಿಂಗಳಲ್ಲಿ ವರದಿ ಸಲ್ಲಿಸಲಿವೆ.

ಫ್ಲಿಪ್‌ಕಾರ್ಟ್‌ಗೆ ದಂಡ

ನವದೆಹಲಿ (ಪಿಟಿಐ): ಕಳಪೆ ಗುಣಮಟ್ಟದ ಪ್ರೆಷರ್ ಕುಕ್ಕರ್ ಮಾರಾಟ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಫ್ಲಿಪ್‌ಕಾರ್ಟ್‌ಗೆ ₹ 1 ಲಕ್ಷ ದಂಡ ವಿಧಿಸಲಾಗಿದೆ ಎಂದು ಕೇಂದ್ರ ಗ್ರಾಹಕ ಹಿತರಕ್ಷಣಾ ಆಯೋಗವು (ಸಿಸಿಪಿಎ) ಹೇಳಿದೆ.

ತನ್ನ ಮೂಲಕ ಮಾರಾಟ ಮಾಡಲಾಗಿರುವ 598 ಪ್ರೆಷರ್ ಕುಕ್ಕರ್‌ಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡಬೇಕು ಎಂದು ಫ್ಲಿಪ್‌ಕಾರ್ಟ್‌ಗೆ ಸೂಚನೆ ನೀಡಲಾಗಿದೆ.

ಅಲ್ಲದೆ, ಆ ಪ್ರೆಷರ್ ಕುಕ್ಕರ್‌ಗಳನ್ನು ಹಿಂದಕ್ಕೆ ಪಡೆದು ಅವುಗಳ ಹಣವನ್ನು ಮರಳಿಸುವಂತೆ ಸೂಚನೆ ನೀಡಲಾಗಿದೆ ಎಂದು ಸಿಸಿಪಿಎ ಹೇಳಿದೆ.

ಸಿಸಿಪಿಎ ಅಧ್ಯಕ್ಷೆ ನಿಧಿ ಖಾರೆ ಅವರು ಈ ವಿಷಯವನ್ನು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಸೂಚನೆಗಳನ್ನು ಪಾಲಿಸಿರುವುದಕ್ಕೆ ಸಂಬಂಧಿಸಿದ ವರದಿಯನ್ನು ಸಲ್ಲಿಸುವಂತೆಯೂ ಹೇಳಲಾಗಿದೆ ಎಂದು ನಿಧಿ ಅವರು ಮಾಹಿತಿ ನೀಡಿದ್ದಾರೆ.

ಮತ್ತೆ 60 ಸಾವಿರ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ನಾಲ್ಕು ತಿಂಗಳ ನಂತರ ಮತ್ತೆ 60 ಸಾವಿರ ಅಂಶಗಳ ಗಡಿ ದಾಟಿದೆ. ಸತತ ನಾಲ್ಕನೆಯ ದಿನವೂ ಏರಿಕೆ ಕಂಡ ಸೆನ್ಸೆಕ್ಸ್ ಬುಧವಾರ 417 ಅಂಶ ಜಿಗಿದಿದೆ.

ಕಚ್ಚಾ ತೈಲದ ಬೆಲೆ ಇಳಿಕೆ ಆಗಿರುವುದು ಹಾಗೂ ವಿದೇಶಿ ಹೂಡಿಕೆ ಹರಿದು ಬರುತ್ತಿರುವುದು ಹೂಡಿಕೆದಾರರ ವಿಶ್ವಾಸ ಹೆಚ್ಚಲು ಕಾರಣವಾದವು ಎಂದು ತಜ್ಞರು ಹೇಳಿದ್ದಾರೆ.



ಮುಂಬೈ ಷೇರುಪೇಟೆ (ಎಎಫ್‌ಪಿ ಚಿತ್ರ)

ರೂಪಾಯಿ ಮೌಲ್ಯ ವೃದ್ಧಿ ಮತ್ತು ಏಷ್ಯಾದ ಮಾರುಕಟ್ಟೆಗಳಲ್ಲಿನ ತೇಜಿ ವಹಿವಾಟು ಕೂಡ ಏರಿಕೆಗೆ ನೆರವಾದವು.

ಬುಧವಾರದ ಅಂತ್ಯಕ್ಕೆ ಸೆನ್ಸೆಕ್ಸ್ 60,260ಕ್ಕೆ ತಲುಪಿದೆ. ಏಪ್ರಿಲ್ 5ರ ನಂತರ ಸೆನ್ಸೆಕ್ಸ್ 60 ಸಾವಿರದ ಗಡಿ ದಾಟಿರುವುದು ಇದೇ ಮೊದಲು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 119 ಅಂಶ ಏರಿಕೆಯಾಗಿದೆ. ‘ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಪಾಲ್ಗೊಳ್ಳುವಿಕೆಯು ಈಗಿನ ಜಿಗಿತಕ್ಕೆ ಕಾರಣ. ಹಣದುಬ್ಬರ ಹೆಚ್ಚಳವು ಪಶ್ಚಿಮದ ಮಾರುಕಟ್ಟೆಗಳನ್ನು ಕಾಡುತ್ತಿದ್ದರೂ, ದೇಶಿ ಅರ್ಥ ವ್ಯವಸ್ಥೆಯು ಗಟ್ಟಿತನ ತೋರಿಸಿದೆ. ಇದು ವಿದೇಶಿ ಹೂಡಿಕೆ ಮತ್ತೆ ಬರುತ್ತಿರುವುದಕ್ಕೆ ಕಾರಣ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.64ರಷ್ಟು, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.53ರಷ್ಟು ಏರಿಕೆ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.13ರಷ್ಟು ಇಳಿಕೆಯಾಗಿ ಪ್ರತಿ ಬ್ಯಾರಲ್‌ಗೆ 92.22 ಅಮೆರಿಕನ್ ಡಾಲರ್‌ಗೆ ತಲುಪಿದೆ.

ಎಫ್‌ಡಿ ಬಡ್ಡಿ ಹೆಚ್ಚಿಸಿದ ಉಜ್ಜೀವನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಆಗಸ್ಟ್ 9ರಿಂದ ಅನ್ವಯ ಆಗುವಂತೆ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇಕಡ 0.30ರಿಂದ ಶೇ 1.5ರವರೆಗೆ ಹೆಚ್ಚಿಸಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ 75 ವಾರಗಳ ಮತ್ತು 75 ತಿಂಗಳುಗಳ ಅವಧಿಯ ಯೋಜನೆ ಪರಿಚಯಿಸಿದೆ. ಎರಡಕ್ಕೂ ಶೇ 7.5ರಷ್ಟು ಬಡ್ಡಿ ಸಿಗಲಿದೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

990 ದಿನಗಳ ಅವಧಿಯ ಠೇವಣಿಗೂ ಶೇ 7.5ರ ಗರಿಷ್ಠ ಬಡ್ಡಿ ಸಿಗಲಿದೆ. ಹಿರಿಯ ನಾಗರಿಕರು ಶೇ 0.75ರಷ್ಟು ಹೆಚ್ಚುವರಿ ಬಡ್ಡಿದರ ಪಡೆಯಲಿದ್ದಾರೆ ಎಂದು ಹೇಳಿದೆ.

ಮಾತೃತ್ವ ರಜೆ ಮಹಿಳೆಯ ಹಕ್ಕು: ‘ಸುಪ್ರೀಂ’

ಪ್ರಜಾವಾಣಿವಾರ್ತೆ

ನವದೆಹಲಿ: ಮಾತೃತ್ವ ರಜೆ ಮಹಿಳೆಯ ಹಕ್ಕು. ಸ್ವಾಭಾವಿಕ ಹೆರಿಗೆಯಿಂದ ಪಡೆಯದ ಮಗುವಿನ ಪಾಲನೆಗೆ ರಜೆ ತೆಗೆದುಕೊಂಡಿದ್ದರೂ ಮಾತೃತ್ವ ರಜೆಯ ಹಕ್ಕನ್ನು ಕಸಿದುಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರ ನೇತೃತ್ವದ ಪೀಠವು, ಕೇಂದ್ರ ನಾಗರಿಕ ಸೇವೆಗಳ ನಿಯಮಗಳು (ಸಿಸಿಎಸ್ ನಿಯಮಗಳು) ಅಡಿಯಲ್ಲಿ ಮಹಿಳೆಗೆಮಾತೃತ್ವ ರಜೆ ಹಕ್ಕು ಮೊಟಕುಗೊಳಿಸುವಂತಿಲ್ಲ. ಹೆರಿಗೆ ರಜೆಗೆ ಸಂಬಂಧಿಸಿದ ಸಿಸಿಎಸ್ ನಿಯಮಗಳ ನಿಬಂಧನೆಗಳನ್ನು ಹೆರಿಗೆ ಸೌಲಭ್ಯ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ಪರಿಗಣಿಸಬೇಕು ಎಂದು ಹೇಳಿದೆ.

ಚಂಡೀಗಢದ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸ್ನಾತಕೋತ್ತರ ಸಂಸ್ಥೆಯಲ್ಲಿ ನರ್ಸ್‌ವೊಬ್ಬರಿಗೆ ಸಿಎಸ್‌ಸಿ ಕಾಯಿದೆ 2013ರ ಅಡಿ ಕೋರಿದ್ದ ಹೆರಿಗೆ ರಜೆ ಸೌಲಭ್ಯ ನಿರಾಕರಿಸಲಾಗಿತ್ತು. ಮೊದಲ ಮದುವೆಯಲ್ಲಿ ಜೈವಿಕ ತಂದೆಯಿಂದ ಜನಿಸಿದ ಇಬ್ಬರು ಮಕ್ಕಳಿಗೆ ಈ ರೀತಿಯ ರಜೆ ಸೌಲಭ್ಯ ಪಡೆದಿದ್ದಾರೆ ಎಂಬ ಕಾರಣಕ್ಕಾಗಿ, ಆಕೆಯ ಎರಡನೇ ಮದುವೆಯಿಂದ ಮಗು ಜನಿಸಿದ ವೇಳೆ ಮಾತೃತ್ವ ರಜೆ ನಿರಾಕರಿಸಿತ್ತು. ಇದನ್ನು ಕೇಂದ್ರೀಯ ಆಡಳಿತ ನ್ಯಾಯಮಂಡಳಿ, ಪಂಜಾಬ್, ಹರಿಯಾಣ ಹೈಕೋರ್ಟ್ ಎತ್ತಿ ಹಿಡಿದಿದ್ದವು. ಈ ಆದೇಶ ಪ್ರಶ್ನಿಸಿ ಅರ್ಜಿದಾರ ಮಹಿಳೆ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ವಕೀಲ ಅಕ್ಷಯ್ ವರ್ಮಾ ಮಹಿಳೆ ಪರ ವಾದಿಸಿದರು.

ಸಚಿವರ ವಜಾಕ್ಕೆ ಬಿಜೆಪಿ ಆಗ್ರಹ

ಪಟ್ನಾ (ಪಿಟಿಐ): ಆರ್‌ಜೆಡಿ ನಾಯಕ ಕಾರ್ತಿಕೇಯ ಸಿಂಗ್ ಅವರನ್ನು ಕಾನೂನು ಸಚಿವರನ್ನಾಗಿ ಸೇರ್ಪಡೆ ಮಾಡಿರುವುದರ ಕುರಿತು ರಾಜ್ಯದಲ್ಲಿ ಬುಧವಾರ ವಿವಾದ ಭುಗಿಲೆದ್ದಿದೆ.

‘ಅಪಹರಣ ಪ್ರಕರಣದಲ್ಲಿ ಸಿಂಗ್ ವಿರುದ್ಧ ಬಂಧನ ವಾರಂಟ್ ಬಾಕಿ ಇದೆ’ ಎಂದು ಬಿಜೆಪಿ ಆರೋಪಿಸಿದರೆ, ‘ಈ ಬಗ್ಗೆ ಮಾಹಿತಿ ಇಲ್ಲ’ ಎಂದು ನಿತೀಶ್ ಕುಮಾರ್ ಅವರು ಹೇಳಿದ್ದಾರೆ.

ಟಿ20: ಮಂಗಳೂರಿಗೆ ಸೋಲುಣಿಸಿದ ಮೈಸೂರು ವಾರಿಯರ್ಸ್

ಪವನ್, ಕರುಣ್ ಬಿರುಸಿನ ಆಟ

ಪ್ರಜಾವಾಣಿ ವಾರ್ತೆ



ಬೆಂಗಳೂರು ಬ್ಲಾಸ್ಟರ್ಸ್ ತಂಡದ ಎಲ್.ಆರ್. ಚೇತನ್ ಬ್ಯಾಟಿಂಗ್

ಬೆಂಗಳೂರು: ಪವನ್ ದೇಶಪಾಂಡೆ ಮತ್ತು ಕರುಣ್ ನಾಯರ್ ಅವರ ಭರ್ಜರಿ ಆಟದ ನೆರವಿನಿಂದ ಮೈಸೂರು ವಾರಿಯರ್ಸ್ ತಂಡದವರು ಮಹಾರಾಜ ಟ್ರೋಫಿ ಟಿ20 ಟೂರ್ನಿಯ ಎರಡನೇ ಲೆಗ್‌ನಲ್ಲಿ ಗೆಲುವಿನ ಆರಂಭ ಪಡೆದರು.

ಚಿನ್ನಸ್ವಾಮಿ ಕ್ರೀಡಾಂಗಣದ-ಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ವಾರಿಯರ್ಸ್ ತಂಡ ಆರು ವಿಕೆಟ್‌ಗಳಿಂದ ಮಂಗಳೂರು ಯುನೈಟೆಡ್ ತಂಡವನ್ನು ಮಣಿಸಿತು. ವಾರಿಯರ್ಸ್ ನೀಡಿದ್ದ 172 ರನ್‌ಗಳ ಗುರಿಯನ್ನು 18.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ತಲುಪಿತು.

35 ಎಸೆತಗಳಲ್ಲಿ ಅಜೇಯ 53 ರನ್ ಗಳಿಸಿದ ಪವನ್ ದೇಶಪಾಂಡೆ ಅವರು ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ನಾಯಕ ಕರುಣ್ ನಾಯರ್ (47 ರನ್, 27 ಎ, 4X3, 6X3) ತಕ್ಕ ಸಾಥ್ ನೀಡಿದರು.

ವಾರಿಯರ್ಸ್ ತಂಡದ ಮೊತ್ತ 50 ಆಗಿದ್ದಾಗ ಆರಂಭಿಕ ಆಟಗಾರರಾದ ನಿಹಾಲ್ ಉಲ್ಲಾಳ್ (25, 22 ಎ) ಮತ್ತು ನಿತಿನ್ ಭಿಲ್ಲೆ (11) ಪೆವಿಲಿಯನ್ ಮರಳಿದ್ದರು.

ಈ ವೇಳೆ ಜತೆಯಾದ ಪವನ್ ಮತ್ತು ಕರುಣ್ ಮೂರನೇ ವಿಕೆಟ್‌ಗೆ 88 ರನ್ ಸೇರಿಸಿದರು. ಮಂಗಳೂರು ತಂಡದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಈ ಜೋಡಿ ಬೌಂಡರಿ, ಸಿಕ್ಸರ್‌ಗಳ ಮೂಲಕ ವೇಗವಾಗಿ ರನ್ ಕಲೆಹಾಕಿತು.

ಕರುಣ್ ಮತ್ತು ಶ್ರೇಯಸ್ ಗೋಪಾಲ್ (6) ಅಲ್ಪ ಅಂತರದಲ್ಲಿ ಔಟಾದರು. ಆದರೆ ಭರ್ಜರಿ ಆಟ ಮುಂದುವರಿಸಿದ ಪವನ್ ಅವರು ಎಸ್. ಶಿವರಾಜ್ (21, 11 ಎ.) ಜೊತಗೂಡಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಅಭಿನವ್, ನಿಕಿನ್ ಆಸರೆ: ಮೊದಲು ಬ್ಯಾಟ್ ಮಾಡಿದ ಮಂಗಳೂರು ತಂಡ ಮ್ಯಾಕ್‌ಲಿನ್ ಹ್ಯಾಡ್ಲಿ ನೊರೊನಾ (0) ಅವರನ್ನು ಬೇಗನೇ ಕಳೆದುಕೊಂಡಿತು. ಆರ್.ಸಮರ್ಥ್ (22) ಮತ್ತು ಅನೀಶ್ವರ್ ಗೌತಮ್ (5) ಅವರೂ ಹೆಚ್ಚುಹೊತ್ತು ನಿಲ್ಲಲಿಲ್ಲ. ಪ್ರತೀಕ್ ಜೈನ್ (31ಕ್ಕೆ 2), ಎದುರಾಳಿ ತಂಡಕ್ಕೆ ಆರಂಭದಲ್ಲೇ ಆಘಾತ ನೀಡಿದರು.

ಆದರೆ ನಿಕಿನ್ ಜೋಸ್ (55 ರನ್, 47 ಎಸೆತ) ಮತ್ತು ಮಧ್ಯಮ ಕ್ರಮಾಂಕದಲ್ಲಿ ಅಭಿನವ್ ಮನೋಹರ್ (68 ರನ್, 35 ಎ., 4X5, 6X5) ಅವರು ಜವಾಬ್ದಾರಿಯುತ ಆಟವಾಡಿ ತಂಡದ ಸವಾಲಿನ ಮೊತ್ತಕ್ಕೆ ಕಾರಣರಾದರು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 90 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಮಂಗಳೂರು ಯುನೈಟೆಡ್ 20 ಓವರ್‌ಗಳಲ್ಲಿ 7ಕ್ಕೆ171 (ಆರ್.ಸಮರ್ಥ್ 22, ನಿಕಿನ್ ಜೋಸ್ 55, ಅಭಿನವ್ ಮನೋಹರ್ 68, ಪ್ರತೀಕ್ ಜೈನ್ 31ಕ್ಕೆ 2, ವಿದ್ಯಾಧರ್ ಪಾಟೀಲ್ 44ಕ್ಕೆ 1, ಆದಿತ್ಯ ಗೋಯಲ್ 41ಕ್ಕೆ 2). ಮೈಸೂರು ವಾರಿಯರ್ಸ್ 18.1 ಓವರ್‌ಗಳಲ್ಲಿ 4ಕ್ಕೆ 172 (ನಿಹಾಲ್ ಉಲ್ಲಾಳ್ 25, ಪವನ್ ದೇಶಪಾಂಡೆ ಔಟಾಗದೆ 53, ಕರುಣ್ ನಾಯರ್ 47, ಎಸ್.ಶಿವರಾಜ್ ಔಟಾಗದೆ 21, ಎಚ್.ಎಸ್.ಶರತ್ 32ಕ್ಕೆ 2, ಎಂ.ವೆಂಕಟೇಶ್ 20ಕ್ಕೆ 2)

ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 6 ವಿಕೆಟ್ ಗೆಲುವು

ಇಂದಿನ ಪಂದ್ಯಗಳು: ಬೆಂಗಳೂರು ಬ್ಲಾಸ್ಟರ್ಸ್– ಗುಲ್ಬರ್ಗಾ ಮಿಸ್ಟಿಕ್ಸ್ (ಮಧ್ಯಾಹ್ನ 3)

ಹುಬ್ಬಳ್ಳಿ ಟೈಗರ್ಸ್– ಮೈಸೂರು ವಾರಿಯರ್ಸ್ (ಸಂಜೆ 7)

ಚೇತನ್ ಶತಕ: ಬೆಂಗಳೂರು ಜಯಭೇರಿ

ಎಲ್.ಆರ್.ಚೇತನ್ (ಔಟಾಗದೆ 105, 55ಎ, 4X8, 6X6) ಗಳಿಸಿದ ಶತಕದ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಎರಡನೇ ಪಂದ್ಯದಲ್ಲಿ 25 ರನ್ ಗಳಿಂದ ಶಿವಮೊಗ್ಗ ಸ್ಟ್ರೈಕರ್ಸ್ ಎದುರು ಗೆದ್ದಿತು.

ಚೇತನ್ ಹಾಗೂ ಅನಿರುದ್ಧ ಜೋಷಿ (54) ನಾಲ್ಕನೇ ವಿಕೆಟ್‌ಗೆ 83 ರನ್‌ಗಳ ಜೊತೆ-ಯಾಟವಾಡಿದರು. ಬೆಂಗಳೂರು ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 191 ರನ್ ಗಳಿಸಿತು. ಶಿವಮೊಗ್ಗ 8 ವಿಕೆಟ್‌ಗೆ 166 ರನ್ ಗಳಿಸಲಷ್ಟೇ ಶಕ್ತವಾಯಿತು.

ಎಐಎಫ್‌ಎಫ್ ಅಮಾನತು ತೆರವಿಗೆ ಕ್ರಮವಹಿಸಿ

ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚನೆ: ವಿಚಾರಣೆ ಆ.22ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮೇಲಿನ ಅಮಾನತು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸುಪ್ರೀಂಕೋರ್ಟ್ ಬುಧವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಅಮಾನತು ತೆರವಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಫಿಫಾ ಜತೆ ಮಾತುಕತೆ ನಡೆಸುತ್ತಿರುವು-ದರಿಂದ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಆ.22ಕ್ಕೆ ಮುಂದೂಡಿತು.

‘ಅನ್ಯರ ಅನಗತ್ಯ ಹಸ್ತಕ್ಷೇಪ’ದ ಕಾರಣ ಮುಂದಿಟ್ಟು, ಫುಟ್‌ಬಾಲ್ ಸಂಸ್ಥೆಗಳ ಅಂತರರಾಷ್ಟ್ರೀಯ ಒಕ್ಕೂಟವು (ಫಿಫಾ) ಮಂಗಳವಾರ ಎಐಎಫ್‌ಎಫ್‌ಅನ್ನು ಅಮಾನತು ಮಾಡಿತ್ತು.

ಈ ಬೆಳವಣಿಗೆಯನ್ನು ಸುಪ್ರೀಂಕೋರ್ಟ್ ಗಮನಕ್ಕೆ ತಂದಿದ್ದ ಸರ್ಕಾರ, ಎಐಎಫ್‌ಎಫ್‌ಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ತಕ್ಷಣವೇ ಕೈಗೆತ್ತಿಕೊ-ಳ್ಳುವಂತೆ ಮನವಿ ಮಾಡಿತ್ತು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎ.ಎಸ್.ಬೋಪಣ್ಣ ಮತ್ತು ಜೆ.ಬಿ.ಪಾರದೀವಾಲಾ ಅವರಿದ್ದ ಪೀಠವು ಬುಧವಾರ ಬೆಳಿಗ್ಗೆ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿತು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಮಹಿಳಾ ವಿಭಾಗದ 17 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯನ್ನು ಭಾರತದಲ್ಲೇ ಆಯೋಜಿಸುವ ಸಂಬಂಧ ಸರ್ಕಾರವು, ಫಿಫಾ ಜತೆ ಮಾತುಕತೆ ನಡೆಸುತ್ತಿದೆ’ ಎಂಬ ವಿಚಾರವನ್ನು ಪೀಠದ ಗಮನಕ್ಕೆ ತಂದರು.

‘ಸರ್ಕಾರದ ಪ್ರತಿನಿಧಿಗಳು ಮತ್ತು ಎಐಎಫ್‌ಎಫ್ ವ್ಯವಹಾರ ನೋಡಿ-ಕೊಳ್ಳುತ್ತಿರುವ ಆಡಳಿತ ಸಮಿತಿಯು (ಸಿಒಎ) ಫಿಫಾ ಪ್ರತಿನಿಧಿಗಳ ಜತೆ ಮಂಗಳವಾರ ಎರಡು ಸುತ್ತುಗಳ ಮಾತುಕತೆ ನಡೆಸಿದ್ದಾರೆ. ವಿಶ್ವಕಪ್ ಆತಿಥ್ಯಕ್ಕೆ ಸಂಬಂಧಿಸಿದ ಗೊಂದಲ ಬಗೆಹರಿಯುವ ವಿಶ್ವಾಸವಿದೆ. ಇನ್ನಷ್ಟು ಮಾತುಕತೆಯ ಬಳಿಕ ಒಮ್ಮತದ ತೀರ್ಮಾನ ಹೊರಬೀಳಬಹುದು. ಆದ್ದರಿಂದ ವಿಚಾರಣೆಯನ್ನು ಆ.22ರ ವರೆಗೆ ಮುಂದೂಡಿ’ ಎಂದು ಪೀಠವನ್ನು ಕೇಳಿಕೊಂಡರು.

ಅದಕ್ಕೆ ಪ್ರತಿಕ್ರಿಯಿಸಿದ ಪೀಠ, 17 ವರ್ಷದೊಳಗಿನ ವಿಶ್ವಕಪ್ ಟೂರ್ನಿಯು ಅತ್ಯಂತ ಪ್ರಮುಖ ಅಂತರರಾಷ್ಟ್ರೀಯ ಟೂರ್ನಿ ಆಗಿದೆ ಎಂದು ಅಭಿಪ್ರಾ-ಯಪಟ್ಟಿತು. ಕೂಟದ ಆಯೋಜನೆಗೆ ಉಂಟಾಗಿರುವ ಅಡ್ಡಿಯನ್ನು ದೂರಮಾಡಲು ಎಲ್ಲ ಕ್ರಮಕೈಗೊಳ್ಳು-ವಂತೆ ಸರ್ಕಾರಕ್ಕೆ ಸೂಚಿಸಿ ವಿಚಾರಣೆ ಮುಂದೂಡಿತು.

ವಿಶ್ವಕಪ್ ಟೂರ್ನಿಯನ್ನು ಅ.11 ರಿಂದ 30ರ ವರೆಗೆ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ ಎಐಎಫ್‌ಎ-ಫ್‌ಅನ್ನು ಅಮಾನತು ಮಾಡಿದ ಫಿಫಾ, ‘ವಿಶ್ವಕಪ್ ಟೂರ್ನಿಯನ್ನು ನಿಗದಿಯಂತೆ ಭಾರತದಲ್ಲಿ ನಡೆಸಲು ಸಾಧ್ಯವಿಲ್ಲ’ ಎಂದು ಹೇಳಿದೆ.

ತಾಷ್ಕೆಂಟ್‌ನಲ್ಲೇ ಉಳಿದ ಗೋಕುಲಂ ತಂಡ

ಎಎಫ್‌ಸಿ ಮಹಿಳಾ ಕ್ಲಬ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಉಜ್ಬೆಕಿಸ್ತಾನಕ್ಕೆ ತೆರಳಿರುವ ಗೋಕುಲಂ ಕೇರಳ ತಂಡ ತಾಷ್ಕೆಂಟ್‌ನಲ್ಲೇ ಉಳಿದುಕೊಂಡಿದೆ.


ಈ ತಂಡ ಕೇರಳದ ಕೋಯಿಕ್ಕೋಡ್‌ನಿಂದ ಆ.16ರ ಬೆಳಿಗ್ಗೆ ತಾಷ್ಕೆಂಟ್‌ಗೆ ಬಂದಿಳಿದಿದೆ. ಅದರ ಬೆನ್ನಲ್ಲೇ ಎಐಎಫ್‌ಎಫ್ ಅಮಾನತು ಆಗಿರುವ ಸುದ್ದಿ ತಂಡಕ್ಕೆ ಲಭಿಸಿದೆ. ಎಎಫ್‌ಸಿ ಕಪ್‌ನಲ್ಲಿ ಆಡುವ ಅವಕಾಶ ಗೋಕುಲಂ ತಂಡದ ಕೈತಪ್ಪಿದೆ.

ಆದರೂ ಅವಕಾಶ ಗಿಟ್ಟಿಸಲು ಪ್ರಯತ್ನ ಮುಂದುವರಿಸಿದ್ದು, ಈ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ಪ್ರಧಾನಿ ಕಚೇರಿ ಮತ್ತು ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಬುಧವಾರ ಮನವಿ ಮಾಡಿದೆ.

ಮನವಿಗೆ ಸ್ಪಂದಿಸಿದ ಕ್ರೀಡಾ ಸಚಿವಾಲಯದ ಅಧಿಕಾರಿಗಳು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಜತೆ ಮಾತುಕತೆ ನಡೆಸಿದ್ದಾರೆ. ಇದರ ಫಲವಾಗಿ ತಂಡಕ್ಕೆ ಇನ್ನೂ ಎರಡು ದಿನ ತಾಷ್ಕೆಂಟ್‌ನಲ್ಲಿ ಉಳಿದುಕೊಳ್ಳಲು ಅನುಮತಿ ಲಭಿಸಿದೆ. ಆದರೆ ಟೂರ್ನಿಯಲ್ಲಿ ಪಾಲ್ಗೊಳ್ಳುವ ಬಗ್ಗೆ ಎಎಫ್‌ಸಿ ಏನೂ ಹೇಳಿಲ್ಲ.

ಡುರಾಂಡ್ ಕಪ್: ಜಮ್ಷೆಡ್‌ಪುರ ಮಣಿಸಿದ ಬಿಎಫ್‌ಸಿ

ಸುನಿಲ್, ಕೃಷ್ಣ ಮೋಡಿ



ಸುನಿಲ್ ಚೆಟ್ರಿ (ಬಲ) ಗೋಲು ಗಳಿಸಲು ಮುನ್ನುಗ್ಗಿದರು

ಕೋಲ್ಕತ್ತ: ನಾಯಕ ಸುನಿಲ್ ಚೆಟ್ರಿ ಹಾಗೂ ರಾಯ್ ಕೃಷ್ಣ ಜೋಡಿ ಮೋಡಿ ಮಾಡಿತು. ಇವರಿಬ್ಬರ ಸೊಗಸಾದ ಆಟದ ಬಲದಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ 2–1ರಿಂದ ಜಮ್ಷೆಡ್‌ಪುರ ಎಫ್‌ಸಿ ತಂಡಕ್ಕೆ ಸೋಲುಣಿಸಿತು.

ಹೊಸ ಆಟಗಾರರೊಂದಿಗೆ ಕಣಕ್ಕಿಳಿದ ಬಿಎಫ್‌ಸಿಗೆ ಸುನಿಲ್ 23ನೇ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಪ್ರಬೀರ್ ದಾಸ್ ಅವರು ನೀಡಿದ ಪಾಸ್‌ನಲ್ಲಿ ನಾಯಕ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು

ರಾಯ್ ಕೃಷ್ಣ, 56ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

59ನೇ ನಿಮಿಷದಲ್ಲಿ ಬಿಎಫ್‌ಸಿಯ ಹೀರಾ ಮಂಡಲ್ ಹಳದಿ ಕಾರ್ಡ್ ಪಡೆದರು. ಹೀಗಾಗಿ ತಂಡವು 10 ಆಟಗಾರರೊಂದಿಗೆ ಆಡಬೇಕಾಯಿತು. ಇದರ ಲಾಭ ಪಡೆದ ಜಮ್ಷೆಡ್‌ಪುರ ತಂಡದ ರಿಷಿ, 61ನೇ ನಿಮಿಷದಲ್ಲಿ ಫ್ರೀಕಿಕ್‌ನಲ್ಲಿ ಗೋಲು ಗಳಿಸಿ ಹಿನ್ನಡೆಯನ್ನು 1–2ಕ್ಕೆ ತಗ್ಗಿಸಿದರು.

ಹೈಕೋರ್ಟ್ ಆದೇಶ: ಐಒಎ ಸಭೆ

ನವದೆಹಲಿ (ಪಿಟಿಐ): ಆಡಳಿತ ಸಮಿತಿಯನ್ನು (ಸಿಒಎ) ನೇಮಿಸಿ ದೆಹಲಿ ಹೈಕೋರ್ಟ್ ಹೊರಡಿಸಿದ ಆದೇಶದ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಭಾರತ ಒಲಿಂಪಿಕ್ ಸಮಿತಿ (ಐಒಎ) ಬುಧವಾರ ಸಭೆ ನಡೆಸಿತು.

ಆದರೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕೇ ಎಂಬ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಆಗಿಲ್ಲ.

ಐಒಎ ಕಾರ್ಯದರ್ಶಿ ರಾಜೀವ್ ಮೆಹ್ತಾ, ಖಜಾಂಚಿ ಆನಂದೇಶ್ವರ್ ಪಾಂಡೆ ಅವರು ಸಭೆಯಲ್ಲಿ ಪಾಲ್ಗೊಂಡರು. ಹಂಗಾಮಿ ಅಧ್ಯಕ್ಷ ಅನಿಲ್ ಖನ್ನಾ ವಿದೇಶದಲ್ಲಿದ್ದು, ವರ್ಚುವಲ್ ಆಗಿ ಭಾಗವಹಿಸಿದರು.

‘ಹೈಕೋರ್ಟ್ ಆದೇಶವನ್ನು ವಿವರವಾಗಿ ತಿಳಿದುಕೊಳ್ಳಲು ಬುಧವಾರ ಆಂತರಿಕ ಸಭೆ ನಡೆಸಿದ್ದೇವೆ. ಗುರುವಾರ ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದು, ಸುಪ್ರೀಂ ಕೋರ್ಟ್ ಮೊರೆಹೋಗುವ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗು-ವುದು’ ಎಂದು ರಾಜೀವ್ ಮೆಹ್ತಾ ತಿಳಿಸಿದರು.



ಮೈಸೂರು ಪ್ಯಾಂಥರ್ಸ್ ತಂಡದ ತಾನ್ಯಾ ಹೇಮಂತ್ ಆಟ– ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್: ಮೈಸೂರು ತಂಡ ಪರಾಭವ

ಸೂಪರ್ ಲೀಗ್‌ಗೆ ಫಾಲ್ಕನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭರ್ಜರಿ ಆಟವಾಡಿದ ಮಲ್ನಾಡ್ ಫಾಲ್ಕನ್ಸ್ ತಂಡವು ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯಲ್ಲಿ ಸೂಪರ್ ಲೀಗ್ ಹಂತಕ್ಕೆ ಅರ್ಹತೆ ಖಚಿತಪಡಿಸಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ (ಕೆಬಿಎ) ಅಂಗಣದಲ್ಲಿ ಬುಧವಾರ ನಡೆದ ಬಿ ಗುಂಪಿನ ಹಣಾಹಣಿಯಲ್ಲಿ ಮಲ್ನಾಡ್ 6–1ರಿಂದ ಮೈಸೂರು ಪ್ಯಾಂಥರ್ಸ್ ಎದುರು ಗೆದ್ದಿತು. ಇದರೊಂದಿಗೆ 15 ಪಾಯಿಂಟ್ಸ್ ಗಳಿಸಿತು.

ಮಹಿಳಾ ಸಿಂಗಲ್ಸ್ ಹಣಾಹಣಿಯಲ್ಲಿ ಮಲ್ನಾಡ್ ತಂಡದ ದೃತಿ ಯತೀಶ್ 8-15, 15-11, 5-15ರಿಂದ ತಾನ್ಯಾ ಹೇಮಂತ್ ಎದುರು ಎಡವಿದರು. ಇದರೊಂದಿಗೆ ಮೈಸೂರು ಆರಂಭದಲ್ಲೇ ಮುನ್ನಡೆ ಗಳಿಸಿತು.

ಆದರೆ ಮಿಥುನ್ ಮಂಜುನಾಥ್– ಪೃಥ್ವಿ ಕೆ. ರಾಯ್ ಪುರುಷರ ಡಬಲ್ಸ್ ‘ಟ್ರಂಪ್‘ ಪಂದ್ಯದಲ್ಲಿ ಜಯ ಗಳಿಸುವ ಮೂಲಕ ಮಲ್ನಾಡ್‌ಗೆ 2–1ರ ಮುನ್ನಡೆ ತಂದುಕೊಟ್ಟರು. ಈ ಜೋಡಿಯು 15-12, 15-12ರಿಂದ ಬಿ.ಎಂ.ರಾಹುಲ್– ಚಿರಂಜೀವಿ ರೆಡ್ಡಿ ಅವರನ್ನು ಮಣಿಸಿತು. ಸಿಂಗಲ್ಸ್‌ನಲ್ಲಿ ಶಮಂತ್ ರಾವ್ ಕಿದಿಯೂರ 15-11, 15-14ರಿಂದ ರೋಹಿತ್ ಮರಿಸ್ವಾಮಿ ಅವರಿಗೆ ಆಘಾತ ನೀಡಿದಾಗ ಮಲ್ನಾಡ್ ತಂಡದ ಮುನ್ನಡೆ 3–1ಕ್ಕೆ ತಲುಪಿತು.

ಮಿಶ್ರ ಡಬಲ್ಸ್‌ನಲ್ಲಿ ಮಲ್ನಾಡ್ ತಂಡದ ಅರವಿಂದ್ ಕೊಂಗಾರ–ದೃತಿ ವೆಂಕಟೇಶ್ 2-15, 8-15ರಿಂದ ತಾನ್ಯಾ– ಕಿರಣ್ ಕುಮಾರ್ ಜೋಡಿಗೆ ಸೋತರು.

ಆದರೆ ‘ಟ್ರಂಪ್‘ ಪಂದ್ಯವಾಗಿ ಘೋಷಿಸಲ್ಪಟ್ಟ ‘ಸೂಪರ್‘ ಪಂದ್ಯದಲ್ಲಿ ಮಿಥುನ್ ಮಂಜುನಾಥ್, ಪೃಥ್ವಿ ಮತ್ತು ಶಮಂತ್ 21-15ರಿಂದ ರಾಹುಲ್, ಚಿರಂಜೀವಿ ಮತ್ತು ರೋಹಿತ್ ಅವರನ್ನು ಮಣಿಸಿ ತಿರುಗೇಟು ನೀಡಿದರು. ಗೆಲುವಿನ ಸಂಭ್ರಮದಲ್ಲಿ ಮಿಂದೆದ್ದರು.

ದಿನದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಲಯನ್ಸ್ ತಂಡವು 4–3ರಿಂದ ಕೆಜಿಎಫ್ ವೊಲ್ವ್ಸ್ ಎದುರು ಜಯ ಸಾಧಿಸಿತು.

ಅ.9ರ ಒಳಗಾಗಿ ಹಾಕಿ ಇಂಡಿಯಾ ಚುನಾವಣೆ

ನವದೆಹಲಿ (ಪಿಟಿಐ): ‘ಹಾಕಿ ಇಂಡಿಯಾದ (ಎಚ್‌ಐ) ಚುನಾವಣೆ ಪ್ರಕ್ರಿಯೆ ಅ.9ರ ಒಳಗಾಗಿ ಪೂರ್ಣ-ಗೊಳ್ಳಲಿದೆ’ ಎಂದು ದೇಶದಲ್ಲಿ ಹಾಕಿ ಕ್ರೀಡೆಯ ವ್ಯವಹಾರ ನೋಡಿಕೊಳ್ಳುತ್ತಿ-ರುವ ಆಡಳಿತ ಸಮಿತಿ (ಸಿಒಎ) ಹೇಳಿದೆ.

ಹಾಕಿ ಇಂಡಿಯಾದ ಪರಿಷ್ಕೃತ ನಿಯಮಾವಳಿಗಳ ಮೊದಲ ಕರಡನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ಗೆ (ಎಫ್‌ಐಎಚ್) ಬುಧವಾರ ಸಲ್ಲಿಸಲಾಯಿತು.

ಈ ವೇಳೆ ಸಿಒಎ ಮತ್ತು ಎಫ್‌ಐಎಚ್ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದು, ‘ನಿಯಮಾವಳಿಯ ಅಂತಿಮ ಕರಡು ಮುಂದಿನ 10 ದಿನಗಳ ಒಳಗಾಗಿ ಸ್ವಿಟ್ಜರ್‌ಲೆಂಡ್‌ನ ಲಾಸನ್‌ನಲ್ಲಿರುವ ಎಫ್‌ಐಎಚ್ ಕೇಂದ್ರ ಕಚೇರಿಗೆ ಸಲ್ಲಿಸ-ಲಾಗುವುದು’ ಎಂದು ತಿಳಿಸಿದೆ.

‘ದೆಹಲಿ ಹೈಕೋರ್ಟ್ ನಿರ್ದೇಶನದಂತೆ ಸಿದ್ಧಪಡಿಸಿರುವ ಪರಿಷ್ಕೃತ ನಿಯಮಾವಳಿಯ ಮೊದಲ ಕರಡು ಬುಧವಾರ ಸಲ್ಲಿಕೆಯಾಗಿದೆ. ಎಚ್‌ಐ ಚುನಾವಣೆ ಪ್ರಕ್ರಿಯೆಯನ್ನು ಅ.9ರ ಒಳಗಾಗಿ ಪೂರ್ಣಗೊಳಿಸಲು ಒಮ್ಮತದಿಂದ ನಿರ್ಧರಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದೆ.

ಹಾಕಿ ಇಂಡಿಯಾವು ಎಫ್‌ಐಎಚ್ ನಿಂದ ಅಮಾನತಿಗೆ ಒಳಗಾಗುವುದ-ನ್ನು ತಪ್ಪಿಸುವ ನಿಟ್ಟಿನಲ್ಲಿ ಎಫ್‌ಐಎಚ್‌ನ ಇಬ್ಬರು ಸದಸ್ಯರ ನಿಯೋಗವು ಸಿಒಎ ಜತೆ ಮಾತುಕತೆಗೆ ನವದೆಹಲಿಗೆ ಭೇಟಿ ನೀಡಿದೆ. ಎಫ್‌ಐಎಚ್ ಹಂಗಾಮಿ ಅಧ್ಯಕ್ಷ ಸೈಫ್ ಅಹ್ಮದ್, ಸಿಇಒ ಥಿಯರಿ ವೇಲ್ ಹಾಗೂ ಸಿಒಎ ಸದಸ್ಯರಾದ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಆರ್.ದವೆ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್. ವೈ ಖುರೇಷಿ ಮತ್ತು ಒಲಿಂಪಿಯನ್ ಆಟಗಾರ ಜಫರ್ ಇಕ್ಬಾಲ್ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಟೆಸ್ಟ್: ಇಂಗ್ಲೆಂಡ್‌ಗೆ ಆರಂಭಿಕ ಆಘಾತ

ಲಂಡನ್ (ಎಎಫ್‌ಪಿ): ಕಗಿಸೊ ರಬಾಡ (36ಕ್ಕೆ 2) ಮತ್ತು ಎನ್ರಿಚ್ ನಾರ್ಕಿಯ (43ಕ್ಕೆ 3) ಅವರ ದಾಳಿಗೆ ನಲುಗಿದ ಇಂಗ್ಲೆಂಡ್ ತಂಡ, ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ಆರಂಭಿಕ ಆಘಾತ ಅನುಭವಿಸಿದೆ.

ಲಾರ್ಡ್ಸ್ ಮೈದಾನದಲ್ಲಿ ಬುಧವಾರ ಆರಂಭವಾದ ಪಂದ್ಯದ ಮೊದಲ ದಿನದಾಟ ಮಳೆಯಿಂದಾಗ ಬೇಗನೇ ಕೊನೆಗೊಂಡಾಗ ಆತಿಥೇಯ ತಂಡ 32 ಓವರ್‌ಗಳಲ್ಲಿ 6 ವಿಕೆಟ್‌ಗೆ 116 ರನ್ ಗಳಿಸಿತ್ತು.

ಒಲಿ ಪೋಪ್ (ಬ್ಯಾಟಿಂಗ್ 61) ಅವರನ್ನು ಹೊರತುಪಡಿಸಿ, ಇಂಗ್ಲೆಂಡ್‌ನ ಬ್ಯಾಟರ್‌ಗಳು ಎದುರಾಳಿ ಬೌಲಿಂಗ್ ದಾಳಿಗೆ ನಲುಗಿದರು. ಪೋಪ್ ಮತ್ತು ನಾಯಕ ಬೆನ್ ಸ್ಟೋಕ್ಸ್ (20) ಹೊರತುಪಡಿಸಿ ಇತರ ಯಾರೂ ಎರಡಂಕಿಯ ಮೊತ್ತ ಗಳಿಸಲಿಲ್ಲ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 32 ಓವರ್‌ಗಳಲ್ಲಿ 6ಕ್ಕೆ 116 (ಒಲಿ ಪೋಪ್ ಬ್ಯಾಟಿಂಗ್ 61, ಬೆನ್ ಸ್ಟೋಕ್ಸ್ 20, ಕಗಿಸೊ ರಬಾಡ 36ಕ್ಕೆ 2, ಎನ್ರಿಚ್ ನಾರ್ಕಿಯ 43ಕ್ಕೆ 3, ಮಾರ್ಕೊ ಜೆನ್ಸೆನ್ 18ಕ್ಕೆ 1)

ಸಂಕ್ಷಿಪ್ತ ಸುದ್ದಿ

ಕೆಕೆಆರ್‌ಗೆ ಪಂಡಿತ್ ತರಬೇತುದಾರ



ಚಂದ್ರಕಾಂತ್ ಪಂಡಿತ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ತಂಡವು ಚಂದ್ರಕಾಂತ್ ಪಂಡಿತ್ ಅವರನ್ನು ಕೋಚ್ ಆಗಿ ನೇಮಿಸಿಕೊಂಡಿದೆ.

ಈ ಹಿಂದೆ ಕೋಚ್ ಆಗಿದ್ದ ಬ್ರೆಂಡನ್ ಮೆಕಲಂ, ಇಂಗ್ಲೆಂಡ್ ಟೆಸ್ಟ್ ತಂಡಕ್ಕೆ ನೇಮಕವಾದ ಕಾರಣ ಅವರ ಸ್ಥಾನಕ್ಕೆ ಚಂದ್ರಕಾಂತ್ ಅವರನ್ನು ನೇಮಿಸಲಾಗಿದೆ.

ಚಂದ್ರಕಾಂತ್ ತರಬೇತಿಯಲ್ಲಿ ಇತ್ತೀಚೆಗೆ ಮಧ್ಯಪ್ರದೇಶ ತಂಡವು ರಣಜಿ ಟ್ರೋಫಿ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಕುಸ್ತಿ: ರವಿಗೆ ರಷ್ಯಾದಲ್ಲಿ ತರಬೇತಿ



ರವಿ ದಹಿಯಾ

ನವದೆಹಲಿ (ಪಿಟಿಐ): ಭಾರತದ ಕುಸ್ತಿಪಟು ರವಿ ದಹಿಯಾ ಅವರು ವಿಶ್ವ ಚಾಂಪಿಯನ್ ಷಿಪ್‌ಗೂ ಮುನ್ನ ರಷ್ಯಾದಲ್ಲಿ 29 ದಿನಗಳ ತರಬೇತಿ ಪಡೆಯಲಿದ್ದಾರೆ.

ಬರ್ಮಿಂಗ್ ಹ್ಯಾಮ್‌ನಲ್ಲಿ ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ರವಿ ಚಿನ್ನದ ಪದಕ ಜಯಿಸಿದ್ದರು.

‘ರವಿ ದಹಿಯಾ ಅವರು ತಮ್ಮ ಕೋಚ್ ಅರುಣ್ ಕುಮಾರ್, ಸ್ಪಾರಿಂಗ್ ಜೊತೆಗಾರ ಸಾಹಿಲ್ ಮತ್ತು ಫಿಸಿಯೊ ಮುನೀಶ್ ಕುಮಾರ್ ಅವರೊಂದಿಗೆ ಬುಧವಾರ ರಷ್ಯಾದ ವ್ಲಾಡಿಕವ್ಕಾಜ್‌ಗೆ ತೆರಳಿದ್ದಾರೆ‘ ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತಿಳಿಸಿದೆ.

ಬೆಂಗಳೂರು ರೇಸ್

ಲಾ ರೀನ ಗೆಲ್ಲುವ ನಿರೀಕ್ಷೆ

ಕ್ವಾಸರ್ ಸ್ಟೇಕ್ಸ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಲಾ ರೀನ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಸ್ಲಿಂಗ್ ಶಾಟ್ 1, ದಿ ಒಮೆಗಾ ಮ್ಯಾನ್ 2, ಸದರನ್ ಅರಿಸ್ಟೋಕ್ರಾಟ್ 3
2ನೇ ರೇಸ್: ಬೆನೆಡಿಕ್ಷನ್ 1, ಸ್ಟ್ರೈಕಿಂಗ್ ಪಾಯಿಂಟ್ 4, ಓಶಿಯನ್ ಡ್ಯೂನ್ಸ್ 2
3ನೇ ರೇಸ್: ಸೀಝ್ ಕರೇಜಿಯಸ್ 1, ಸ್ಪ್ಲೆಂಡಿಡೊ 2, ಸ್ಟಾರ್ಮ್ ವಾಚ್ 7
4ನೇ ರೇಸ್: ಪೆಯೊ 2, ಇನ್ ಎ ಬ್ರೀಝ್ 5, ಡೊಗ್ಲಾಸ್ 7
5ನೇ ರೇಸ್: ಡೊಮಿಂಗೊ 2, ಏಂಜಲ್ ಬ್ಲಿಸ್ 7, ಕುಲ್ಸಮ್ 8
6ನೇ ರೇಸ್: ಲಾ ರೀನ 2, ಟ್ರಾಂಕ್ವಿಲೊ 4, ಪೆರಿಡಾಟ್ 7
7ನೇ ರೇಸ್: ಮಾರ್ಕ್ ಒನ್ 5, ಡಿವೈನ್ ಬ್ಲೆಸ್ಸಿಂಗ್ಸ್ 3, ಫ್ಲೈಯಿಂಗ್ ಕ್ವೆಸ್ಟ್ 4
8ನೇ ರೇಸ್: ಸೂಪರ್ ರುಫಿಯನ್ 3, ಸ್ಪೀಡ್ ಸೆವೆನ್ 5, ಸದರನ್ ವಾರಿಯರ್ 2

ಉತ್ತಮ ಬೆಟ್: ಬೆನೆಡಿಕ್ಷನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8


ರಾಹುಲ್‌ಗೆ 'ಫಿಟ್‌ನೆಸ್ ಪರೀಕ್ಷೆ'

ಕ್ರಿಕೆಟ್: ಭಾರತ– ಜಿಂಬಾಬ್ವೆ ನಡುವಣ ಮೊದಲ ಏಕದಿನ ಪಂದ್ಯ ಇಂದು

ಹರಾರೆ (ಪಿಟಿಐ): ಗಾಯದಿಂದ ಚೇತರಿಸಿಕೊಂಡ ಬಳಿಕ ಇದೇ ಮೊದಲ ಬಾರಿ ಕಣಕ್ಕಿಳಿಯಲಿರುವ ಬ್ಯಾಟರ್ ಕೆ.ಎಲ್.ರಾಹುಲ್ ಅವರಿಗೆ ಜಿಂಬಾಬ್ವೆ ವಿರುದ್ಧದ ಮೊದಲ ಏಕದಿನ ಕ್ರಿಕೆಟ್ ಪಂದ್ಯ ಫಿಟ್‌ನೆಸ್ 'ಪರೀಕ್ಷೆ' ಎನಿಸಿಕೊಂಡಿದೆ.

ಭಾರತ– ಜಿಂಬಾಬ್ವೆ ನಡುವಿನ ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿ ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿದೆ. ರೋಹಿತ್ ಶರ್ಮ ಅನುಪಸ್ಥಿತಿಯಲ್ಲಿ ತಂಡವನ್ನು ರಾಹುಲ್ ಮುನ್ನಡೆಸುತ್ತಿದ್ದಾರೆ.

ಸರಣಿಯಲ್ಲಿ ಶುಭಾರಂಭ ಮಾಡುವ ಜತೆಯಲ್ಲೇ, ಭರ್ಜರಿ ಆಟವಾಡಿ ತಮ್ಮ ಫಾರ್ಮ್ ಹಾಗೂ ಫಿಟ್‌ನೆಸ್ ತೋರಿಸುವ ಸವಾಲು ಅವರ ಮೇಲಿದೆ. ಹರ್ನಿಯಾ ಶಸ್ತ್ರಚಿಕಿತ್ಸೆ ಮತ್ತು ಗಾಯದ ಕಾರಣದಿಂದಾಗಿ ಕರ್ನಾಟಕದ ಆಟಗಾರ ಎರಡೂವರೆ ತಿಂಗಳು ಅಂಗಳದಿಂದ ದೂರವುಳಿದಿದ್ದರು.



ಶುಭಮನ್

ಏಷ್ಯಾಕಪ್ ಮತ್ತು ಟಿ20 ವಿಶ್ವಕಪ್ ಮುಂದಿರುವ ಕಾರಣ ಅಲ್ಪ ಅವಧಿಯಲ್ಲಿ ಫಾರ್ಮ್ ಕಂಡುಕೊಳ್ಳಬೇಕಾದ ಅನಿವಾರ್ಯತೆ ಅವರಿಗೆ ಎದುರಾಗಿದೆ.

ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್‌ಗೆ ಯೋಗ್ಯವಾಗಿದ್ದು, ಭಾರತದ ಬ್ಯಾಟರ್‌ಗಳಿಗೆ ದೊಡ್ಡ ಮೊತ್ತ ಪೇರಿಸುವುದು ಕಷ್ಟವೆನಿಸದು. ಜಿಂಬಾಬ್ವೆ ತಂಡ, ಬಾಂಗ್ಲಾದೇಶದ ವಿರುದ್ಧ ಇತ್ತೀಚೆಗೆ ನಡೆದ ಸರಣಿಯ ಪಂದ್ಯದಲ್ಲಿ 300ಕ್ಕೂ ಅಧಿಕ ರನ್‌ಗಳನ್ನು ಬೆನ್ನಟ್ಟಿ ಗೆಲುವು ಪಡೆದಿತ್ತು.

ರಾಹುಲ್ ಅಲ್ಲದೆ ಶಿಖರ್ ಧವನ್, ಶುಭಮನ್ ಗಿಲ್, ದೀಪಕ್ ಹೂಡಾ ಮತ್ತು ಸಂಜು ಸ್ಯಾಮ್ಸನ್ ಅವರನ್ನೊಳಗೊಂಡ ಭಾರತದ ಬ್ಯಾಟಿಂಗ್ ವಿಭಾಗವು ಜಿಂಬಾಬ್ವೆ ಬೌಲರ್‌ಗಳ ಮೇಲೆ ಸವಾರಿ ಮಾಡಲು ಸಜ್ಜಾಗಿದೆ.



ಆರು ತಿಂಗಳ ಬಳಿಕ ತಂಡಕ್ಕೆ ಮರಳಿರುವ ಬೌಲರ್ ದೀಪಕ್ ಚಾಹರ್, ಹಳೆಯ ಲಯಕ್ಕೆ ಮರಳುತ್ತಿರುವ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೂ ಈ ಸರಣಿ ಮಹತ್ವದ್ದಾಗಿದೆ.

ಪವರ್‌ಪ್ಲೇ ಅವಧಿಯಲ್ಲಿ ಸ್ವಿಂಗ್ ಬೌಲಿಂಗ್ ಮಾಡುವ ಮತ್ತು ಕೊನೆಯ ಓವರ್‌ಗಳಲ್ಲಿ ಬೀಸಾಟವಾಡುವ ಸಾಮರ್ಥ್ಯ ಹೊಂದಿರುವ ಚಾಹರ್, ತಂಡದಲ್ಲಿ ಸ್ಥಾನ ಗಟ್ಟಿಗೊಳಿಸುವ ಪ್ರಯತ್ನದಲ್ಲಿದ್ದಾರೆ.

ರೆಗಿಸ್ ಚಕಾಬ್ವಾ ನೇತೃತ್ವದ ಜಿಂಬಾಬ್ವೆ ತಂಡದಲ್ಲಿ ಯುವ ಆಟಗಾರರೇ ಹೆಚ್ಚು ಇದ್ದಾರೆ. ಬಾಂಗ್ಲಾ ಎದುರಿನ ಸರಣಿ ಗೆಲುವು ಆ ತಂಡದ ಆಟಗಾರರಲ್ಲಿ ಆತ್ಮವಿಶ್ವಾಸ ತುಂಬಿದೆ.



ಗುಜರಾತ್ ಮತ್ತು ಮುಂಬೈ ಆಟಗಾರರ ಪೈಪೋಟಿ– ಪಿಟಿಐ ಚಿತ್ರ

ಕೊಕ್ಕೊ: ಗುಜರಾತ್ 'ಹ್ಯಾಟ್ರಿಕ್'

ಪುಣೆ (ಪಿಟಿಐ): ಗುಜರಾತ್ ಜೈಂಟ್ಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಹ್ಯಾಟ್ರಿಕ್ ಜಯ ಸಂಪಾದಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಆ ತಂಡವು 66–48ರಿಂದ ಮುಂಬೈ ಖಿಲಾಡೀಸ್‌ಗೆ ಸೋಲುಣಿಸಿತು.

ಮುಂಬೈ ವಿರುದ್ಧ ಗುಜರಾತ್‌ಗೆ ಇದು ಸತತ ಎರಡನೇ ಜಯ. ಲೀಗ್‌ನ ಮೊದಲ ಹಣಾಹಣಿಯಲ್ಲಿ 25 ಪಾಯಿಂಟ್ಸ್‌ನಿಂದ ಗೆದ್ದಿತ್ತು.

ದಾಳಿ ವಿಭಾಗದಲ್ಲಿ ಗುಜರಾತ್ ತಂಡದ ನಾಯಕ ರಂಜನ್ ಶೆಟ್ಟಿ ಆರು ಪಾಯಿಂಟ್ಸ್ ಗಳಿಸಿದರು. ವಿನಾಯಕ್ ಪೊಕರ್ದೆ ಮತ್ತು ನೀಲೇಶ್ ಪಾಟೀಲ್ ಕ್ರಮವಾಗಿ ಎಂಟು ಮತ್ತು ಏಳು ಪಾಯಿಂಟ್ಸ್ ಗಳಿಸಿದರು. ಮುಂಬೈ ತಂಡದ ಧ್ರುವೇಶ್ (11) ಮಿಂಚಿದರು.

ಇನ್ನೊಂದು ಪಂದ್ಯದಲ್ಲಿ ಚೆನ್ನೈ ಕ್ವಿಕ್ ಗನ್ಸ್ 53–46ರಿಂದ ತೆಲುಗು ಯೋಧಾಸ್‌ಗೆ ಸೋಲುಣಿಸಿತು.

ಕ್ರಿಕೆಟ್: 5 ವರ್ಷಗಳಲ್ಲಿ ತಂಡಕ್ಕೆ ಒಟ್ಟು 141 ಪಂದ್ಯಗಳು

38 ಟೆಸ್ಟ್ ಆಡಲಿರುವ ಭಾರತ

ನವದೆಹಲಿ (ಪಿಟಿಐ): ಭಾರತ ಪುರುಷರ ಕ್ರಿಕೆಟ್ ತಂಡವು ಮುಂದಿನ ಐದು ವರ್ಷಗಳ ಅವಧಿಯಲ್ಲಿ 141 ದ್ವಿಪಕ್ಷೀಯ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಫ್ಯೂಚರ್ ಟೂರ್ಸ್ ಆ್ಯಂಡ್ ಪ್ರೋಗ್ರಾಮ್ (ಎಫ್‌ಟಿಪಿ) ತಿಳಿಸಿದೆ.

2023ರ ಮೇನಿಂದ 2027ರ ಏಪ್ರಿಲ್‌ವರೆಗಿನ ಪಂದ್ಯಗಳ ಸಂಖ್ಯೆಯನ್ನು ಐಸಿಸಿ ಬುಧವಾರ ಪ್ರಕಟಿಸಿದ್ದು, ಭಾರತ ತಂಡವು 38 ಟೆಸ್ಟ್, 42 ಏಕದಿನ ಮತ್ತು 61 ಟಿ20 ಪಂದ್ಯಗಳಲ್ಲಿ ಕಣಕ್ಕಿಳಿಯಲಿದೆ. ಆದರೆ ಈ ಅವಧಿಯಲ್ಲಿ ರಾಜಕೀಯ ಕಾರಣಗಳ ಹಿನ್ನೆಲೆಯಲ್ಲಿ ಪಾಕಿಸ್ತಾನದ ಎದುರು ಸರಣಿ ಆಡುವುದಿಲ್ಲ.

ಏಕದಿನ ಸರಣಿಯ ಪಂದ್ಯಗಳು ಐದರ ಬದಲಾಗಿ ಮೂರಕ್ಕೆ ಸೀಮಿತಗೊಳ್ಳಬಹುದು.

ಐಸಿಸಿ ಸದಸ್ಯತ್ವ ಹೊಂದಿರುವ 12 ತಂಡಗಳು ಒಟ್ಟು 777 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಲಿವೆ. ಅದರಲ್ಲಿ 173 ಟೆಸ್ಟ್, 281 ಏಕದಿನ ಮತ್ತು 323 ಟಿ20 ಪಂದ್ಯಗಳು ಸೇರಿವೆ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಎರಡು ಆವೃತ್ತಿಗಳು, ಐಸಿಸಿಯ ಹಲವು ಟೂರ್ನಿಗಳು, ದ್ವಿಪಕ್ಷೀಯ ಮತ್ತು ತ್ರಿಕೋನ ಸರಣಿಗಳು ನಡೆಯಲಿವೆ.

ಬಾರ್ಡರ್–ಗಾವಸ್ಕರ್ ಟ್ರೋಫಿಗೆ ಐದು ಪಂದ್ಯಗಳು: ಭಾರತ ತಂಡವು ಆಸ್ಟ್ರೇಲಿಯಾ ಎದುರು ಆಡುವ ಸಾಂಪ್ರದಾಯಿಕ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಇನ್ನು ನಾಲ್ಕರ ಬದಲಾಗಿ ಐದು ಪಂದ್ಯಗಳು ನಡೆಯಲಿವೆ.

65 ಪಂದ್ಯ ಆಡಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡ: ಭಾರತ ಮಹಿಳಾ ತಂಡವು ಎಫ್‌ಟಿಪಿ ಪ್ರಕಾರ ಮೂರು ವರ್ಷಗಳ ಅವಧಿಯಲ್ಲಿ 65 ಪಂದ್ಯಗಳನ್ನು ಆಡಲಿದೆ.

ಈ ಎಫ್‌ಟಿಪಿ ಮೇ 2022ರಿಂದ ಏಪ್ರಿಲ್ 2025ರ ಅವಧಿಯನ್ನು ಹೊಂದಿದೆ. ಐಸಿಸಿ ಮಂಗಳವಾರ ಈ ಕುರಿತು ಪ್ರಕಟಿಸಿದ್ದು, ಮೂರು ವರ್ಷಗಳ ಅವಧಿಯಲ್ಲಿ ಒಟ್ಟು 301 (ಏಳು ಟೆಸ್ಟ್, 135 ಏಕದಿನ ಮತ್ತು 159 ಟ್ವೆಂಟಿ–20) ಪಂದ್ಯಗಳು ಇರಲಿವೆ.

ಟೇಕ್ವಾಂಡೊ: ವೇದಾಂತಗೆ ಕಂಚಿನ ಪದಕ

ಬೆಂಗಳೂರು: ಕರ್ನಾಟಕದ ವೇದಾಂತ ಗಲಗಲಿ, ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಇತ್ತೀಚೆಗೆ ನಡೆದ ಅಂತರರಾಷ್ಟ್ರೀಯ ಮುಕ್ತ ಟೇಕ್ವಾಂಡೊ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾನೆ.



ವೇದಾಂತ ಗಲಗಲಿ

ಹುಬ್ಬಳ್ಳಿ ಮೂಲದ ವೇದಾಂತ ಸದ್ಯ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. 9ರಿಂದ 11 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧಿಸಿದ್ದ ವೇದಾಂತ್‌ಗೆ ಪದಕ ಒಲಿದಿದೆ.

ಫುಟ್‌ಬಾಲ್: ಫೈನಲ್‌ಗೆ ಕಿಕ್‌ಸ್ಟಾರ್ಟ್, ಈಗಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ಮತ್ತು ಬೆಂಗಳೂರು ಈಗಲ್ಸ್ ಎಫ್‌ಸಿ ತಂಡಗಳು ಸಿ.ಪುಟ್ಟಯ್ಯ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಬಿಡಿಎಫ್‌ಎ ಫುಟ್‌ಬಾಲ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿವೆ.

ಬುಧವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 2–1ರಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಅಭಿಷೇಕ್ ಎಸ್. 53ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇನ್ನೊಂದು ಗೋಲು ಎದುರಾಳಿ ತಂಡದ ದೀಪಕ್ ಪಂತ್ (47ನೇ ನಿ.) ಅವರಿಂದ 'ಉಡುಗೊರೆ' ಯಾಗಿ ಬಂತು.

ಎಎಸ್‌ಸಿ ಪರ ವಾಹೆಂಗ್ ಬಮ್ಮಿ ರಾಜ್ 88ನೇ ನಿಮಿಷದಲ್ಲಿ ಗೋಲು ಗಳಿಸಿ ತಂಡದ ಹಿನ್ನಡೆಯನ್ನು ತಗ್ಗಿಸಲು ಮಾತ್ರ ಯಶಸ್ವಿಯಾದರು.

ಸೆಮಿಫೈನಲ್‌ನ ಇನ್ನೊಂದು ಹಣಾಹಣಿಯಲ್ಲಿ ಈಗಲ್ಸ್, ಪೆನಾಲ್ಟಿ ಶೂಟೌಟ್‌ನಲ್ಲಿ 4–2ರಿಂದ ಬಿಎಫ್‌ಸಿ ಎದುರು ಗೆದ್ದಿತು.

ಫೈನಲ್ ಪಂದ್ಯವು ಕಿಕ್‌ಸ್ಟಾರ್ಟ್ ಮತ್ತು ಈಗಲ್ಸ್ ನಡುವೆ ಶುಕ್ರವಾರ ನಡೆಯಲಿದೆ.



ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಅಭಿಷೇಕ್ ಗೋಲು ಗಳಿಸಿ ಸಂಭ್ರಮಿಸಿದರು– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.



ಪ್ರಗ್ನಾನಂದ

ಚೆಸ್: ಪ್ರಗ್ನಾನಂದಗೆ ಎರಡನೇ ಜಯ

ಮಿಯಾಮಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಅವರು ಇಲ್ಲಿ ನಡೆಯುತ್ತಿರುವ ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್ನಿಯಲ್ಲಿ ಎರಡನೇ ಜಯ ದಾಖಲಿಸಿದ್ದಾರೆ.

ಬುಧವಾರ ಎರಡನೇ ಸುತ್ತಿನ ಪಂದ್ಯದಲ್ಲಿ ಪ್ರಗ್ನಾನಂದ 2.5-1.5ರಿಂದ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರನ್ನು ಮಣಿಸಿದರು. ಗಿರಿ ಅವರಿಗೆ ಇದು ಸತತ ಎರಡನೇ ಸೋಲು.

ಎರಡು ಗೆಲುವಿನ ಬಳಿಕ ಪ್ರಗ್ನಾನಂದ ಅವರ ಬಳಿ ಸದ್ಯ ಆರು ಪಾಯಿಂಟ್‌ಗಳಿವೆ. ಮೂರನೇ ಸುತ್ತಿನಲ್ಲಿ ಅವರು ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಎದುರಿಸುವರು.